ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು

ಸಾಧನೆ

ಸಂಪುಟ 26 ಸಂಚಿಕೆ 2

ಏಪ್ರಿಲ್-ಜೂನ್ 1997

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SAADHANE : Kannada Quarterly of the Bangalore University, Bangalore . Vol. No. 26, No.2, April - June 1997, Pp 116 + vi

ವಾರ್ಷಿಕ ಚಂದಾ : ರೂ. ೧೫ - ೦೦
ವಿದ್ಯಾರ್ಥಿಗಳಿಗೆ ರೂ. ೧೦ - ೦೦ (ದೃಢೀಕರಣ ಪತ್ರವನ್ನು ಕಳುಹಿಸಬೇಕು)
ಆಜೀವ ಸದಸ್ಯತ್ವ ರೂ.. ೧೫೦- ೦೦

ಪ್ರಕಾಶಕರು :
ಹೆಚ್. ಆಂಜನಪ್ಪ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - ೫೬೦ ೦೫೬

ಮುದ್ರಕರು :
ಎಸ್.ಎಂ. ಹೊನ್ನಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ)
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ
ಬೆಂಗಳೂರು - ೫೬೦ ೦೫೬

ಪರಿವಿಡಿ

...

ಋತುಗಾನ

- ಟಿ. ಯಲ್ಲಪ್ಪ

ನೆಲವೆಲ್ಲ ಹಸಿರಾಗಿ
ಉಸಿರೆಲ್ಲಾ ಹೂ ವಾಸನೆಯೇ
ಬರೇ ಪರಾಗದ ಅನುಭವಗಳೇ ಗೆಳೆಯ
ದುಂಬಿಗಳ ತಕ್ಕೆಗಾರ್ಸೆಸಿ ಮನ
ವಸುಂಧರೆಯ ನೆನಪೇ ಋತುಗಾನ ಪ್ರಿಯ

ಕುಂಕುಮದ ಓಕುಳಿಯೇ
ರಾಗವೈಭವದ ಮುನ್ನ ದಿನವಾಗಿ
ಮಧುಪವನದ ತುಂಬಾ
ರಸರಾತ್ರಿಯ ರತಿಲೀಲೆಗಳಲ್ಲೇ
ಭ್ರಮರ ಸಂಗಮದ
ಸರಿಗಮದ ಸಿರಗವನ ಸಂಗೀತ
ಅಂಗಾಂಗದ ಒಂದೊಂದೂ
ರೋಮರಂದ್ರದಲ್ಲೂ ಯಾಲಕ್ಕಿ ಎಸರು
ಉಕ್ಕಿ ಹರಿದ ಅನುಭವವೇ...

೨

ಶ್ರಾವಣದ ಕೊಬ್ಬಿದ ಮೈಯೇ
ಮೃಗಶಿರದ ತಿವಿವ ಕೊಂಬೆ
ಮಾಘದಲಿ ಮಾಗಿ ಉದುರಿ ಹೋದಿಯೆಂದು
ವಸುಂಧರೆ ಬಿಕ್ಕುವೆನು

ಭೂಮಿಗಾತ್ರದ ಅಂಕದವಳೆ
ಹಸುಳೆಗಳ ಕುರುಳ ನೇವರಿಸಿ
ಬಿಕ್ಕಿ ಬಿತ್ತರಿಸುವ ಎದೆಯಾಳದ
ಶೋಕದೀಟಿಗಳ ಮೀಟಿ
ಮಂದಾರ - ನಯನವಿರ ಬೆರಳುಗಳ
ಎರಳೊಳಗೆ ಎರಳೆಗಳ
ಕಣ್ಣಪನಿ ತೊಡೆವ ಕೈಯವಳೆ

ನೆನಪಿರಲಿ ನನ್ನ ಸುರಿದ ಮಳೆ
ಹರಿದ ಹೊಳೆ
ಮೊದಲ ದಿನದ ಕಲರವ
ಝುಳು ಝುಳು ಹೊಸ ನೀರ
ಸಂಗಮದ ಜಲಕ್ರೀಡೆ

೩

ಈಗ ನಿನ್ನ
ಬೀಡು ಬಿಟ್ಟ ನೆಲದಲ್ಲಿ
ದನ ತೊಂಡು ಮೇಯುವುದು

ನಿನ್ನಲ್ಲಿ ಹಸಿರಿಲ್ಲ, ಉಸಿರಿಲ್ಲ
ನಿನ್ನ ತೊರೆ, ತೊಡೆ ಎಲ್ಲ ಬೋಳು ಬೋಳು
ಈಗ ನೀನು ಬರೇ ಮಾಗಿ

ಉಲಿವ ದುಂಬಿಗಳ ಕೊಂದವಳು ರಂಡೆ
ಝೇಂಕಾರವ ಅಪಹರಿಸಿ
ವಸಂತನಿಗೇ ಏಕೆ ಕೊಟ್ಟೆ?
ವರ್ಷಕ್ಕೆ ಹನ್ನೆರಡು ಹಸೆಯೇರಿ

ತುಳುಕುತ್ತೀಯೆ,
ಪುಳಕಗಳ ಬಸಿರಲ್ಲೇ
ಬಸವಳಿಯುತ್ತೀಯೆ

ಳ

ಉಕ್ಕುವ ಜಲಪಾತಗಳಲ್ಲಿ
ಹುಡುಕುವೆನು ನಿನ್ನ ಹೆಸರು
ದುಡುಕಿ ಧುಮುಕುವೆಯಾ
ದುರಂತ ಕಣಿವೆಗಳಲ್ಲಿ?
ಬಿಸಿನೆತ್ತರಿಗೆ ಹಿಂಜರಿಯುವ
ಗುಣವಿರುವುದಿಲ್ಲ ಕಣೆ?
ನಿನ್ನ ತೊಗರಿ ಅಲಸಂದೆಯ
ಸೊಗಡಿಗೇ ಯಾಕಿಷ್ಟು ಸೊಕ್ಕು
ಅವರೆಯ ಸೊಗಡಿಗೆ
ಇನ್ನೆಷ್ಟು ಪೊಗರು ?

೫

ನೆನಪಿರಲಿ
ಭಾವ ಸಂಕ್ರಾಂತಿಯಲ್ಲೂ
ದನ ತೊಂಡು ಮೇಯುವುದು
ಗೂಳಿಗಳ ಪೊಗರು ಚಿಗುರಿ
ನಿನ್ನ ಗಲ್ಲ ತೋಯುವುದು
ಒಂದೊಂದೆ ಋತುರಾಗವಾಗಿ
ಅಶ್ರು ಜಿನುಗುವುದು.

0

ಪಾರ್ಶ್ವನಾಥ - ಕಮಠ - ಯಕ್ಷರು : ಒಂದು ಪರಿಭಾವನೆ

- ಡಾ. ಹಂಪ ನಾಗರಾಜಯ್ಯ

ಜೈನಾಗಮಗಳ ಶ್ರೇಣಿಯಲ್ಲಿ ಪ್ರಚೀನವಾದ ಆಯಾರಾಂಗ (ಆಚಾರಾಂಗ - ಅರ್ಧಮಾಗಧೀ, ಕ್ರಿ.ಪೀ. ೫-೩ಶ)[೧], ಸೂಯಗಡಂ (ಸೂತ್ರಕೃತಾಂಗ - ಅರ್ಧಮಾಗಧೀ, ಕ್ರಿ.ಪೂ. ೪-೨ ಶ)[೨]. ದಸವೇಯಾಲಿಯ (ದಶವೈಕಾಲಿಕ - ಅರ್ಧಮಾಗಧೀ, ಕ್ರಿ.ಪೂ. ೪-೨ ಶ)[೩] ಮತ್ತು ಉತ್ತರಜ್ಝಯಣ (ಉತ್ತರಾಧ್ಯಯನ - ಅರ್ಧಮಾಗಧೀ, ಕ್ರಿ.ಪೂ. ೩ ಶ - ಕಿರ್.ಶ. ೧-೨ ಶ)[೪] ಮೊದಲಾದ ಕೃತಿಗಳಲ್ಲಿ 'ಚೌವೀಸ (ಚತುರ್ವಿಂಶತಿ - ೨೪ ಜನ) ತೀರ್ಥಂಕರರು' ಎಂಬ ಪರಿಕಲ್ಪನೆ ಕಾಣುವುದಿಲ್ಲ. ಐತಿಹಾಸಿಕವಾಗಿ ಆಗಿ ಹೋದ ಪಾರ್ಶ್ವರ ಪ್ರಸ್ತಾಪ ಕೂಡ ಈ ಪ್ರಾಚೀನಾಗಮಗಳಲ್ಲಿಲ್ಲ; ಇಸಿಭಾಸಿಯಾಇಂಸುತ್ತಾಇಂ (ಋಷಿಭಾಷಿತ ಸೂತ್ರ ಕ್ರಿ.ಪೂ. ೨-೧ ಶ)[೫] ಎಂಬ ಸಂಕಲನ ಗ್ರಂಥದಲ್ಲಿ ಪಾರ್ಶ್ವರ ವಿಚಾರವಿದೆ.

ಪ್ರಥಮಾನುಯೋಗ, ಗಂಡಿಕಾನುಯೋಗ, ಲೋಕಾನುಯೋಗ ಮತ್ತು ಸಂಗ್ರಹಾಣೀ ಎಂಬ ಕೃತಿಗಳ ಕರ್ತೃ - ಸಂಗ್ರಹಕಾರನಾದ ಆರ್ಯ ಶ್ಯಾಮನು (ಕ್ರಿ.ಪೂ. ೧ ಶ - ಕ್ರಿ.ಶ. ೧ ಶ) ಮೊತ್ತ ಮೊದಲಿಗೆ ೨೪ ತೀರ್ಥಂಕರರು ಎಂಬ ಪರಿಕಲ್ಪನೆಗೆ ಜೀವ ತುಂಬಿ ಚಾಲನೆಗೆ ತಂದಿರಬೇಕು. ಮಧುರಾಧರ್ಮ ಗ್ರಂಥ ಸಂಕಲನಗಳಿಗೆ (ಕ್ರಿ.ಶ. ೩೬೩), ಪಾರ್ಶ್ವರೂ ಸೇರಿದಂತೆ ೨೪ ಜನರ ಚರಿತೆಗಳ ರೂಪಧಾರಣೆಗೆ ಆರ್ಯಶ್ಯಾಮನ ರಚನೆಗಳೂ ಆಕರವಾಗಿವೆ. ಷಡಾವಶ್ಯಕಗಳ ಚತುರ್ವಿಂಶತಿ ಸ್ತವವು ಕ್ರಿ.ಶ. ೫ ಶತಮಾನದ ವೇಳೆಗೆ ನಾಂದಿ (ಮಂಗಲ) ಪದ್ಯವಾಗಿತ್ತು; ಪ್ರಾಯಃ ಪ್ರಥಮಾನುಯೋಗದ (ಆರ್ಯಶ್ಯಾಮ) ಪ್ರಾರ್ಥನಾ ಪದ್ಯ ಇದೇ ಈಗಿದೆ. ದೇವವಾಚಕನ ನಂದಿ ಸೂತ್ರ (ಕ್ರಿ.ಶ. ೪೫೦), ವಿಮಲ ಸೂರಿಯ ಪಉಮಚರಿಯ (ಕ್ರಿ.ಶ. ೪೭೩), ರವಿಷೇಣನ ಪದ್ಮಚರಿತ (ಕ್ರಿ.ಶ. ೬೭೭) ಪುನ್ನಾಟ ಸಂಘದ ಜಿನಸೇನನ ಹರಿವಂಶ ಪುರಾಣ (೭೮೪) ಮೊದಲಾದ ಪ್ರಾಕೃತ - ಸಂಸ್ಕೃತ ಕೃತಿ - ಕಾವ್ಯಗಳ ಮಂಗಲಾಚರಣೆಗೆ ಇದು ದಾರಿ ತೆರೆಯಿತು; ಅಲ್ಲದೆ, ಠಾಣಾಂಗವೂ (ಸ್ಥಾನಾಂಗ), ಸಮವಾಯಾಂಗವೂ (ಕ್ರಿ.ಶ. ೩೬೩) ಆರ್ಯ ಶ್ಯಾಮನ ಆಕರವನ್ನು ಅವಲಂಬಿಸಿವೆಯಲ್ಲದೆ, ಇವುಗಳ ಆಧಾರದಿಂದ

ಪರ್ಯುಷಣಾಕಲ್ಪದ (ಕ್ರಿ.ಶ. ೫೦೩-೫೧೬) ಜಿನಚರಿತೆಯಲ್ಲಿ ಪಾರ್ಶ್ವರ ಕಥಾನಕ ಬಂದಿವೆ.

ಪಾರ್ಶ್ವನಾಥರ ಚರಿತೆಯು ವಿಯಾಹಪಣ್ಣತ್ತಿ (ವ್ಯಾಕ್ಯಾ ಪ್ರಜ್ಞಪ್ತಿ (ಕ್ರಿ.ಶ. ೧-೩ಶ), (ನಾಯಾಧಮ್ಮಕಹಾ), (ಜ್ಞಾತಾ-ಧರ್ಮ-ಕಥಾ ಕ್ರಿ.ಶ. ೩-೪ ಶ) ವೃಷ್ಣಿದಶಾ (೩-೪ಶ), ಆವಸ್ಸಯ ಣಿಜ್ಜುತ್ತಿ (ಆವಶ್ಯಕ ನಿರ್ಯುಕ್ತಿ, ಕ್ರಿ.ಶ. ೫೨೫), ಆವಸ್ಸಯ ಚುಣ್ಣಿ (ಆವಶ್ಯಕ ಚೂರ್ಣಿ, ಕ್ರಿ.ಶ. ೬೦೦-೬೫೦) ತಿಲೋಯ ಪಣ್ಣತ್ತಿ (ತ್ರಿಲೋಕ ಪ್ರಜ್ಞಪ್ತಿ, ಕ್ರಿ.ಶ.೫೫೦), ತೀರ್ಥಾವಕಾಲಿಕ ಪ್ರಕೀರ್ಣಕ (ಕ್ರಿ.ಶ. ೫೫), ಉತ್ತರ ಪುರಾಣ (ಗುಣಭದ್ರಾಚಾರ್ಯ ಕ್ರಿ.ಶ. ೮೫೦) ಪಾರ್ಶ್ವಾಭ್ಯುದಯ (ಗುಣಭದ್ರಾಚಾರ್ಯ, ೯ ಶ). ಪಾರ್ಶ್ವನಾಥ ಚರಿತೆ (ವಾದಿರಾಜ ಕ್ರಿ.ಶ. ೧೦೨೫) - ಮೊದಲಾದ ಕೃತಿಗಳಲ್ಲಿ ಕೊನರುತ್ತ ಪಲ್ಲವಿಸಿದೆ; ಪ್ರಾಕೃತ, ಸಂಸ್ಕೃತ, ಕನ್ನಡ, ಗುಜರಾತಿ ಭಾಷೆಗಳಲ್ಲಿ ಫಲ ಕೊಟ್ಟಿದೆ. ಗುಣಭದ್ರ ಆಚಾರ್ಯರ ಉತ್ತರ ಪುರಾಣ ಪ್ರಣೀತ ಪಾರ್ಶ್ವನಾಥ ಚರಿತದ ಜೀವನ ವಿವರವನ್ನು ಎರಡನೆಯ ಮುಖ್ಯ ಘಟ್ಟವನ್ನಾಗಿ ಇಟ್ಟುಕೊಳ್ಳಬಹುದು; ಪಾರ್ಶ್ವನಾಥ ಜೀವನ ಚರಿತೆಯ ಹೊರಳು ದಾರಿಯಲ್ಲಿ ಮೊದಲನೆಯ ಘಟ್ಟ ಆರ್ಯಶ್ಯಾಮನ ಪ್ರಥಮಾನುಯೋಗ[1].

ಅರ್ಧಮಾಗಧೀ ಆಗಮಗ್ರಂಥಗಳಲ್ಲಿ ಇಸಿಭಾಸಿಯಾಇಂ ಸುತ್ತಾಇಂ(ಋಷಿ ಭಾಷಿತಾನಿ) ಆಯಾರಾಂಗ (೧೧. ೧೫-೨೫) ಸೂಯಗಡಂ (೧೧. ೭-೮), ವಿಯಾಹ ಪಣ್ಣತ್ತಿ (೧.೯. ೨೧-೨೪; ೨.೫.೯೫ ; ೫.೯.೨೫೪-೫೫), ನಾಯಾಧಮ್ಮ ಕಹಾಓ (೨.೩. ೧-೬), ಉತ್ತರಜ್ಝಯಣ (೨೩), ರಾಯಪಸೇಣೀಯ (ರಾಜಪ್ರದೇಶೀಯ. (೨-೩) , ನಿರ್ಯಾವಲಿಯ ಸೂತ್ರ (ನರಕಾವಲಿಕಾ . ೩-೧) ಠಾಣಾಂಗ (೯.೬೧) - ಸೂರ್ಯಪ್ರಜ್ಞಪ್ತಿ, ಚಂದ್ರಪ್ರಜ್ಞಪ್ತಿ ಮೊದಲಾದವುಗಳಲ್ಲಿ ಪಾರ್ಶ್ವನಾಥರ ವ್ಯಕ್ತಿ, ವ್ಯಕ್ತಿತ್ವ, ಉಪದೇಶ ಪರಂಪರೆಯ ಮೌಲಿಕ ಉಲ್ಲೇಖಗಳಿವೆ. ಇವೆಲ್ಲದರ ಸಾರಾಂಶ: ಪಾರ್ಶ್ವರು ಇಕ್ಷ್ವಾಕು - ಉಗ್ರ ವಂಶದಲ್ಲಿ ವಾರಣಾಸಿಯಲ್ಲಿ ಹುಟ್ಟಿದರು. ಅ(ವಿ)ಶ್ವಸೇನ - ವಾಮಾ (ಬ್ರಾಹ್ಮಿ) ಇವರು ತಂದೆ - ತಾಯಿ, ಹತ್ತು ರತ್ನಿ - ಹಸ್ತ (ಒಂಭತ್ತು ಗುಡ್ಡ ಮೊಳ) ಎತ್ತರ, ನೀಲ -ಕಪ್ಪು- ಬಾಲಶಾಲಿ ಬಣ್ಣ, ೩೦ನೆಯ ವಯಸ್ಸಿನಲ್ಲಿ ಪರಿನಿಷ್ಕ್ರಮಣ, ಒಟ್ಟು ಜೀವಿತಾವಧಿ ನೂರುವರ್ಷ, ನಿರ್ವಾಣಭೂಮಿ ಸಮ್ಮೇದಶೈಲ. ಬಿಹಾರ ಪ್ರಾಂತ್ಯದ ಹಜಾರೀಬಾಗಿನ ಸಮೀಪವಿರುವ ಪ್ರಸಿದ್ಧ ಪಾರ್ಶ್ವನಾಥ ಪರ್ವತವೇ

ಈ ಸಮ್ಮೇತ(ದ) ಶೈಲ (ಶಿಖರ - ಗಿರಿ) ಎಂಬುದಾಗಿ ಜನಪ್ರಿಯವಾಗಿದೆ; ಆದರೆ ವಾಸ್ತವವಾಗಿ ಬಿಹಾರಿನ ಗಯಾ ಸಮೀಪದ 'ಕುಲವಾ - ಪಹಾಡ್' ಎಂಬುದೇ ಪ್ರಾಚೀನ ಸಮ್ಮೇದಶೈಲವೆಂದು ಶಾಸನಾಧಾರಗಳಿಂದ ಎಂ.ಎ. ಢಾಕಿ ಸೂಚಿಸಿದ್ದಾರೆ. (ಢಾಕಿ, ಎಂ.ಎ. (ಸಂ):೧೯೯೭ :೧೧: ಅ.ಟಿ. ೧೬)[೭]. ಪರ್ಯೂಷಣಾಕಲ್ಪದಜಿನ ಚರಿತದಲ್ಲಿ (ಕ್ರಿ.ಶ. ೫೦೩ - ೧೬) ಪಾರ್ಶ್ವರ ತಂದೆ - ತಾಯಿ - ಗಣಧರರ ಸಂಖ್ಯೆ -ಕೇವಲ ಜ್ಞಾನೋತ್ಪತ್ತಿ ಸ್ಥಳ ಇವು ಕ್ರಮವಾಗಿ ಅಶ್ವಸೇನ - ವಾಮಾ (ದೇವೀ) - ಎಂಟು - ಧಾತಕೀವೃಕ್ಷದ ಅಡಿಯಲ್ಲಿ ಎಂದಿದೆ; ಗುಣಭದ್ರರ ಉತ್ತರ ಪುರಾಣದಲ್ಲಿ ಕ್ರಮವಾಗಿ ವಿಶ್ವಸೇನ - ಬ್ರಾಹ್ಮಿ - ಹತ್ತು - ಬಂಡೆಯ ಮೇಲೆ (ಚೈತ್ಯವೃಕ್ಷವು ದೇವದಾರು) ಎಂದಿದೆ. ಹುಟ್ಟಿದ ಸ್ಥಳ, ತಾಯಿತಂದೆ ಹೆಸರು, ನಿರ್ವಾಣ ಸ್ಥಳ ಬಿಟ್ಟರೆ ಮಹಾವೀರರ ಜೀವನ ವೃತ್ತಾಂತದ ಪ್ರತಿಕೃತಿಯಂತಿದೆ ಎಂದು ಘುಬ್ರಿಂಗ್ ಸೂಚಿಸಿದ್ದಾರೆ. ಮಹಾವೀರನ ತಾಯಿತಂದೆಯರು ಪಾರ್ಶ್ವಕ ಅನುಯಾಯಿ ಶ್ರಾವಕರೆಂದು ಆಯಾರಾಂಗದಲ್ಲಿದೆ (೧೧. ೧೫. ೧೬). ಬೌದ್ಧರ ದೀಘ-ನಿಕಾಯದ ಸ್ಮಞ್ಞಫಲಸುತ್ತದ ಪ್ರಕಾರ ಕೂಡ ಈ ಹೇಳಿಕೆಗೆ ಚರಿತ್ರೆಯ ಸ್ಪರ್ಶ ಬಂದಿದೆ. ಪಾರ್ಶ್ವನಿಗೆ ಅರ್ಹತ್ - ಅರಹಾ, ಪುರಿಷಾದಾನೀಯ ಎಂಬ ವಿಶೇಷಣ - ಪ್ರಶಸ್ತಿ ವಾಚಕವು ಮಹಾ ಪುರುಷಾರ್ಥಕ ಶಬ್ದಗಳಾಗಿವೆ. ಜೈನ, ಬೌದ್ಧ, ವೈದಿಕ ಧರ್ಮಗಳಲ್ಲಿ ಅರ್ಹತ್ - ಅರಹಾ ಎಂಬ ಶಬ್ದ ಬಳಕೆಯಲ್ಲಿದ್ದರೂ ಕ್ರಮೇಣ ಅದು ಜೈನ - ಬೌದ್ಧ ಪರಂಪರೆಗೆ ಸೀಮಿತವಾಯಿತು. ಲೋಕಮಾನ್ಯ, ದೇಶಬಂಧು, ಮಹಾತ್ಮ ಪ್ರೀತಿಪಾತ್ರ, ಆದರಣೀಯ ಎಂಬ ಅರ್ಥ ಸೂಚಕವಾಗಿ 'ಪುರಿಪಾದಾನೀಯ' ಎಂಬ ಮಾತು ಬಂದಿದೆ.

ಪಾರ್ಶ್ವರು ಬೋಧಿಸಿದ್ದು ಚಾತುರ್ಯಾಮ ಧರ್ಮ - ಚಾತುರ್ಯಾಮ ಸಂವರ. ಪಾರ್ಶ್ವರು ಪಂಚಯಾಮ - ಧರ್ಮ (ಮಹಾವ್ರತ) ವನ್ನು ಬೋಧಿಸಿದ ಮಹಾವೀರರಿಗಿಂತ ೨೫೦ ವರ್ಷ ಹಿಂದೆ ಇದ್ದವರೆಂಬ ಪ್ರತೀತಿಯಿದೆ. ಪಾರ್ಶ್ವರ ಜೀವಿತ ಕಾಲಾವಧಿಯನ್ನು ಕ್ರಿ.ಪೂ. ೮೭೭ - ೭೭೭ ಅಥವಾ ೮೧೭ - ೭೧೭ ಎಂಬ ಸೂಚನೆಯಿದೆ. ಹರ್ಮನ್ ಯಾಕೋಬಿಯವರು ಕೊಟ್ಟಿರುವ ೨೫೦ ವರ್ಷಗಳ ಅಂತರವನ್ನು ಕುರಿತು ಚರ್ಚೆಗಳು, ಇನ್ನೂ ಹೊಸ ಚಾರಿತ್ರಿಕ ಅಂತರ - ಬಾಹ್ಯ ಪ್ರಮಾಣಗಳ ಆಧಾರಗಳೊಂದಿಗೆ, ಮುಂದುವರಿದಿವೆ. ಅಷ್ಟೇ ಅಲ್ಲದೆ ಈ ನೂತನಾಧಾರಗಳ ಬೆಳಕಿನಲ್ಲಿ ಮಹಾವೀರರ ಕಾಲದ ಗಡುವನ್ನೂ ಪುನರಾವಲೋಕಿಸಲಾಗಿದೆ; ಉತ್ತರಾಧ್ಯಯನ ಸೂತ್ರದಲ್ಲಿ ಬರುವ ಕೇಸೀ - ಗೌತಮ

(ಅಧ್ಯಾಯ - ೨೩) ಸಂವಾದವನ್ನು ಈ ಮರು ಪರಿಶೀಲನೆಯ ಚರ್ಚೆಗೆ ಒಂದು ಆಂತರಿಕ ಆಕರವನ್ನಾಗಿ ತೆಗೆದುಕೊಂಡಿದ್ದಾರೆ. 'ಅರಹಾ ಪುರಿಸಾದಾಣೀಯ ಪಾಸ' (ಅರ್ಹಾ ಪುರಿಷಾದಾಣೀಯ ಪಾರ್ಶ್ವ)ರನ್ನು ವರ್ಧಮಾನರು ತಮ್ಮ ಹಿರಿಯರೆಂದು ಮಾನ್ಯ ಮಾಡಿದ್ದಾರೆ. ಪಾರ್ಶ್ವರ ಪ್ರಶಿಷ್ಯನಾದ ಕೇಸೀ ಮತ್ತು ವರ್ಧಮಾನರ ನೇರ ಶಿಷ್ಯರಾದ ಗೌತಮರು ಸಮಕಾಲೀನರಾಗಿ ಸಂಭಾಷಿಸಿದ್ದಾರೆ. ಆದ್ದರಿಂದ ಕೇಸೀ ಮತ್ತು ಆತನ ಗುಣಗಣಧರ ಶುಭದತ್ತರ ಕಾಲಮಾನವು ಗೌತಮಗಣಧರ ಮತ್ತು ಮಹಾವೀರರಿಗಿಂತ ತುಂಬ ಹಿಂದೆ ಹೋಗುವುದು ಸಾಧ್ಯವಿಲ್ಲ. ವರ್ಧಮಾನರು ತಮ್ಮ ತತ್ವಗಳನ್ನು ಬೋಧಿಸುವುದಕ್ಕಿಂತ ಕೆಲವು ದಶಕಗಳ ಹಿಂದೆ, ೫೦-೬೦ ವರ್ಷಗಳ ಹಿಂದೆಯಷ್ಟೇ ಪಾರ್ಶ್ವರು ನಿರ್ವಾಣ ಹೊಂದಿರಬೇಕು.

ಈ ಆಂತರಿಕ ಆಧಾರವನ್ನು ಪುರಿಗೊಳಿಸುವ ಕೆಲವು ಚಾರಿತ್ರಿಕ ಸಾಮಗ್ರಿಯನ್ನು ಎಂ.ಎ.ಡಾಕಿ ಮುಂದಿಟ್ಟಿದ್ದಾರೆ. ಪಾರ್ಶ್ವರು ವಾರಣಾಸಿಯಲ್ಲಿ ಹುಟ್ಟಿ, ಚಂಪಾ, ಮಥುರಾ, ರಾಜಗೃಹಗಳಲ್ಲಿ ಸಂಚರಿಸಿದರು. ವಾರಣಾಸಿಯ ಪ್ರಾಚೀನತೆ ಕ್ರಿ.ಪೂ. ಎಂಟು - ಏಳನೆಯ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲ. ಇದೇ ರೀತಿ ಚಂಪಾ, ಮಥುರಾ, ರಾಜಗೃಹಗಳ ಇತಿಹಾಸವೂ, ಉತ್ಖನನಗಳ ಮೂಲಕ ಪಡೆದ ಪುರಾತನ ಅವಶೇಷಗಳ ಆಧಾರದ ಪ್ರಾಕ್ತನ ಶಾಸ್ತ್ರ ದಾಖಿಲೆಗಳ ಪ್ರಕಾರ, ಕ್ರಿ.ಪೂ. ಏಳು - ಆರನೆಯ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲ. ಆದ್ದರಿಂದ ಪಾರ್ಶ್ವರು ಕ್ರಿ.ಪೂ. ಆರನೆಯ ಶತಮಾನದ ಆರಂಭ ಕಾಲದವರಿರಬೇಕೆನ್ನಲಾಗಿದೆ; ವರ್ಧಮಾನರ ನಿರ್ವಾಣ ತೇದಿಯೂ ಕ್ರಿ.ಪೂ. ೫೨೭ ಕ್ಕಿಂತ ಕ್ರಿ.ಪೂ. ೪೭೭ ಎಂಬ ಸೂಚನೆಯೇ ಅಂಗೀಕಾರ ಯೋಗ್ಯವೆನಿಸಿದೆ [10]; ಯಾಕೋಬಿಯವರ ಸೂಚನೆಯೂ ಇದೇ.

ಪಾರ್ಶ್ವರ ಉಪಾಸಕ ಮುನಿಶಿಷ್ಯರ ವಿಚಾರ ಅವಶ್ಯಕ ಚೂರ್ಣಿಯಲ್ಲಿದೆ. ಉಪ್ಪಲನು ಪಾಸಾವಚ್ಚಿಜ್ಜಾ (ಪಾರ್ಶ್ವನ ಶಿಷ್ಯ) ಆಗಿದ್ದನು. ಉಪ್ಪಲನು ಪಾರ್ಶ್ವರ ಮುನಿಧರ್ಮಪಾಲನೆಯನ್ನು ತೊರೆದು ಮತ್ತೆ ಗೃಹಸ್ಥನಾಗಿ ಅಟ್ಠಿಯ ಗ್ರಾಮದಲ್ಲಿ ನೆಲಸಿದನು. ಈತನ ಇಬ್ಬರು ಸಹೋದರಿಯರಾದ ಸೋಮಾ - ಜಯಂತೀ ಎಂಬುವರು ಪಾರ್ಶ್ವರ ಚಾಉಜ್ಜಾಮ ಸಂವರದ ಆರ್ಯಿಕೆಯರಾಗಿದ್ದರು. ಆದರೆ ಅವರು ಪಾರ್ಶ್ವರ ಚಾತುರ್ಯಾಮ ಸಂವರ ಸಂಘದ ಸನ್ಯಾಸಧರ್ಮದ ನಿಯಮಪಾಲನೆಯನ್ನು ತೊರೆದು ಬ್ರಾಹ್ಮಣ ಪರಿವ್ರಾಜಿಕೆಯರಾಗಿ ಮತಾಂತರಗೊಂಡರು. ಪಾರ್ಶ್ವರ ಹಿಂಬಾಲಕನಾದ

ಮುನಿಚಂದ್ರನು ತನ್ನ ಶಿಷ್ಯ ಪರಿವಾರ ಸಹಿತಕುಮಾರಾಯ ಸನ್ನಿವೇಶದಲ್ಲಿನ ಕುಂಬಾರ ಅಂಗಡಿಯಲ್ಲಿದ್ದನು. ಮಂಖರಿಗೋಸಾಲನು ಅವರನ್ನು ಯಾರೆಂದು ಪ್ರಶ್ನಿಸಿದ್ದಕ್ಕೆ ಮುನಿಚಂದ್ರನು ಅವನು ಸಮಣ ನಿಗ್ಗಂಠನ ಶಿಷ್ಯರೆಂದು ಉತ್ತರಿಸಿದನು; ಮಹಾವೀರರು ಆಗ ಗೋಸಾಲನಿಗೆ 'ಅವರು ಪಾರ್ಶ್ವರ ಅನುಯಾಯಿಗಳು' ಎಂದು ವಿವರಿಸಿದರು. ಕುವೀಯ ಸನ್ನಿವೇಶ ಪ್ರದೇಶದಲ್ಲಿ ಅಪಾಯಕರ ಪ್ರಸಂಗ ಒದಗಿಬಂದ ಸಂದರ್ಭದಲ್ಲಿ, ಮಹಾವೀರ - ಗೋಸಾಲರನ್ನು ಪಾರ್ಶ್ವರ ಇಬ್ಬರು ಶಿಷ್ಯೆಯರಾದ (ಪಾಸ್ಸಾಂತೇ ವಾಸಿನೋ) ವಿಜಯಾ ಮತ್ತು ಪಗಬ್ಬಾ (ಪ್ರಗಲ್ಭಾ) ಎಂಬುವರು ಪಾರು ಗಾಣಿಸಿದರು. ಪಾರ್ಶ್ವರ ಶಿಷ್ಯರಾಗಿದ್ದ ಶ್ರಮಣ ಗಾಂಗೇಯ, ಕಾಲಾಸ್ಯ ವೈಶ್ಯ ಪುತ್ರ, ಉದಯ ಪೇಢಾಲ ಪುತ್ರ, ಕುಮಾರ - ಶ್ರಮಣ ಕೇಸೀ (ಚತುರ್ದಶ ಪೂರ್ವಧಾರಿ) - ಇವರು ಚತುಜ್ಜಾಮಧಮ್ಮ (ಚಾತುರ್ಯಾಮ ಸಂವರ)ವನ್ನು ತ್ಯಜಿಸಿ ಮಹಾವೀರನ ಪಂಚ ಮಹಾವ್ರತ ಪಾಲಕರಾದರು. ಪಾರ್ಶ್ವರ ಶಿಷ್ಯ ಸಮುದಾಯ ೫೦೦ ಜನರ ಗುಂಪು ಸೇರಿಕೊಂಡು ತುಂಗಿಯ, ಶ್ರಾವಸ್ತಿ, ಶ್ವೇತಾಂಬೀ ಮುಂತಾದ ನಗರಗಳಲ್ಲಿದ್ದರು ಮತ್ತು ಊರಿಂದೂರಿಗೆ ವಿಹರಿಸುತ್ತಿದ್ದರು [೧೧].

ಪಾರ್ಶ್ವರ ಸಂಪ್ರದಾಯದ ಶಿಷ್ಯ ಮುನಿಗಳು ಮೇಲುಡುಪನ್ನು ಧರಿಸುತ್ತಿದ್ದರು, ಲೋಚು ಮಾಡುತ್ತಿರಲಿಲ್ಲ, ದಂತದಾವನ ಮಾಡುತ್ತಿದರು, ನೆಲದ ಮೇಲೇ ಮಲಗ ಬೇಕೆಂಬುದು ಇರಲಿಲ್ಲ, ಅವರು ಪಾದರಕ್ಷೆಗಳನ್ನು ಧರಿಸುತ್ತಿದ್ದರು ಮತ್ತು ಕೊಡೆಯುನ್ನು ಉಪಯೋಗಿಸುತ್ತಿದ್ದರು. ಪಾರ್ಶ್ವರ ಯತಿಧರ್ಮವು ಮಹಾವೀರರು ಪ್ರತಿಪಾದಿಸಿದ ಮುನಿಧರ್ಮದಷ್ಟು ಕಟ್ಟುನಿಟ್ಟಾಗಿ ಆಗಲಿ, ಕಠಿಣವಾಗಲಿ ಇರಲಿಲ್ಲ; ಪಾರ್ಶ್ವರ ಯತಿಧರ್ಮವು ಬೌದ್ಧರ ಮಧ್ಯಮ ಮಾರ್ಗದ ಹಾಗೆ ಮತ್ತು ಇಂದಿನ ಶ್ವೇತಾಂಬರ ಪಂಥದ ಹಾಗೆ ಇದ್ದಿತೆನ್ನಬಹುದು; [೧೨] ಶ್ವೇತಾಂಬರ ಮುನಿಗಳೂ ಪಾದರಕ್ಷೆ, ಕೊಡೆ ಬಳಸುವುದಿಲ್ಲ.

ಸ್ವಾರಸ್ಯವೆಂದರೆ, ಈ ಯಾವುದೇ ಪ್ರಾಚೀನ ಲಿಖಿತ ದಾಖಲೆಗಳಲ್ಲಿ ಪಾರ್ಶ್ವನಾಥರಿಗೆ ಕಮಠನಿಂದ ಉಂಟಾದ ಉಪಸರ್ಗದ ಮತ್ತು ಧರಣೇಂದ್ರ - ಪದ್ಮಾವತೀ ದೇವ - ದೇವಿಯರು ಈ ಉಪಸರ್ಗನಿವಾರಣೆ ಮಾಡಿದ ಪ್ರಸ್ತಾಪ ಗಳಿಲ್ಲದಿರುವುದು; ಭವಾವಳಿಯ ವಿಚಾರ ಕೂಡ ಬಂದಿಲ್ಲ. ಉತ್ಖನನಗಳಿಂದ ದೊರೆತಿರುವ ಅತ್ಯಂತ ಪ್ರಾಚೀನ ಪಾರ್ಶ್ವನಾಥ ಮೂರ್ತಿ ಮತ್ತು ಮಥುರಾದಲ್ಲಿ ದೊರೆತ

ವಿಗ್ರಹಗಳು (ಕ್ರಿ.ಶ. ೧, ೨, ಮತ್ತು ೩ನೆಯ ಶ.), ಚೌಸಾದ ಸಂಗ್ರಹದಲ್ಲಿರುವುದು (ಕ್ರಿ.ಶ. ೨ - ೩ ಶ). ಇವುಗಳಲ್ಲಿ ಕಮಠೋಪಸರ್ಗ ಹಾಗೂ ಧರಣೇಂದ್ರ - ಪದ್ಮಾವತಿಯರು ರಕ್ಷಿಸುತ್ತಿರುವುದು ಕಂಡು ಬಂದಿದೆ. ಆದರೆ, ಮಹಾವೀರರ ಮತ್ತು ಅವರ ಗಣಧರರ ಕಾಲದಲ್ಲಿ ಪಾರ್ಶ್ವನಾಥರ ಅಥವಾ ಬೇರೆ ಯಾವುದೇ ತೀರ್ಥಂಕರರ ವಿಗ್ರಹಗಳು ಕಂಡುಬಂದಿಲ್ಲ; ಜಿನಾಲಯಗಳ ಹಾಗೂ ಜಿನರ ಪೂಜೆಯ ವಿಚಾರ ಉಪಲಬ್ಧ ಪ್ರಾಚೀನತಮ ನಿರ್ಗ್ರಂಥ ಆಗಮಗಳಲ್ಲಿ ಉಲ್ಲೇಖವಾಗಿಲ್ಲ ಎಂದು ಉಮಾಕಾಂತ ಪ್ರೇಮಾನಂದ ಷಾ ಅಭಿಪ್ರಾಯಪಟ್ಟಿದ್ದಾರೆ[೧೩].

ಪಾರ್ಶ್ವನಾಥರಿಗೆ ಪಾರ್ಶ್ವ ಎಂಬ ಹೆಸರು ಬರಲು ಒಂದು ಕಾರಣವನ್ನು ಆವಸ್ಸಯ ಣಿಜ್ಜುತ್ತಿಯಲ್ಲಿ ಹೀಗೆ ಹೇಳಿದೆ: ಜಿನಜನನಿಯು ಕನಸಿನಲ್ಲಿ ಹಾವು ತನ್ನ ಹಾಸುಗೆಯ ಪಾರ್ಶ್ವ (ಪಕ್ಕ)ದಲ್ಲಿ ಸರಿಯುತ್ತಿರುವುದನ್ನು ಕಂಡದ್ದರಿಂದ ಪಾರ್ಶ್ವ ಎಂದು ಹೆಸರಾಯಿತು. ಇದು ಕೇವಲ ಕಾಲ್ಪನಿಕ ವಿವರಣೆ. ಪಾರ್ಶ್ವನಾಥರು ಪರಿನಿಷ್ಕ್ರಮಣದ ತರುವಾಯ ಅಹಿಚ್ಛತ್ರದ ಬಹಿರ್ವನದಲ್ಲಿ ತಪಸ್ಸು ಮಾಡಿದರು. ದೇವಭದ್ರ ಸೂರಿಯು (ಕ್ರಿ.ಶ. ೧೧೧೧)ತನ್ನ "ಸಿರಿ ಪಾಸನಾಹ - ಚರಿಯಂ" ಕಾವ್ಯದಲ್ಲಿ (ಪ್ರಸ್ತಾವ, ೩. ೧-೭) ಇದಕ್ಕೊಂದು ವಿವರಣೆ ಕೊಟ್ಟಿದ್ದಾನೆ : ಈ ಊರಿಗೆ ಮೊದಲಿದ್ದ ಹೆಸರು ಶಿವಪುರೀ ಎಂದು, ಧರಣೇಂದ್ರನು (ಅಹಿ) ಇಲ್ಲಿ ಪಾರ್ಶ್ವನಾಥರಿಗೆ ತನ್ನ ಹೆಡೆ ಬಿಚ್ಚಿ ಕೊಡೆ (ಛತ್ರ) ಯಾಗಿ ಹಿಡಿದಿದ್ದರಿಂದ "ಅಹಿ - ಛತ್ರ" ಎಂಬ ಹೊಸ ಹೆಸರಾಯಿತು. ವಾಸ್ತವತೆ ಏನೆಂದರೆ ಈ ಊರಿನ ಹೆಸರು ಅಹಿಚ್ಛತ್ರ ಎಂಬುದಲ್ಲ, ಅದರ ಮೂಲ ರೂಪ ಅಧಿಚ್ಛತ್ರಾ ಎಂದು. ಸಂಸ್ಕೃತದ "ಧ" ವು ಮಹಾರಾಷ್ಟ್ರಿ ಪ್ರಾಕೃತದಲ್ಲಿ "ಹ" ಆಗುತ್ತದೆ, ಆದರಿಂದ ಅಧಿಚ್ಛತ್ರಾವು ಅಹಿಚ್ಛತ್ರವಾಗಿದೆ; ಇದು ಜೈನ ಪುರಾಣದಲ್ಲಿ ಧರಣೇಂದ್ರನ ಸಂಬಂಧವನ್ನೂ ಪಾರ್ಶ್ವನಾಥರ ತಪಸ್ಸಿಗೆ ತೊಂದರೆ ಆಗದಂತೆ ಕಾಣಿಸಿಕೊಂಡ ಕಲ್ಪನೆಯನ್ನೂ ಮಾಡಲು ಸಹಾಯವಾಗಿದೆ[೧೪]. ಹಾಗಾದರೆ ಧರಣೇಂದ್ರನ ಕಥಾವಲ್ಲರಿಯೂ, ಕಮಠೋಪಸರ್ಗ ಕಥಾನಕವೂ ಹೇಗೆ ಮತ್ತು ಯಾವಾಗ ಬಂದು ಸೇರಿಕೊಂಡುವು ಎಂಬ ಪ್ರಶ್ನೆಗೆ ಉತ್ತರ ಕುತೂಹಲಕಾರಿಯಾಗಿದೆ.

ತೀರ್ಥಂಕರರ ಹಿಂದಿನ ಭವಗಳ, ಭವಾವಳಿಯ ಚಿತ್ರಣ ಮೊದಲ ಸಲ ಕಾಣಿಸಿಕೊಳ್ಳುವುದು ಸಮವಾಯಾಂಗ ಸೂತ್ರದಲ್ಲಿ (ಕ್ರಿ.ಶ. ೩೬೩). ಅದರಂತೆ ಪಾರ್ಶ್ವರು ಹಿಂದಿನ ಭವದಲ್ಲಿ ಸುದರ್ಶನನಾಗಿದ್ದರು. (೧೫೭: ೧೧-೧೪). ಪರ್ಯುಷಣ

ಕಲ್ಪದಲ್ಲಿ ಭವಾವಳಿಯನ್ನು ಹೇಳಿಲ್ಲದಿದ್ದರೂ, ಪಾರ್ಶ್ವರ ಜೀವವು ಪ್ರಾಣತ ಕಲ್ಪ ವಿಮಾನದಿಂದ ಬಂದು ತಾಯಿಯ ಗರ್ಭವನ್ನು ಸೇರಿತೆಂದು ಹೇಳಿದೆ; ರವಿಷೇಣನು ಪದ್ಮಚರಿತದಲ್ಲಿ, ಪ್ರಾಣತ ಕಲ್ಪದ ಬದಲು, ವೈಜಯಂತ ಸ್ವರ್ಗದಿಂದ ಬಂದುದನ್ನು ಹೇಳಿದ್ದಾನೆ. ಕ್ರಿ.ಶ. ನಾಲ್ಕನೆಯ ಶತಮಾನದಿಂದ ಪಾರ್ಶ್ವನಾಥರ ಚರಿತೆಯು ಪೂರ್ವಭವಗಳ ವಿವರಗಳನ್ನು ಹೊಟ್ಟೆಯೊಳಗೆ ಹಾಕಿಕೊಳ್ಳುತ್ತ, ಕ್ರಮೇಣ ದಿಗಂಬರ - ದಾಕ್ಷಿಣಾತ್ಯ ಮತ್ತು ಶ್ವೇತಾಂಬರ - ಔತ್ತರೇಯ ಎಂಬೆರಡು ಮುಖ್ಯ ಕವಲುಗಳಾಗಿ ಬೆಳೆದಿದೆ. ಉತ್ತರದ ಪರಂಪರೆಗೆ ದೇವೇಂದ್ರ ಸೂರಿಯೂ ದಕ್ಷಿಣದ ಪರಂಪರೆಗೆ ಗುಣಭದ್ರಾಚಾರ್ಯರೂ ಪ್ರಾತಿನಿಧಿಕರಾಗಿ ಮುಂಚೂಣಿಯಲ್ಲಿ ಕಾಣುತ್ತಾರೆ [೧೫]. ತ್ರಿಲೋಕ ಪ್ರಜ್ಞಪ್ತಿ (ಕ್ರಿ.ಶ. ೬ ಶ.), ರವಿಷೇಣನ ಪದ್ಮಚರಿತ (ಕ್ರಿ.ಶ. ೬೭೬), ಜಿನ ಸೇನರ ಪಾರ್ಶ್ವಾಭ್ಯುದಯ ಕಾವ್ಯ (ಸು. ೮೨೫), ಗುಣಭದ್ರರ ಉತ್ತರ ಪುರಾಣ (ಸು. ೮೫೦), ಪುಷ್ಪದಂತದ ಅಪಭ್ರಂಶ ಮಹಾಪುರಾಣ (೯೫೦), ವಾದಿರಾಜರ ಪಾರ್ಶ್ವನಾಥ ಚರಿತ (೧೦೨೫), ಪದ್ಮಕೀರ್ತಿಯ ಸಿರಿ - ಪಾಸ್ನಾಹಚರಿಉ (೧೦೭೭), ಕನ್ನಡ ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣ (೧೨೨೨) - ಇವು ದಿಗಂಬರ ಪರಂಪರೆಯ ಕಾವ್ಯ -ಚರಿತೆ ; ದೇವಭದ್ರಸೂರಿಯ ಸಿರಿ - ಪಾಸನಾಹಚರಿಯ (೧೧೧೧), ಹೇಮ ಚಂದ್ರನ ತ್ರಿಷಷ್ಟಿ - ಶಲಾಕಾ -ಪುರುಷಚರಿತ (೧೨ ಶ.) ಹೇಮವಿಜಯಗಣಿಯ ಪಾರ್ಶ್ವನಾಥ ಚರಿತ್ರ (೧೭ ಶ) - ಮೊದಲಾದವು ಶ್ವೇತಾಂಬರ ಪರಂಪರೆಯ ಕಾವ್ಯ - ಚರಿತೆ.

ಕಮಠಮತ್ತು ಧರಣೇಂದ್ರರ ಕಥಾನಕವು ಪಾರ್ಶ್ವರ ಚರಿತೆಯೊಳಗೆ ಸೇರಿಕೊಂಡು ಹೆಣೆದು ಹೋದ ಕಾಲ ಘಟ್ಟವು ಕ್ರಿ.ಶ. ದ ಆರಂಭ ಶತಮಾನಗಳಲ್ಲಿ ಪ್ರಾರಂಭವಾಗಿದೆ ಎಂಬುದಕ್ಕೆ ದೊರೆತಿರುವ ಶಿಲ್ಪಗಳು ಆಧಾರ. ಈ ಕಲ್ಪನೆಗೆ ಆಗಮಕೃತಿಗಳೊಳಗೆ ಮತ್ತು ಕಾವ್ಯ ಚರಿತೆಗಳಲ್ಲಿ ತಡವಾಗಿ ಬೆಸೆದು ಕೊಂಡಿದೆ. ಕಮಠನ ಉಲ್ಲೇಖವು ಪ್ರಥಮ ಭಾರಿಗೆ ಪರ್ಯಂತಾರಾಧನಾ (೭ - ೮ ಶ.)ಕೃತಿಯಲ್ಲಿ ಬಂದಿದೆ: (ಗಾಹಾ - ೮೫೧) -

ತಾಮಿಲ ಈ ಸಾಣಂದೋ ಬಾಲತಪಸ್ಸೀ ವಿಪೂರಣೋ ಚಮರೋ
ಅಣಸಣಮರಣ ಪಭಾವಾ ಕಮಥೋ ಕಮಠಾಸುರೋ ಜಾಓ ||

ಅನಶನ ಮರಣದಿಂದಾಗಿ ತಾಮಲಿಯು ಈಶಾನೇಂದ್ರನಾದನು, ಬಾಲ ತಪಸ್ವಿ ಪೂರಣನು ಚಮರೇಂದ್ರನಾದನು, ಕಮಠನು ಕಮಠಾಸುರನಾದನು ಎಂಬ ಈ ವಿವರಣೆ

ತನ್ನೆಲ್ಲ ವಿಸ್ತಾರಗಳೊಂದಿಗೆ ಶೀಲಾಚಾರ್ಯ (ಶೀಲಾಂಕ) ನ ಚಉಪನ್ನ -ಮಹಾ ಪುರಿಸ - ಚರಿಯದಲ್ಲಿ (ಕ್ರಿ.ಶ. ೮೬೮) ಅರಳಿ ನಿಂತಿದೆ. ಹಿಂದಿನ ಭವಗಳಲ್ಲಿ ಪಾರ್ಶ್ವರು ಮರುಭೂತಿಯಾಗಿದ್ದಾಗ ಅವರ ತಮ್ಮನಾದ ಕಮಠನು,ಪೂರ್ವವೈರ ಸ್ಮರಣೆಯ ಪ್ರೇರಣೆಯಿಂದ, ನಾನಾ ಬಗೆಯ ಉಪಸರ್ಗಗಳನ್ನು ಆತ್ಮಧ್ಯಾನ ನಿರತ ಪಾರ್ಶ್ವರಿಗೆ ಉಂಟು ಮಾಡಿದ ವರ್ಣನೆ ಕವಿಯಿಂದ ಕವಿಗೆ ಶಿಲ್ಪಿಯಿಂದ ಶಿಲ್ಪಿಗೆ, ಕಾಲದಿಂದ ಕಾಲಕ್ಕೆ ರೋಚಕವಾಗಿ ವಿಕಸನಗೊಂಡಿದೆ. ಕಮಠ, ಕಮಠಾಸುರ, ಶಂಬರ (ಗುಣಭದ್ರರ ಉತ್ತರ ಪುರಾಣ, ಪುಷ್ಪದಂತನ ಮಹಾಪುರಾಣ), ಭೂತಾನಂದ (ವಾದಿರಾಜನ ಪಾರ್ಶ್ವನಾಥ ಚರಿತ), ಮೇಘಮಾಲಿನ್ (ದೇವಭದ್ರಸೂರ ಮತ್ತು ಪದ್ಮಕೀರ್ತಿ ಕವಿಗಳ ಕಾವ್ಯ) ಎಂಬಿತ್ಯಾದಿ ಹೆಸರುಗಳಿಂದ ಕಮಠಾಸುರನನ್ನು ಚಿತ್ರಿಸಲಾಗಿದೆ. ಶಂಬರ - ಶಂವರ, ಕಠತಾಪಸ - ಕಢತಾಪಸ, ಅಸುರೇಂದ್ರ, ಪಂಚಾಗ್ನಿತಪ, ಮೇಘಮಾಲಿನ್, ಕಮಠ - ಕಮಠಾಸುರ - ಎಂಬ ಹೆಸರುಗಳು ಜೈನಪುರಾಣ ಪ್ರಪಂಚದಲ್ಲಿ ಜನಪ್ರಿಯತೆಯೊಂದಿಗೆ ಪ್ರತಿಮೆಗಳಾಗಿಯೂ ಬಳಕೆಯಾಗಿವೆ. ತಪಸ್ಸಿನಲ್ಲಿ ತನ್ಮಯನಾಗಿ ಧ್ಯಾನಲೀನರಾದ ಪಾರ್ಶ್ವರ ಏಕಾಗ್ರತೆಯನ್ನು ಭಂಗಗೊಳಿಸಲು ಏಳು ದಿನಗಳವರೆಗೆ ಸತತವಾಗಿ, ಅಖಂಡವಾಗಿ ಘನಘೋರ ಮಳೆ, ಆರ್ಭಟ, ಬಂಡೆ ಬೆಟ್ಟಗಳ ಎಸೆತ, ಸಿಂಹ ಘರ್ಜನೆ, ಚೇಳು ಬೇತಾಳಗಳು, ಬಾಯಿಂದ ಬೆಂಕಿಯುಗುಳುವ ಭೂತಗಳು - ಮೂಲಕ ಕಮಠಾಸುರನು ಹೆದರಿಸಿ ಪ್ರಯತ್ನಿಸಿ ವಿಫಲನಾದನು. ಎಲ್ಲೋರ, ಐಹೊಳೆ, ಕಳುಗುಮಲೈ, ತಿರಕೊಲ್, ಬಾದಾಮಿ ಹೊಂಬುಜ,- ಮುಂತಾದ ಕಡೆಯ ಶಿಲ್ಪದಲ್ಲಿ ಕಮಠನು ಪಶ್ಚಾತ್ತಾಪಪಟ್ಟು, ಕಾಲಿಗೆರಗಿರುವುದನ್ನು ತೋರಿಸಿದೆ [೨೩].

ಹಿಂದಿನ ಭವದಲ್ಲಿ ಕಟ್ಟಿಗೆಯೊಳಗೆ ಸರ್ಪವಾಗಿ ಸೇರಿದ್ದ ತಮ್ಮನ್ನು ಬೆಂಕಿಯಿಂದ ಉಳಿಸಿದ್ದ ಪಾರ್ಶ್ವರಿಗೆ ಉಂಟಾದ ಉಪಸರ್ಗವನ್ನು ನಿವಾರಿಸಲು ಧರಣೇಂದ್ರ - ಪದ್ಮಾವತಿ ದೇವತೆಗಳು ಮುಂದಾಗಿ ಸ್ವಪ್ರೇರಣೆಯಿಂದ ಬಂದರು [೨೪]. ಧರಣ - ಧರಣೇಂದ್ರ, ನಾಗೇಂದ್ರ, ನಾಗಕುಮಾರ, ನಾಗರಾಜ - ಎಂಬ ಹೆಸರುಗಳ ಭವನವಾಸೀ ದೇವನ ಚಿತ್ರಣ ಜೈನ ಪರಂಪರೆಯಲ್ಲಿದೆ. ಈ ಧರಣೇಂದ್ರನು ಪಾರ್ಶ್ವನಾಥರ ಬೆನ್ನ ಹಿಂದೆ ತನ್ನ ಏಳು ಹೆಡೆಯನ್ನು ಬಿಚ್ಚಿ ಅರಳಿಸಿ ಜಿನರ ತಲೆಯ ಮೇಲೆ ಕೊಡೆಯಂತೆ ಹಿಡಿದಿದ್ದಾನೆ. ಧರಣೇಂದ್ರನ ನಾಲ್ವರು ರಾಣಿಯರು - ನಾಗಿಣಿಯರು ಸಂಗೀತ ನೃತ್ಯಗಳನ್ನೆಸಗಿದರು. ಪಾರ್ಶ್ವರು ಕಮಠನ ಮೇಲೆ ಕೋಪಿಸಲಿಲ್ಲ, ಧರಣೇಂದ್ರ -

ರಾಣಿಯರ ಮೇಲೆ ಪ್ರಸನ್ನನೂ ಆಗಲಿಲ್ಲ. ಬಾಹ್ಯದ ಯಾವ ಪರಿವೆಯೂ ಇಲ್ಲದೆ ಆತ್ಮಧ್ಯಾನ ನಿರತರಾಗಿದ್ದರು. ಮೇಘಮಾಲಿಯ (ಕಮಠಾಸುರ) ನಿರಂತರ ವೃಷ್ಟಿ - ವರ್ಷಾದಾರೆಯಿಂದ ಪ್ರವಾಹ ಉಕ್ಕಿ ನೀರಿನ ಮಟ್ಟವು ಪಾರ್ಶ್ವರ ಮೂಗಿನ ಹೊಳ್ಳೆಯ ವರೆಗೂ ಬಂದಾಗ ಧರಣೇಂದ್ರನು ತನ್ನ ಸರ್ಪ ಶರೀರವನ್ನು ಪಾರ್ಶ್ವರ ದೇಹಕ್ಕೆ ಸುರುಳಿಯಾಗಿ ಸುತ್ತಿ ನೀರಿಂದ ಮೇಲಕ್ಕೆತ್ತಿ ಹಿಡಿದು ತನ್ನ ಏಳು ಹೆಡೆಯನ್ನು ಪಾರ್ಶ್ವರ ತಲೆಯ ಮೇಲೆ ಹಿಡಿದನು - ಎಂಬ ವರ್ಣನೆಯೂ ಸಿಗುತ್ತದೆ.

ಪಾರ್ಶ್ವನಾಥರ ಲಾಂಛನ ಸರ್ಪ. ಈ ಲಾಂಛನಗಳನ್ನು ಜಿನರ ಸಿಂಹಪೀಠದ ನಡುವೆ, ಮುಂಭಾಗದಲ್ಲಿ ತೋರಿಸುವುದು ವಾಡಿಕೆ. ವಾಸ್ತವವಾಗಿ ಈ ಲಾಂಛನಗಳು ಜಿನರ ಧ್ವಜಗಳ ಮೇಲಿನ ಗುರುತುಗಳಾಗಿರುತ್ತಿದ್ದವು. ಪಾರ್ಶ್ವನಾಥರ ಧ್ವಜ ಲಾಂಛನ ಸರ್ಪವಾಗಿರುವುದಕ್ಕೆ ಐತಿಹಾಸಿಕ ಕಾರಣಗಳನ್ನು ಗುರುತಿಸಲಾಗಿದೆ. ನಾಗವು ತಮ್ಮ ಚಿಹ್ನೆ ಆಗಿದ್ದ ಆದಿವಾಸಿಗಳ ಅಥವಾ ನಾಗಾಜನಾಂಗದ ಮೂಲಕ್ಕೆ ಪಾರ್ಶ್ವರು ಸೇರಿದ್ದಿರಬಹುದು, ಇಲ್ಲವೇ ಆ ನಾಗಾಜನಾಂಗ ಪಾರ್ಶ್ವರ ಶಿಷ್ಯರಲ್ಲಿ ಪ್ರಮುಖರಾಗಿದ್ದಿರಬೇಕು - ಎಂಬ ಸೂಚನೆ ಪರಿಭಾವ್ಯವಾಗಿದೆ [೧೮]. ಪಾರ್ಶ್ವರ ಪ್ರಾಚೀನ ವಿಗ್ರಹಗಳು ಸಿಕ್ಕಿರುವ ಮಥುರಾ ಪ್ರದೇಶವು ನಾಗಗಳ ನಾಡು; ಕೃಷ್ಣನು ಕಾಳಿಂಗವನ್ನು ದಮನಿಸಿದ್ದು ಇಲ್ಲಿಯೇ. (ಆದಿ) ಶೇಷನ ಅವತಾರವಾದ ಬಲರಾಮನ (ಕ್ರಿ.ಪೂ. ೨. ಶ) ಪ್ರತಿಮೆ ಮಥುರಾದಲ್ಲಿ ಸಿಕ್ಕಿದೆ [೧೯]. ತೀರ್ಥಂಕರರಲ್ಲಿ ೨೩ನೆಯವರಾದ ಪಾರ್ಶ್ವರಿಗೇ ಅಲ್ಲದೆ ಏಳನೆಯವರಾದ ಸುಪಾರ್ಶ್ವರಿಗೂ ಸರ್ಪದ ಹೆಡೆಯಿದೆ. ಸುಪಾರ್ಶ್ವರ ತಲೆಯ ಮೇಲೆ ನಾಗೇಂದ್ರನ ಹೆಡೆಯಲ್ಲಿ ಒಂದು, ಮೂರು, ಐಯ್ದು, ಒಂಭತ್ತು ಹೆಡೆಗಳಿರುವಂತೆ ಚಿತ್ರಿಸಲಾಗಿದೆ; ಪಾರ್ಶ್ವರಿಗೆ ಏಳು ಹೆಡೆಯನ್ನು ತೋರಿಸಲಾಗುತ್ತಿದೆ. ಆದರೆ ಇದಕ್ಕೆ ಅಪವಾದಗಳೂ ಇವೆ ಎಂಬುದನ್ನು ಯು.ಪಿ.ಷಾ ತೋರಿಸಿದ್ದಾರೆ [೨೦]. ಕರ್ನಾಟಕದ ಐಹೊಳೆ (ಮೀನಾ ಬಸದಿ), ಬಾದಾಮಿ (ಗುಹೆ)ಯಲ್ಲಿರುವ ಪಾರ್ಶ್ವನಾಥರ (ಕ್ರಿ.ಶ. ೬ ಶ.) ಉಬ್ಬು ಶಿಲ್ಪದಲ್ಲಿ ಅಯ್ದೇ ಹೆಡೆಗಳಿವೆ, ಮುಂಬಯಿ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮ್ಮಿನಲ್ಲಿರುವ ಕ್ರಿ.ಪೂ. ಒಂದನೆಯ ಶತಮಾನದ ಪ್ರಾಚೀನ ಪಾರ್ಶ್ವ ಲೋಹ ಪ್ರತಿಮೆಯಲ್ಲೂ ಐದು ಹೆಡೆಗಳಿವೆ. ಅದರಿಂದ ಪಾರ್ಶ್ವ ಸುಪಾರ್ಶ್ವ ಜಿನರ ವ್ಯತ್ಯಾಸವನ್ನು ಕೇವಲ ತಲೆಯ ಮೇಲಿರುವ ಸರ್ಪದ ಹೆಡೆಗಳ ಸಂಖ್ಯೆ ಒಂದರಿಂದಲೇ ನಿರ್ಧರಿಸಬಾರದು, ಲಾಂಛನದಿಂದ ತೀರ್ಮಾನಿಸಬೇಕು. ಪಾರ್ಶ್ವರ ಲಾಂಛನ ಸರ್ಪ,

ಸುಪಾರ್ಶ್ವರ ಲಾಂಛನ ಸ್ವಸ್ತಿಕ. ಸುಪಾರ್ಶ್ವರಿಗೆ ಸ್ವಸ್ತಿಕವು ಲಾಂಛನವಾಗಿರುವಾಗ ಸರ್ಪದ - ಹೆಡೆಯ ಸಂಬಂಧ ಯಾವಾಗ, ಹೇಗೆ ಉಂಟಾಯಿತೆಂಬುದು ಅಭ್ಯಾಸಯೋಗ್ಯವಾಗಿದೆ.

ಪಾರ್ಶ್ವರಿಗೆ ಕಮಠೋಪಸರ್ಗ ಪರಿಕಲ್ಪನೆಗಿಂತ ಮೊದಲೇ ದರಣೇಂದ್ರ (ನಾಗೇಂದ್ರ) ಸಂಬಂಧವು ಏರ್ಪಟ್ಟಿತ್ತೆಂಬುದು ಗಮನಿಕೆಗೆ ತಕ್ಕ ವಿಷಯವಾಗಿದ್ದು ಇದರಲ್ಲಿ ಪೌರಾಣಿಕ ಅಂಶಕ್ಕಿಂತ ಐತಿಹಾಸಿಕ ಸಂಗತಿಯ ಹಳೆಯುಳಿಕೆಯಿದೆ. ಜತೆಗೆ ಈ ಕಲ್ಪನೆಯನ್ನು ಹರಿತವಾಗಿಸಿ ಕೊನರಿಸಿದ ಪ್ರೇರಣಾ ಮೂಲವೂ ಇದೆ. ಜೈನಾಗಮಗಳಿಗೆ ಪರಿಚಯವಿರುವ ಕಲ್ಪನೆ ಧರಣೇಂದ್ರನದು. ಸೂತ್ರಕೃತಾಂಗ ಅಂತರ್ಗತ ಮಹಾವೀರ ಸ್ತವದಲ್ಲಿ (ಸು. ಕ್ರಿ.ಪೂ. ೨ ಶ), ವ್ಯಾಖ್ಯಾಪ್ರಜ್ಞಪ್ತಿ (ಕ್ರಿ.ಶ. ೧-೩ ಶ.) ಜೀವಾಭಿಗಮ ಸೂತ್ರ, ಪ್ರಜ್ಞಾಪನ ಸೂತ್ರ, ಸ್ಥಾನಾಂಗ ಸೂತ್ರ, ನಾಯಾಧಮ್ಮ ಕಹಾಓ (ಇವೆಲ್ಲ ಕ್ರಿ.ಶ. ೨-೪ ಶ. ಕೃತಿಗಳು) ಆಗಮ ಗ್ರಂಥಗಳಲ್ಲಿ ನಾಗಕುಮಾರ ದೇವತೆಗಳ ಒಡೆಯನು ಧರಣೇಂದ್ರ ಎಂದು ಹೇಳಿದೆ. ಹಿಂದೂ ಪುರಾಣದಲ್ಲಿರುವ (ಆದಿ) ಶೇಷನ ಪ್ರತಿರೂಪವಾಗಿ ಜೈನ ಪುರಾಣದ ಧರಣನಿದ್ದಾನೆ[೨೦].

ಈ ಹಂತದಲ್ಲಿ ಬೌದ್ಧ ಧರ್ಮದಲ್ಲಿ ಪ್ರಚಲಿತವಾಗಿರುವ ಪರಿಕಲ್ಪನೆಗಳ ಪ್ರಭಾವವೂ ತೆಕ್ಕೆ ಹಾಗಿದೆ. ಬುದ್ಧರನ್ನು ಮುಚಲಿಂದನಾಗನು ಬಿರುಗಾಳಿಯಿಂದ ಉಳಿಸಿದನು. ಅಮರಾವತೀ, ನಾಗಾರ್ಜುನಕೊಂಡ ಮುಂತಾದ ಕಡೆ ದೊರೆತ ಪ್ರಾಚೀನ ಬುದ್ಧರ ತಲೆಯ ಮೇಲೆ ಹಾವಿನ ಹೆಡೆಗಳಿವೆ. ಬೋಧಿ ಪ್ರಾಪ್ತಿಯಾದ ಮೇಲೆ ಬುದ್ಧರು ಒಮ್ಮೆ ಮುಚಲಿಂದ ಮರದಡಿ ಪದ್ಮಾಸನ ಹಾಕಿ ಏಳುದಿನ ಕುಳಿತರು. ಅಕಾಲವೃಷ್ಟಿಯಾಗಿ ಏಳು ದಿನವೂ ಚಳಿಮಳೆ ಗಾಳಿ ಆಯಿತು. ಸರ್ಪರಾಜನಾದ ಮುಚ(ಚಿ)ಲಿಂದನು ಬುದ್ಧರ ದೇಹವನ್ನು ಸುತ್ತಿಕೊಂಡು,ತಲೆಯ ಮೇಲೆ ತನ್ನ ಹೆಡೆ ಹಿಡಿದು ನಿಂತನು. ಬೌದ್ಧರ ವಿನಯಪಿಟಕ, ನಿದಾನಕಥಾ, ಲಲಿತವಿಸ್ತರ (ಕ್ರಿ.ಶ. ೪-೫ ಶ), ಮಹಾವಸ್ತು ಎಂಬ ಕೃತಿಗಳಲ್ಲಿ ಈ ಕಥಾನಕವಿದೆ. ಮಳೆಯಿಂದ ಪಾರ್ಶ್ವ, ಬುದ್ಧ ಇವರನ್ನು ಸರ್ಪವು ಹೆಡೆ ಬಿಚ್ಚಿ ಕಾಪಾಡಿದ ಹಾಗೆ, ಆಗತಾನೆ ಹುಟ್ಟಿದ ಮಗು ಕೃಷ್ಣನನ್ನು ಬುಟ್ಟಿಯಲ್ಲಿಟ್ಟು ಯಮುನಾ ನದಿಯನ್ನು ದಾಟುವಾಗ ಸರ್ಪವು ಹೆಡೆ ಹಿಡಿದು ರಕ್ಷಿಸಿತು. ಶಿವನಿಗೆ ಸರ್ಪವು ಆಭರಣವಾಗಿದೆ. ವಿಷ್ಣುವು ಅನಂತಶಯನನಾಗಿದ್ದಾನೆ. ಹೀಗೆ ಎಲ್ಲ ಧರ್ಮಗಳಲ್ಲೂ ನಾಗ ಸಂಬಂಧವಿದೆ.

ಮೇಘಮಾಲಿಯು ಪಾರ್ಶ್ವರ ಮೇಲೆ ಮಳೆ ಸುರಿಸಿದನೆಂಬುದು ವೈದಿಕ ಕಲ್ಪನೆಯ ಪರ್ಜನ್ಯಕ್ಕೆ (ಮಳೆಯ ದೇವನಾದ ಇಂದ್ರ) ಸಮನಾಗಿದೆ. ಇಂದ್ರನು ಕೃಷ್ಣ ಹಾಗೂ ಗೋಕುಲದವರ ಮೇಲೆ ಒಂದೇ ಸಮನೆ ಮಳೆಗರೆದನು, ಆಗ ಕೃಷ್ಣನು ಗೋವರ್ಧನಗಿರಿಯನ್ನು ಎತ್ತಿ ಹಿಡಿದು ಕಾಪಾಡಿದನು. ಅಲ್ಲಿನ ಗಿರಿ ಆಶಯವನ್ನು (hill - motif) ಇಲ್ಲಿ ನಾಗೇಂದ್ರ ಆಶಯವಾಗಿಸಿದೆ. ಮೇಘಮಾಲೀ ಎಂಬ ಹೆಸರು ಔತ್ತರೇಯ - ಶ್ವೇತಾಂಬರ ಪರಂಪರೆಗೂ ಶಂಬರ ಎಂಬ ಹೆಸರು ದಾಕ್ಷಿಣಾತ್ಯ -ದಿಗಂಬರ ಪರಂಪರೆಗೂ ಮೀಸಲು. ಇದಲ್ಲದೆ ಪುಷ್ಪದಂತನ ಅಪಭ್ರಂಶ ಮಹಾಪುರಾಣ (ಸು. ೯೫೦), ವಾದಿರಾಜನ ಸಂಸ್ಕೃತ ಪಾರ್ಶ್ವನಾಥಚರಿತ್ರ (೧೦೨೫) ಮತ್ತು ಪದ್ಮಕೀರ್ತಿಯ ಅಪಭ್ರಂಶ ಪಾಸನಾಹಚರಿಉ (೧೦೭೭) ಕಾವ್ಯಗಳಲ್ಲಿ ಶಂಬರನು ಪಾರ್ಶ್ವನಾಥರವನ್ನು ಬಹಿರ್ಮುಖರನ್ನಾಗಿಸಲು ನಾನಾ ರೀತಿಯ ಹೆದರಿಕೆಗಳನ್ನಲ್ಲದೆ ಆಕರ್ಷಕ ಪ್ರಲೋಭನೆಗಳನ್ನೂ ಒಡ್ಡುವ ಚಿತ್ರಣವಿದೆ. ಇದು ಬುದ್ಧನ ಜೀವನದಲ್ಲಿ ವರ್ಣಿಸಲಾಗಿರುವ ಮಾರ ವಿಜಯದ ಪ್ರಭಾವವಾಗಿದೆ. ಮುಖ್ಯವಾಗಿ ಈ ಭಾಗದ ವರ್ಣನೆ ಪದ್ಮಕೀರ್ತಿ ಕವಿಯಲ್ಲಿ ಅದ್ಭುತವಾಗಿ ಮೂಡಿದೆ. ಇದಕ್ಕೆ ಸ್ಫೂರ್ತಿಯೆಂಬಂತೆ ಎಲ್ಲೋರದ ೩೨ - ೩೩ ನೆಯ ಸಂಖ್ಯೆಯ ಗುಹೆಗಳಲ್ಲೂ (ಕ್ರಿ.ಶ. ೯ನೇ ಶ.) ಕರ್ನಾಟಕದ ಹೊಂಬುಜದ ಕಮಠೋಪಸರ್ಗ ಪಾರ್ಶ್ವನಾಥ ಬಸದಿಯಲ್ಲೂ (ಕ್ರಿ.ಶ. ೯ ಶ.) ಇರುವ ಶಿಲ್ಪಗಳ ಉಪಸರ್ಗ ಚಿತ್ರಣ ನಯನ ಮನೋಹರವಾಗಿದೆ [೨೨].

ಪದ್ಮಾವತೀ ದೇವಿಯ ಚಿತ್ರಣ ಕಾವ್ಯಗಳಲ್ಲಿ ಗೌಣವಾಗಿ ಕಂಡರೂ ದಿಗಂಬರ ಪರಂಪರೆಯಲ್ಲೂ, ಶಿಲ್ಪದಲ್ಲೂ ವಿಶಿಷ್ಟ ಸ್ಥಾನ ಪಡೆದಿದೆ. ಕ್ರಿ.ಶ. ಅಯ್ದನೆಯ ಶತಮಾನದಿಂದಲೇ ಕರ್ನಾಟಕದಲ್ಲಿ ಪದ್ಮಾವತೀ ದೇವಿಗೆಂದೇ ನಿರ್ಮಿಸಲಾದ ಪ್ರತ್ಯೇಕ ಗುಡಿಗಳಿವೆ ; ಕಲ್ಲಿಲಿ ಮತ್ತು ಹೊಂಬುಜಗಳು ಉಲ್ಲೇಖನೀಯ ಪ್ರಾಚೀನ ಪದ್ಮಾವತೀ ದೇವಿಯ ಉಪಾಸನಾ ತಾಣಗಳು. ಶಿಲ್ಪದಲ್ಲಿ ಕೂಡ, ಧರಣೇಂದ್ರನು ತನ್ನ ಹೆಡೆಗಳನ್ನೇ ಕೊಡೆಯಂತೆ ಮಾಡಿ ಹಿಡಿದಿದ್ದರೂ, ಪದ್ಮಾವತೀ ದೇವಿಯು ಪಾರ್ಶ್ವರ ಎಡಭಾಗಕ್ಕೆ ನಿಂತು ವಜ್ರದ ಕೊಡೆಯನ್ನು ಹಿಡಿದಿರುವ ಚಿತ್ರಣವಿದೆ ; ಕಲಕತ್ತದ ಇಂಡಿಯನ್ ಮ್ಯೂಸಿಯಮ್ಮಿನಲ್ಲಿರುವ ಕ್ರಿ.ಶ. ಒಂಭತ್ತನೆಯ ಶತಮಾನದ ಕಮಠೋಪಸರ್ಗಶಿಲ್ಪದಲ್ಲಿ ಪದ್ಮಾವತಿಯು ಪಾರ್ಶ್ವರ ಬಲಭಾಗದಲ್ಲಿ ಕೊಡೆ ಹಿಡಿದು ನಿಂತಿರುವುದು ವೈಶಿಷ್ಟ್ಯ ಪೂರ್ಣವಾಗಿದೆ. ಸಾಮಾನ್ಯವಾಗಿ ಉಪಸರ್ಗರಹಿತ ಪಾರ್ಶ್ವರ ಕಾಯೋತ್ಸರ್ಗ

(ಖಡ್ಗಾಸನ) ಇಲ್ಲವೇ ಪರ್ಯಂಕಾಸನ (ಪದ್ಮಾಸನ) ಶಿಲ್ಪಗಳಲ್ಲಿ, ಧರಣೇಂದ್ರನು ಬಲಭಾಗದಲ್ಲೂ ಪದ್ಮಾವತಿಯು ಎಡಭಾಗದಲ್ಲೂ ಕಂಡುಬರುತ್ತಾರೆ; ಇವರನ್ನು ಯಕ್ಷ - ಯಕ್ಷಿಯ ರೆಂದೂ, ಜಿನಶಾಸನ ದೇವತೆಗಳೆಂದೂ ಮನ್ನಿಸಲಾಗಿದೆ [೨೩]. ಉದಯಗಿರಿ - ಖಂಡಗಿರಿ ಗುಹೆಗಳಲ್ಲಿ ಪದ್ಮಾವತೀ ದೇವಿಯ ಪ್ರಾಚೀನ ಉಬ್ಬು ಶಿಲ್ಪ ಚಿತ್ರಣ ಭವ್ಯವಾಗಿದೆ. ಕನ್ನಡದಲ್ಲಿ ಪದ್ಮಾವತೀ ದೇವಿಯ ಸ್ವತಂತ್ರ ಕಾವ್ಯಗಳೂ ಯಕ್ಷಗಾನ ನಾಟಕಗಳೂ ಬಂದಿವೆ. ಪಾರ್ಶ್ವನಾಥರ ಅಕ್ಕಪಕ್ಕ ಧರಣೇಂದ್ರ ಪದ್ಮಾವತಿಯರು ನಿಂತಿರುವ ಮತ್ತು ಕುಳಿತಿರುವ - ಎರಡೂ ರೀತಿಯ ಶಿಲ್ಪಗಳಿವೆ. ಪಾರ್ಶ್ವನಾಥರ ಸರ್ವತೋಭದ್ರಿಕಾ (ಚತುರ್ಮುಖ) ಶಿಲ್ಪಗಳು ಕೂಡ ಕ್ರಿ.ಶ. ಏಳನೆಯ ಶತಮಾನದ ವೇಳೆಗೆ ಕಂಡು ಬಂದಿವೆ. ಪಾರ್ಶ್ವರ ತಲೆಯ ಮೇಲಿನ ಧರಣೇಂದ್ರನ ಹೆಡೆಗಳಲ್ಲಿ ಸಾಕಷ್ಟು ವೈವಿಧ್ಯವೂ ಇದೆ - ನೀಳ, ದುಂಡಾಕಾರ, ಕಪ್ಪೆ ಚಿಪ್ಪು, ತೀರ ಅಗಲ, ಬೋಳು ಬೋಳು, ಏಳೂ ಹೆಡೆಗಳ ಒಂದೊಂದೂ ಮುಖದಲ್ಲಿ ಕಣ್ಣು ಮೂಗು ಸಹಿತ ಚಿತ್ರಣ, ಅಲಂಕೃತ - ಅನಲಂಕೃತ, ಮುಖಕ್ಕೆ ಹೊಂದುವ - ಹೊಂದದಿರುವ, ಬೆನ್ನ ಹಿಂದೆ ಕೆಳಗಿಂತ ಮೇಲಿನವರೆಗೆ ಸುತ್ತಿ ಸುರುಳಿಯಾಗಿರುವ, ಇತ್ಯಾದಿ. ಪಾರ್ಶ್ವನಾಥರ ಶಿಲ್ಪ ಚಿತ್ರಣದಲ್ಲಿ ಇರುವ ವೈವಿಧ್ಯ, ವೈಭವ, ವಿಲಾಸ ವಿಸ್ತಾರಗಳು ಇನ್ನಾವ ತೀರ್ಥಂಕರ ಚಿತ್ರಣದಲ್ಲೂ ಇಲ್ಲ; ಶಿಲ್ಪಿಗಳಿಗೆ ಜೈನಕಲೆಯಲ್ಲಿ ತಮ್ಮ ಕಲಾ ಕೌಶಲವನ್ನು ಪ್ರಕಟಿಸಲು ಹೆಚ್ಚು ಅವಕಾಶ ಇರುವುದು ಕೂಡ ಪಾರ್ಶ್ವನಾಥರ ಚಿತ್ರಣದಲ್ಲೇ.

ಈ ಸಂಪ್ರಬಂಧದ ಕಡೆಯಲ್ಲಿ ಹೇಳಬೇಕಾದ ಮತ್ತೊಂದು ಮಾತು ! ಸಾಮಾನ್ಯವಾಗಿ ಪಾರ್ಶ್ವನಾಥರ ಶಿಲ್ಪ ಚಿತ್ರಣ ಇರುವೆಡೆಗಳಲ್ಲಿ ಬಾಹುಬಲಿಯ ಚಿತ್ರಣವೂ ಕಂಡುಬರುತ್ತದೆ; ಇದಕ್ಕೆ ವಿಶಿಷ್ಟ ಕಾರಣ ಇರಬಹುದು.

ಅಡಿ ಟಿಪ್ಪಣಿಗಳು

೧ ಆಚಾರಾಂಗ, ಇಂಗ್ಲಿಷ್ ಭಾಷಾಂತರ, ಜೈನ ಸೂತ್ರ ಭಾಗ - ೧, ೧೮೯೫
(ಸಂ) ಪುಪ್ಫಭಿಕ್ಖು, ಸುತ್ತಾಗಮೇ -೧, ದೆಹಲಿ, ೧೯೫೩: ೧- ೯೯
(ಸಂ) ಚಂದ್ರ, ಕೆ.ಆರ್., ೧೯೯೭ (ಪ್ರಥಮಾಧ್ಯಾಯ ಮಾತ್ರ)

೨ ಸೂಯಗಡಂ - ಸೂತ್ರ ಕೃತಾಂಗಃ (ಸಂ) ಪಿ.ಎಲ್. ವೈದ್ಯ, ಪುಣೆ, ೧೯೨೮

೩ ದಶವೈಕಾಲಿಕ ಸೂತ್ರ, ಸುತ್ತಾಗಮೇ -೨, ೧೯೫೪: ೯೪೭-೭೬

೪ ಉತ್ತರಾಧ್ಯಯನ, ಜಿನದತ್ತ ಸೂರಿ ಜ್ಞಾನ ಭಂಡಾರ, ಮುಂಬಯಿ, ೧೯೩೫

೫ (a) (Isibha siyam Suttaim (Rishibhastit sutra),ed. Mahopadhyay Vinayasagar, (Enligh Tra) Kalamath Sastri and Dinesh Chandra Sharma ; 1988; Pp. 132-39

(b) Painnaya Suttaim, Pt.1., Jain Agama Series No.17; 1984. Pp 181-256.

೬ ಇಲ್ಲಿನ ಆಗಮ ಗ್ರಂಥಗಳ ಪ್ರಕಾಶನ - ಸಂಪಾದನ ಮತ್ತು ಆವೃತ್ತಿ - ಇಸವಿ ವಿವರಗಳು ಜೈನ ಕಥಾಕೋಶ, (ಸಂ) ಹಂಪ. ನಾಗರಾಜಯ್ಯ, ೧೯೯೭ - ಇದರ ಅನುಬಂಧದಲ್ಲಿ ಕೊಟ್ಟಿರುವಂತೆಯೇ ಇದೆ.

೭ Dhaky, M.A., ed., Arhat Parsva and Dharanendra Nexus. 1997: ಈ ಗ್ರಂಥದ ಪ್ರಯೋಜನ ಪಡೆದಿದ್ದೇನೆ.

೮ Walter Schubring, The Doctrine of the Jainas, reprint, Delhi, 1978

೯ ಹೀರಾಲಾಲ್ ಜೈನ್, ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ ; (ಕನ್ನಡ ಅನುವಾದ) ಮಿರ್ಜಿ ಅಣ್ಣಾರಾಯ, ಸೊಲ್ಲಾಪುರ, ದ್ವಿತೀಯ ಆವೃತ್ತಿ - ೧೯೮೧ : ಪುಟ . ೨೬

೧೦ Dhaky, M.A.; Ed. 1997: p. 11. F.N. 23

೧೧ Shah, U.P., The Historical Origin and Ontological Interpretation of Arhat Parsva's Association with Dharanendra - in Dhaky, M.A., Ed., 1997: 29-43.

೧೨ Dhaky : 1997: 4

೧೩ Shah , U.P. in Dhaky : 1997 : 31

೧೪ ibid, p. 38

೧೫ ibid, p. 32

೧೬ ನಾಗರಾಜಯ್ಯ, ಹಂಪ, ಸಾಂತರರು - ಒಂದು ಅಧ್ಯಯನ , ಹೊಂಬುಜ, ೧೯೯೭: ೨೧೧- ೧೮

೧೭ ಗುಣಭದ್ರಾಚಾರ್ಯರ ಉತ್ತರ ಪುರಾಣದಲ್ಲಿಯೂ ಈ ಘಟನೆ ಬಂದಿದೆ.

೧೮ ಷಾ, ಯು.ಪಿ; ಡಾಕಿ : ೯೯೭ : ೩೩ ಮತ್ತು ೯

೧೯ ಷಾ, ಯು.ಪಿ; ಡಾಕಿ: ೧೯೯೭ : ೩೮

೨೦ ಅದೇ ; ೧೯೯೭ : ೩೪

೨೧ ಅದೇ ; ೧೯೯೭ : ೭. ಜತೆಗೆ ನೋಡಿ, ಪುಟ. ೧೩ ರಲ್ಲಿರುವ ಅಡಿ ಟಿಪ್ಪಣಿ ೪೧.

೨೨ ನಾಗರಾಜಯ್ಯ, ಹಂಪ : ಸಾಂತರರು : ೧೯೯೭ : ೨೧೧ - ೧೮

೨೩ ನಾಗರಾಜಯ್ಯ, ಹಂಪ : ಯಕ್ಷ - ಯಕ್ಷಿಯರು : ೧೯೭೬

ಸಿದ್ಧರಾಮನ ಒಂದು ವಚನ

- ಡಾ. ಬಸವಲಿಂಗ ಸೊಪ್ಪಿಮಠ

ಗುರುವಾಕ್ಯದಿಂದ ನಾರದನಿಗನಂತ ಜನ್ಮಪ್ರಳಯವಾಯಿತ್ತು
ಗುರುವಾಕ್ಯದಿಂದ ಚಿದ್ಘನ ಶಿವಾಚಾರ್ಯರಿಗೆ ಬೋಧರತ್ನ ದೊರಕಿತ್ತು
ಗುರುವಾಕ್ಯದಿಂದ ಮಳೆ ಮಲ್ಲೇಶಂಗೆ ಪಾತಾಳ ಪದಾರ್ಥ ಸಿದ್ಧಿಯಾಯಿತ್ತು
ಗುರುವಾಕ್ಯದಿಂದ ವೀರಸೇನಂಗೆ ರಣಭೂಮಿ ಕಂಪಿಸಿತ್ತು
ಗುರುವಾಕ್ಯದಿಂದ ಅನಂತಜನರಿಗೆ ಅನಂತಫಲಗಳಾದವು
ಗುರುವಾಕ್ಯದಿಂದ ಪ್ರಮಥರ ಮನೆಯಲ್ಲಿ ಪರಮಾತ್ಮ ಸಂಚರಿಸಿದನು
ಗುರುವಾಕ್ಯದಿಂದ ಆ ರಾಮಸಿದ್ಧನಿಗೆ ಅಘೋರಮೂರ್ತಿ ಪ್ರಾಪ್ತವಾಯಿತ್ತು
ಇದು ಕಾರಣ, ಗುರುವೆ ಘನವೆಂದರಿಂದು
ಗುರುವಾಗಿ ಗುರುಪೂಜೆಯ ಮಾಡಬೇಕಲ್ಲದೆ
ಗುರುಸಮ್ಮುಖದಲ್ಲಿ ಗದ್ದುಗೆಯನೇರಿದಡೆ
ಕಪಿಲಸಿದ್ಧ ಮಲ್ಲಿಕಾರ್ಜುನ ಕರಸಿತಗ ಕೇಳಾ ನಿಜಗುಣಯ್ಯಾ [1]

ಗುರುವಿನ ಮಹಾತ್ಮೆಯನ್ನು ಹೇಳುತ್ತಿರುವ ಸಿದ್ಧರಾಮನ ಈ ವಚನ ಕೆಲವು ಅಪೂರ್ವ ವಿಷಯಗಳನ್ನು ತಿಳಿಸುತ್ತದೆ. ಗುರು ಕೃಪೆಯಿಂದ ಸಾಧ್ಯರೂ ವೇದ್ಯರೂ ಎನಿಸಿರುವ ಇಲ್ಲಿನ ವ್ಯಕ್ತಿಗಳಲ್ಲಿ ನಾರದ ಎಂಬ ಪೌರಾಣಿಕ ವ್ಯಕ್ತಿಯನ್ನು, ವೀರಸೇನ ಎಂಬ ಯಾವುದೋ ಒಬ್ಬ ವೀರನನ್ನು ಹೊರತುಪಡಿಸಿದರೆ, ಉಳಿದವರೆಲ್ಲಾ ಚಾರಿತ್ರಿಕ ವ್ಯಕ್ತಿಗಳೇ ಆಗಿದ್ದು, ಬಹುತೇಕವಾಗಿ ಸಿದ್ಧರಾಮನ ಸಮಕಾಲೀನರಾಗಿದ್ದಾರೆ. ಹಾಗಾದರೆ ಸಿದ್ಧರಾಮ ಸ್ಮರಿಸುವ ಇಲ್ಲಿನ' ಚಿದ್ಘನ ಶಿವಾಚಾರ್ಯ, ಮಳೆ ಮಲ್ಲೇಶ ಮತ್ತು ರಾಮ ಸಿದ್ಧ ಯಾರು? ಎಂದು ನೋಡುವುದೇ ಇಲ್ಲಿನ ನನ್ನ ಉದ್ದೇಶ.

ಚಿದ್ಘನ ಶಿವಾಚಾರ್ಯ ಹೆಸರು ಹೂಲಿ (ಬೆಳಗಾವಿ ಜಿ)ಯ ಕಾಳಾಮುಖ ಮಠ ಪರಂಪರೆಯಲ್ಲಿ ಗೋಚರಿಸುತ್ತದೆ. ಚಿದ್ಘನ ಹೆಸರಿನವರು ಶಿವಾಚಾರ್ಯರು ಈ ಪೀಠದ ಸ್ಥಾನಾಚಾರ್ಯರಾಗಿ ಹೋಗಿದ್ದಾರೆ. ಬಾದಾಮಿ ಚಾಳುಕ್ಯರ ಕಾಲದಲ್ಲಿ ದತ್ತಿದಾನಗಳನ್ನು ಸ್ವೀಕರಿಸಿ ಹೆಸರಾಗಿದ್ದ (ಇಮ್ಮಡಿ ಪುಲಕೇಶಿಯ ದಾನಶಾಸನ ಇಲ್ಲಿದೆ) ಹೂಲಿ ಮಠದಲ್ಲಿ

---

[1] ಡಾ. ಆರ್.ಸಿ. ಹಿರೇಮಠ (ಸಂ),ಸಿದ್ಧರಾಮೇಶ್ವರ ವಚನಗಳು, ವ.ಸಂ. ೫೨೮

ಚಿದ್ಘನ ಲಿಂಗ ಹೆಸರಿನ ಮೂವರು, ಚಿದ್ಘನ ಹೆಸರಿನ ಇಬ್ಬರು ಶಿವಾಚಾರ್ಯರು ಮಠದ ವಂಶಾವಳಿಯಲ್ಲಿ ಇದ್ದಾರೆ.[2] ಇವರಲ್ಲಿ ಸಿದ್ಧರಾಮನ ೧೨ನೆಯ ಶತಮಾನಕ್ಕೆ ಸ್ವಲ್ಪ ಹಿಂದಿನವರಾದ (ಕ್ರಿ.ಶ. ೧೦೮೬ - ೧೧೦೭) ಒಬ್ಬ ಚಿದ್ಘನರೂ, ಕ್ರಿ.ಶ. ೭೦೮-೭೨೨ರಲ್ಲಿ ಇನ್ನೊಬ್ಬ ಚಿದ್ಘನರೂ ಆಗಿಹೋಗಿದ್ದಾರೆ. ಇವರಲ್ಲಿ ತನ್ನ ಸಮಕಾಲೀನ ಚಿದ್ಘನ ಶಿವಾಚಾರ್ಯರ ಕುರಿತು, ಅವರು ಗುರುಕೃಪೆಯಿಂದ ಸಾಧಿಸಿದ 'ಬೋಧರತ್ನ'ದ ಕುರಿತು (ಗುರುಬೋಧೆ?) ಸಿದ್ಧರಾಮ ಉಲ್ಲೇಖಿಸಿದ್ದಾನೆ ಎಂದು ಭಾವಿಸಬಹುದು. ಹೂಲಿಮಠ ವೀರಶೈವಕ್ಕೆ ಹೊರಳುವ ಮುನ್ನ ಕಾಳಾಮುಖರ ಮಠವಾಗಿದ್ದು, ಅಲ್ಲಿ ರೇವಣಸಿದ್ಧ ಮರುಳಸಿದ್ಧ ಮೊದಲಾದ ವೀರಶೈವ ಆಚಾರ್ಯರು (ಗುರುಸ್ಥಲ) ತಪೋನುಷ್ಠಾನಗೈದ ಗುಹಾಲಯಗಳಿವೆ. ರೇವಣಸಿದ್ಧನನ್ನು 'ಅಪ್ಪ' ನೆಂದೇ ಸ್ಮರಿಸುವ ಸಿದ್ಧರಾಮ[3] ರೇವಣಸಿದ್ಧನ ಈ ನೆಲೆಯಲ್ಲಿ ಆಗಿಹೋದ ಚಿದ್ಘನ ಶಿವಾಚಾರ್ಯರನ್ನು ಸ್ಮರಿಸಿರುವ ಸಂಭವ ಇದೆ. ಈ ಚಿದ್ಘನ ಶಿವಾಚಾರ್ಯರ ಬಗೆಗೆ ನಮಗೆ ಚ್ಚಿನ ವಿವರಗಳು ತಿಳಿಯವು. ಆದರೆ ಕ್ರಿ.ಶ ೩ನೆ ಶತಮಾನದಿಂದ ತನ್ನ ಪೀಠಪಂರಪರೆಯನ್ನು ಹೇಳಿಕೊಳ್ಳುವ ಹೂಲಿಮಠದ ವಂಶಾವಳಿಯು ಚಾರಿತ್ರಿಕ ಎಂಬುದನ್ನು ಈ ಶಿವಾಚಾರ್ಯರ ಉಲ್ಲೇಖದ ಮೂಲಕ ಸಿದ್ಧರಾಮನ ವಚನ ಸಮರ್ಥಿಸುತ್ತದೆ. ಸಿದ್ಧರಾಮನಿಗೆ ಪೂರ್ವದಲ್ಲಿ ಈ ಹೆಸರಿನ (ಚಿದ್ಘನ) ಶಿವಾಚಾರ್ಯರು ಯಾವ ಮಠಗಳಲ್ಲಿಯೂ, ಕಾಣಿಸಿಕೊಳ್ಳದೇ ಇರುವುದರಿಂದ, ಸಿದ್ಧರಾಮ ಸ್ಮರಿಸುವ ಈ ಸ್ಥಾನಚಾರ್ಯರು ಹೂಲಿಮಠಾಧಿಪರೆಂದೇ ನನ್ನ ಭಾವನೆ.

ಸಿದ್ಧರಾಮ ಎತ್ತಿ ಹೇಳುವ ಇನ್ನೊಂದು ಹೆಸರು ಮಳೆ ಮಲ್ಲೇಶನದು. ಮಳೆಯ ಮಲ್ಲೇಶ ಹೆಸರಿನ ಅನೇಕರು ವೀರಶೈವ ಕಾವ್ಯ ಪುರಾಣಗಳಲ್ಲಿ ನಮ್ಮ ಕಣ್ಣಿಗೆ ಬೀಳುತ್ತಾರೆ. ಮುಖ್ಯವಾಗಿ, ಮಕ್ಕೆಯಲ್ಲಿ ಮಳೆಯ ಪವಾಡ ಮೆರೆದು ಏಳುನೂರು ಖಲಿಂದರಿಂದ ಮನ್ನಣೆ ಗಳಿಸಿದ ಮಳೆಯ ಮಲ್ಲೇಶ, 'ಪ್ರೌಢರಾಯನ ಕಾವ್ಯ'ದ ಕರ್ತೃ ಅದೃಶ್ಯನ ಗುರು ಬೆಳ್ಳುಬ್ಬೆ ಮಳೆಯ ಮಲ್ಲೇಶ ಇತ್ಯಾದಿ. ಇವರಲ್ಲಿ ಮಳೆ ಪವಾಡದ ಮಳೆಯ ಮಲ್ಲೇಶ ಹಾಗೂ ಸಾರಂಗಮಠದ ಮಳೆಯಮಲ್ಲೇಶ ಅಭಿನ್ನರಾಗಿದ್ದು, ಸ್ಥೂಲವಾಗಿ ಇವರ ಕಾಲ ಕ್ರಿ.ಶ. ೧೫೨೦ ಇಲ್ಲವೇ ೧೫ನೆಯ ಶತಮಾನದ ಉತ್ತರಾರ್ಧ. ಹಾಗಾದರೆ ೧೫ನೇ

---

[2] ಡಾ. ಗುರುಲಿಂಗ ಕಾಪಸೆ (ಸಂ). ಮಧುರಚೆನ್ನರ ಲೇಖನಗಳು, ಪು. ೧೪-೧೬

---

೩. 'ಅಪ್ಪ ರೇವಣಸಿದ್ಧ, ನೀರು ಹೊತ್ತನೆಂಟರು' - ಸಿದ್ಧರಾಮ (ಪೂರ್ವೋಕ್ತ, ವ.ಸಂ. ೩೬೭)

ಶತಮಾನದ ಈ ಮಳೆಯ ಮಲ್ಲೇಶನನ್ನು ಹೊರತು ಪಡಿಸಿ, ೧೨ನೇಯ ಶತಮಾನದ ಸಿದ್ಧರಾಮ ಸ್ಮರಿಸುವ, ಅವನ ಪೂರ್ವದ ಇನ್ನೊಬ್ಬ ಮಳೆಯ ಮಲ್ಲೇಶ ಯಾರು?

'ಗುರುರಾಜ' ಚಾರಿತ್ರದಲ್ಲಿ ಸಿದ್ಧನಂಜೇಶ ಮಳೆಯ ಮಲ್ಲೇಶನ ಕುರಿತು ಬರೆಯುತ್ತ, ಮಳೆಯ ಮಲ್ಲೇಶನ ಸಂಪ್ರದಾಯ (ವೀರಶೈವ 'ಮಳೆ ಬಿಗಿ' ಈತನದು) ದ ಮೂಲ ಪುರುಷನಾಗಿ ಸಿದ್ಧಮಲ್ಲೇಶ ಎಂಬಾತನ ಹೆಸರು ಹೇಳುತ್ತಾನೆ.[೪] ಸಿದ್ಧ ಮಲ್ಲೇಶನಿಗೆ ಪಂಚವಣ್ಣಿಗೆಯಾರ್ಯ, ಪಡವಡಿ ಸ್ವಾಮಿ, ಮುತ್ತಿನ ಕಥೆಯಯ್ಯ ಎಂಬ ಮೂರು ಪರ್ಯಾಯನಾಮಗಳಿರುವುದಾಗಿ ತಿಳಿಸುತ್ತಾನೆ.[೫] ಸಿದ್ಧನಂಜೇಶ ಹೇಳುವ ಮಳೆಯ ಮಲ್ಲೇಶ ಸಂಪ್ರದಾಯದ ಮೂಲಕ ಈ ಸಿದ್ಧಮಲ್ಲೇಶನೇ ಸಿದ್ಧರಾಮ ಹೇಳುವ ಮಳೆ ಮಲ್ಲೇಶನಾಗಿರಬಹುದೆ? ಮಳೆಯ ಮಲ್ಲೇಶ ಹೆಸರು ಅನೇಕರಿಗೆ ಇರುವುದರಿಂದ 'ಮಳೆ' ಪೀಠದಲ್ಲಿ ಕುಳಿತವರೆಲ್ಲ ಮಳೆಯ ಮಲ್ಲೇಶ ಅಭಿದಾನ ಹೊಂದಿದಂತಿದೆ. 'ಮಳೆ ' ಪದ ಪ್ರಾಯಶಃ ಮಲೆ (ಬೆಟ್ಟ) ಯಿಂದ ಬಂದಿದ್ದು, ಮಲೆಯ ಮಲ್ಲೇಶ (ದ್ವಿರುಕ್ತಿ) ಮೂಲ ಹೆಸರಾಗಿರಬಹುದು. ಮಳೆಗೆ 'ಮಲೆ ' ಅರ್ಥ ಹೇಳಲಾಗದೆ ಈಚಿನವರು ಮಳೆ ಪವಾಡದ ಕತೆ ಕಟ್ಟಿದರೆ? ಗಮನಿಸಬೇಕಾದ ಸಂಗತಿ ಎಂದರೆ, ಮಳೆಯ ಮಲ್ಲೇಶ ಎಂಬಾತನಿಗೆ ಸಾರಂಗ ಎಂಬ ಹೆಸರಿದ್ದು, ಶ್ರೀಶೈಲ ಸಾರಂಗಮಠದ ಸ್ಥಾಪಕನೀತ. ಈತ ಮತ್ಸ್ಯೇಂದ್ರನಾಥ ಎಂಬ ನಾಥಸಿದ್ಧನ ಶಿಷ್ಯನೆಂದು ನಾನು ಹೇಳಿದ್ದೇನೆ.[೬] ಮತ್ಸ್ಯೇಂದ್ರನಾಥನ ಕಾಲ ಸು. ಕ್ರಿ.ಶ. ೧೧ನೇ ಶತಮಾನದ ಉತ್ತರಾರ್ಧ ವಾಗಿದ್ದು (ಆತನ ಶಿಷ್ಯ ಗೋರಕ್ಷ ಅಲ್ಲಮ - ರೇವಣರ ಸಮಕಾಲೀನ) ಮಳೆಯ ಮಲ್ಲೇಶ ಹೆಸರಿನ ಈ ಸಾರಂಗಸಿದ್ಧನೇ ಸಿದ್ಧರಾಮ ಸ್ಮರಿಸುವ ಮಳೆಯ ಮಲ್ಲೇಶನೆಂದು ತೋರುತ್ತದೆ. ಗುರುವಾಕ್ಯದಿಂದ ಮಳೆ ಮಲ್ಲೇಶಂಗೆ ಪಾತಾಳ ಪದಾರ್ಥ ಸಿದ್ಧಿಯಾಯಿತ್ತು ಎಂಬ ಸಿದ್ಧರಾಮನ ಹೇಳಿಕೆಯಲ್ಲಿನ ಪಾತಾಳ ಪದಾರ್ಥ ಸಿದ್ಧಿ ವಾಸ್ತವವಾಗಿ ಏನೇ ಇರಲಿ, ಇದು ನಾಥ ಸಿದ್ಧರಿಗೆ ಸಂಬಂಧಿಸಿದ ಯಾವುದೋ ಯೋಗ ಸಿದ್ಧಿ (ಕಾರ್ಯಸಿದ್ಧಿ?) ಎಂಬುದು ಮೇಲ್ನೋಟಕ್ಕೇ ಅರಿವಿಗೆ ಬರುತ್ತದೆ. ಸಾರಂಗ ಸಿದ್ಧ ಸಿದ್ಧನೇ ಇರುವುದರಿಂದ ಸಿದ್ಧರಾಮ ಹೇಳುವ ಮಳೆಯ ಮಲ್ಲೇಶ,

---

[೪] ಪ್ರೊ. ಸಂ. ಶಿ. ಭೂಸನೂರಮಠ (ಸಂ), ಗುರುರಾಜ ಚಾರಿತ್ರ, ಸಂ. ೩, ಪ. ೨೩

[೫] ಅದೇ , ಪ. ೨೬

[೬] ಅದೇ

ಗುರುರಾಜ ಚಾರಿತ್ರ ಹೇಳುವ ಸಿದ್ಧಮಲ್ಲೇಶ ಬಹುಶಃ ಒಬ್ಬ ವ್ಯಕ್ತಿಯೇ ಇರಬೇಕು. ಹಾಗೂ ಈತನಿಗೂ ಸಿಂಪಪರ್ಷಿಯ ಕಾಳಾಮುಖ ಆಚಾರ್ಯ ಮಳೆಯಾಳ ಪಂಡಿತನಿಗೂ ಏನಾದರೂ ಸಂಭವವಿರಬಹುದೇ? ಎಂಬುದನ್ನು ಯೋಚಿಸಬೇಕು. ಸಾರಂಗಮಠ ಗುರುಸ್ಥಲದ ಮಠವಾಗಿದ್ದು, ಮರುಳಸಿದ್ಧನ ಉಜ್ಜಯಿನಿ ಸಿಂಹಾಸನಕ್ಕೂ ಈ ಮಠಕ್ಕೂ ಸಂಬಂಧವಿದೆ. ಮರುಳಸಿದ್ಧ ಚತುರಾಚಾರ್ಯರಲ್ಲಿ ಒಬ್ಬನಾಗಿದ್ದು ರೇವಣಸಿದ್ಧನ ಶಿಷ್ಯನಾಗಬೇಕು. ರೇವಣ ಸಿದ್ಧನ ಕಾಲದಲ್ಲಿಯೇ ಮಳೆಯ ಮಲ್ಲೇಶ ಹೆಸರಿನ ಸಾರಂಗಸಿದ್ಧ ಇದ್ದಾನೆ. ಮಳೆಯ ಮಲ್ಲೇಶ ಸಾರಂಗ ಮಠಕ್ಕೂ - ಮರುಳಸಿದ್ಧನ ಉಜ್ಜಯಿನಿ ಪೀಠಕ್ಕೂ ಸಂಬಂಧವಿರುವ ಹಿನ್ನೆಲೆಯಲ್ಲಿ ಮರುಳಸಿದ್ಧನೇ ಸಿದ್ಧರಾಮ ಹೇಳುವ ಮಳೆಯ ಮಲ್ಲೇಶ ಯಾಕಾಗಿರಬಾರದು?

ಅಂತೂ ಮಳೆಯ ಮಲ್ಲೇಶ ಹೆಸರು ಸಿದಧಮಲ್ಲೇಶ - ಸಾರಂಗಸಿದ್ದೇಶ - ಮರುಳ ಸಿದ್ದೇಶ ಎಂಬ ಮೂವರಿಗೆ ಸಂಬಂಧಿಸಿ ಕೇಳಿಸುತ್ತಿದ್ದು ಇವರು ಅಭಿನ್ನರೇ? ಎಂಬ ತೊಡಕು ಇನ್ನೂ ಬಗೆಹರಿಯಬೇಕಾದ ಅಗತ್ಯವಿದೆ. ನನ್ನ ಅಭಿಪ್ರಾಯದಲ್ಲಿ ಈ ಮೂರೂ ಒಬ್ಬನೇ ವ್ಯಕ್ತಿಯ ಬೇರೆ ಬೇರೆ ಹೆಸರು (ವಿಶೇಷಣ?) ಗಳಾಗಿದ್ದು, ಸಿದ್ಧರಾಮ ನೆನೆಯುವ ಮಳೆಯ ಮಲ್ಲೇಶ ೧೨ನೆಯ ಶತಮಾನದ ಸಾರಂಗಮಠದ ಮಳೆಯ ಮಲ್ಲೇಶ ಎಂಬುದಂತೂ ಗಟ್ಟಿ. ಹಾಗೂ ಮಳೆ ಪವಾಡಕ್ಕೆ ಸಂಬಂಧಿಸಿ ಕೇಳಿಬರುವ ೧೫ನೇಯ ಶತಮಾನದ ಮಳೆಯ ಮಲ್ಲೇಶನಿಂದ ಈತ ಸಂಪೂರ್ಣವಾಗಿ ಭಿನ್ನ ವ್ಯಕ್ತಿ ಆದರೆ ಇಬ್ಬರ ಮಠಸಂಪ್ರದಾಯ ಒಂದೇ - ಅದು 'ಸಾರಂಗಮಠ' ೧೨ನೆಯ ಶತಮಾನದ ಮಳೆಯ ಮಲ್ಲೇಶನ ಕಾರ್ಯಕ್ಷೇತ್ರ ಶ್ರೀಶೈಲ, ೧೫ನೇಯ ಶತಮಾನದ ಮಳೆಯ ಮಲ್ಲೇಶನ ಕಾರ್ಯಕ್ಷೇತ್ರ ಕೂಡಲ ಸಂಗಮ, ೧೫ನೆಯ ಶತಮಾನದ ಮಳೆಯ ಮಲ್ಲೇಶನ ಹೆಸರು ನಮಗೆ ಸುಪರಿಚಿತ. ಚೆನ್ನಬಸವ ಪುರಾಣ, ಗುರುರಾಜ ಚಾರಿತ್ರ, ವೀರಶೈವಾಮೃತ ಪುರಾಣಗಳಲ್ಲಿ ಈತ ಉಕ್ತನಾಗಿದ್ದಾನೆ. ಆದರೆ ೧೨ನೆಯ ಶತಮಾನದಲ್ಲಿ ಒಬ್ಬ ಮಳೆಯ ಮಲ್ಲೇಶ ಆಗಿಹೋದ ಸಂಗತಿ ಸಿದ್ಧರಾಮನ ಈ ವಚನದಿಂದಲೇ ಬಹುಶಃ ಮೊದಲ ಬಾರಿಗೆ ಹೊರಬೀಳುತ್ತಿದೆ.

ಸಿದ್ಧರಾಮ ಸ್ಮರಿಸುವ ಮತ್ತೋರ್ವ ವ್ಯಕ್ತಿ ರಾಮಸಿದ್ಧ. ಗುರುವಾಕ್ಯದಿಂದ ಆ ರಾಮಸಿದ್ಧನಿಗೆ ಅಘೋರ ಮೂರ್ತಿ ಪ್ರಾಪ್ತವಾಯಿತ್ತು - ಎನ್ನುತ್ತಾನೆ ಸಿದ್ಧರಾಮ. ಈ ರಾಮಸಿದ್ಧ ಸಿದ್ಧರಾಮ ತಾನಂತೂ ಅಲ್ಲ. ರಾಮಸಿದ್ಧ ಹೆಸರೆಂಬಂತೆ ಕೇಳುವುದಿಲ್ಲ,

ರಾಮ ಹೆಸರಿರಬೇಕು, ಸಿದ್ಧ ವಿಶೇಷಣ ಇರಬೇಕು. ಚಿದ್ಘನ ಶಿವಾಚಾರ್ಯರ ಮೂಲಕ ಹೂಲಿಮಠವನ್ನು, ಮಳೆಯ ಮಲ್ಲೇಶನ ಮೂಲಕ ಸಿದ್ಧರಾಮ, ರಾಮಸಿದ್ಧನ ಮೂಲಕ ಗುರುಸ್ಥಲದ ಕೇದಾರಪೀಠವನ್ನು ಸ್ಮರಣೆಗೆ ತರುತ್ತಿದ್ದಾನೆಯೇ? ಕೇದಾರ ಸಿಂಹಾಸನದ ಮೂಲಪುರುಷ ಏಕೋರಾಮ. ಈತ ರೇವಣಸಿದ್ಧ -ಮರುಳಸಿದ್ಧ - ಪಂಡಿತಾರಾಧ್ಯರ ಸಮಕಾಲೀನನಾಗಿದ್ದು, ಏಕೋರಾಮನೂ ಸೇರಿ ನಾಲ್ವರೂ ಚತುರಾಚಾರ್ಯರೆಂದು ಪ್ರಸಿದ್ಧರು. ಒಟ್ಟಾಗಿ ಸಿದ್ಧರಾಮನ ಸಮಕಾಲೀನರು.

ಏಕೋರಾಮ ಅಬ್ಬಲೂರು ಶಾಸನೋಕ್ತ ಏಕಾಂತದ ರಾಮಯ್ಯನಿಂದ ಭಿನ್ನನೆಂಬ ಸಂಗತಿ ಸರ್ವವಿದಿತ. ಜೇಡರ ದಾಸಿಮಯ್ಯನ ಮುದನೂರು ಗ್ರಾಮವೇ ಏಕೋರಾಮನ ಮುದ್ರಾಪುರ ಗ್ರಾಮ. ಶಿವನ ಚತುರ್ಮುಖಗಳಿಂದ 'ಚತುರಾಚಾರ್ಯರು' ಉದ್ಭವ ವಾದರೆಂದು ಪುರಾಣಪ್ರಸಿದ್ಧಿ (ಪಂಚಮುಖ - ಪಂಚಾಚಾರ್ಯ ಕಲ್ಪನೆ ಬಸವೋತ್ತರ ಕಾಲದ್ದು).

ಶಿವನ ಚತುರ್ಮುಖಗಳಲ್ಲಿ ಅಘೋರಮುಖವನ್ನು ಏಕೋರಾಮನಿಗೆ ಹೇಳಲಾಗಿದೆ[2]. ಈ ಅಘೋರಮುಖವನ್ನೇ ರಾಮಸಿದ್ಧನಿಗೆ ಸಂಬಂಧಿಸಿ ಸಿದ್ಧರಾಮ ಹೇಳುತ್ತಿದ್ದಾನೆ. ಮೇಲೆ ಗಮನಿಸಿದಂತೆ ಈ ಸಿದ್ಧನು ರಾಮನಾಗಿದ್ದು, ಆತ ಏಕೋರಾಮನೆಂಬುದು ಸುನಿಶ್ಚಿತ. ಸಿದ್ಧರಾಮ, ಏಕೋರಾಮನನ್ನು ರಾಮಸಿದ್ಧ ಎಂದು ಕರೆಯುವುದನ್ನು ನೋಡಿದರೆ ಏಕೋ, ಸಿದ್ಧ ರಾಮನ ವಿಶೇಷಣಗಳಾಗಿದ್ದು, ಸಿದ್ಧ ಪದ ಸಾಮಾನ್ಯವೂ ಮೂಲವೂ ಎನಿಸುತ್ತದೆ : ರೇವಣಸಿದ್ಧ - ಮರುಳಸಿದ್ಧ - ರಾಮಸಿದ್ಧ (ಏಕೋರಾಮ) ಸಿದ್ಧರಾಗಿದ್ದರೆ ಪಂಡಿತಾರಾಧ್ಯ - ವಿಶ್ವಾರಾಧ್ಯ, ಆರಾಧ್ಯರಾಗಿದ್ದಾರೆ. ಸಿದ್ಧ, ಆರಾಧ್ಯ ಲಾಕುಳ ಶೈವರ ಹೆಸರುಗಳಾಗಿ ಗೋಚರಿಸುತ್ತವೆ.

ಹೀಗೆ ಗುರುವರ್ಗದ ಮೂವರು -ಚಿದ್ಘನ, ಮಳೆಯ ಮಲ್ಲೇಶ, ರಾಮಸಿದ್ಧ (ಏಕೋ ರಾಮ) - ಆಚಾರ್ಯರನ್ನು ಸಿದ್ಧರಾಮ ತನ್ನ ಈ ವಚನದಲ್ಲಿ ನೆನೆದಿದ್ದಾನೆ. ಇವರು ಮೂಲತಃ ವಾಕುಳ ಶೈವರೇ ಆಗಿದ್ದು, ಇಷ್ಟಲಿಂಗ ಪ್ರಣೀತ ವೀರಶೈವಕ್ಕೆ ಹನ್ನೆರಡನೆಯ ಶತಮಾನದಲ್ಲಿ ಒಲಿದು ಬಂದಂತಿದೆ. ಲಾಕುಳ ಶೈವರಿಗೂ ಕಾಳಾಮುಖರಿಗೂ ನಮ್ಮಲ್ಲಿ ಬೇಧವಿಲ್ಲ. ಇವರು ಕಾಳಾಮುಖ ಆಚಾರ್ಯರೇ

---

[2] ಡಾ. ಎಂ. ಚಿದಾನಂದಮೂರ್ತಿಯವರು ಜಂಗನಜಾತಿಯಲ್ಲಿ ಆನ. ಶ್ರೇಣಿ ಲೇಖನದಲ್ಲಿ ಕೊಟ್ಟಿರುವ ಪಟ್ಟಿಯನ್ನು ನೋಡಿ (ಪುಟ ೮-೯), ಸಾಧನೆ ೧೩-೧, ೧೯೮೪.

ಇರಬೇಕೆನ್ನಲು ನೆಲೆಗಳು ಅಲ್ಲಿರುವುದು ಆಧಾರವಾಗಬಲ್ಲದು. ಚತುರಾಚಾರ್ಯರ ಉಲ್ಲೇಖ ವಚನಗಳಲ್ಲಿ ಅಪರೂಪವಾಗಿರುವ ಸಂದರ್ಭಗಳಲ್ಲಿ, ಸಿದ್ಧರಾಮನ ಈ ಒಂದು ವಚನ ಅತ್ಯಂತ ಮಹತ್ವಪೂರ್ಣವಾಗಿದ್ದು, ಅಕ್ಷರಶಃ ಅಪೂರ್ವವಾದುದು ಆಗಿದೆ.

ŸŸŸ

ಸ್ತ್ರೀ ಮತದಾನಾಧಿಕಾರ

- ಡಾ|| ಎಂ.ಪಿ. ಭುವನೇಶ್ವರಪ್ರಸಾದ್

ಅನೇಕ ಶತಮಾನಗಳಿಂದ ಸ್ತ್ರೀ ಶೋಷಣೆಯ ವಸ್ತುವಾಗಿರುವುದನ್ನು ವಿಶ್ವದ ಇತಿಹಾಸದ ಪುಟಗಳು ಬಿಂಬಿಸುತ್ತವೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಇವಳನ್ನು ಮುಂದಕ್ಕೆ ಬಿಡುವ ಪ್ರಯತ್ನವನ್ನು ಪುರುಷ ಮಾಡಲೇ ಇಲ್ಲ ಎಂಬುದು ಕಟು ಸತ್ಯ. ಅದರಲ್ಲಿಯೂ ರಾಜಕೀಯ ಕ್ಷೇತ್ರದಲ್ಲಂತು ಇರುವ ಸುಳಿವು ಇಲ್ಲದಂತೆಯು ಗಾಳಿಯು ಕೂಡ ಸೋಂಕದಂತೆ ಬಹು ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದಿದ್ದಾನೆ. ಅದೇ ರೀತಿ ಸ್ತ್ರೀಯರಿಗೆ ಮತದಾನದ ಹಕ್ಕನ್ನು ವಂಚಿಸುತ್ತಾ ಬಂದಿದ್ದಾನೆ.

ಸ್ತ್ರೀಯು ಮತದಾನದ ಹಕ್ಕನ್ನು ಹೊಂದಿರಬಾರದೆಂಬ ಕೀಳರಿಮೆ ಆ ದಿನದ ಸಾಮಾಜಿಕ ವ್ಯವಸ್ಥೆಯಲ್ಲಿ ತಾಂಡವವಾಡುತ್ತಿತ್ತು. ಇದಕ್ಕೆ ಅನೇಕ ತಜ್ಞರು ಕೂಡ ಸಮ್ಮತಿಸಿರುವುದುಂಟು . ಜೊತೆಗೆ ಅನೇಕ ಕಾರಣಗಳನ್ನು ಸಹ ನೀಡಿರುವುದು ಕಂಡು ಬರುತ್ತದೆ.

೧. ಸ್ತ್ರೀಯು ದೈಹಿಕವಾಗಿ ದುರ್ಬಲಳಾದ್ದರಿಂದ, ರಾಜಕೀಯ ರಂಗವನ್ನು ಪ್ರವೇಶ ಮಾಡಿ ಅಲ್ಲಿ ಎದುರಾಗುವ ಸಮಸ್ಯೆಗಳನ್ನು, ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸುವ ಸಾಮರ್ಥ್ಯ ಇಲ್ಲದವಳು.

೨. ಸಾಮಾಜಿಕ ವ್ಯವಸ್ಥೆಯಲ್ಲಿ ಗೌರವಯುತ ಸ್ಥಾನ - ಮಾನವನ್ನು ಹೊಂದಿದ್ದಾಳೆ. ಒಂದು ವೇಳೆ ರಾಜಕೀಯ ರಂಗವನ್ನು ಪ್ರವೇಶ ಮಾಡಿದರೆ ಸಾಮಾಜಿಕ ವ್ಯವಸ್ಥೆಯಲ್ಲಿರುವ ಅವಳ ಗೌರವ - ಘನತೆಗೆ ಚ್ಯುತಿ ಉಂಟಾಗುತ್ತದೆ. ಅಷ್ಟೇ ಅಲ್ಲದೆ ದಿನನಿತ್ಯದ ಕೌಟುಂಬಿಕ ಅಥವಾ ಸಂಸಾರಿಕ ಜೀವನಕ್ಕೆ ಅಡೆ-ತಡೆಯಾಗಿ ನಿಲ್ಲುತ್ತದೆ. ಈ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದರೆ ಸಂಬಂಧಿಗರು, ಸ್ವಕುಟುಂಬದವರು, ಭಿನ್ನಾಭಿಪ್ರಾಯವಿರುವ ಪತಿ - ಪತ್ನಿಯರು ಒಂದಾಗಿ ನೆಮ್ಮದಿಯುತ, ಶಾಂತಿಯುತ , ಗೌರವಯುತ, ಸಹ ಬಾಳ್ವೆಯನ್ನು ನಡೆಸುತ್ತಾರೆ ಎಂಬುದು ಕೇವಲ ಭ್ರಮನಿರಸನವಷ್ಟೇ, ವಿನಃ ವಾಸ್ತವಿಕ ಅಂಶವಲ್ಲ.

೩. ಇದರಿಂದ ಮಕ್ಕಳ ಉಜ್ವಲ ಭವಿಷ್ಯ ಹಾಳಾಗಿ ಅವರು ಸಮಾಜ ಕಂಟಕರಾಗಬಹುದು. ಅದ್ದರಿಂದ ಕೇವಲ ಆದರ್ಶ ಗೃಹಿಣಿಯಾಗಿ ಭವಿಷ್ಯದಲ್ಲಿ ಮಕ್ಕಳನ್ನು ಒಳ್ಳೆಯವರನ್ನಾಗಿ

ಬೆಳೆಸಲು ಪ್ರಯತ್ನಿಸಬೇಕು. ಜೊತೆಗೆ, ಇವರನ್ನು ಸತ್ಪ್ರಜೆಗಳನ್ನಾಗಿ ಮಾಡುವ ಗುರುತರ ಜವಾಬ್ದಾರಿ ಅಥವಾ ಹೊಣೆಗಾರಿಕೆಯನ್ನು ಹೊಂದಿರುತ್ತಾಳೆ. ಒಂದು ವೇಳೆ ಈಕೆ ರಾಜಕೀಯರಂಗವನ್ನು ಪ್ರವೇಶ ಮಾಡಿದರೆ, ಅದರಿಂದ ಸಾಮಾಜಿಕ ವ್ಯವಸ್ಥೆ ಹದಗೆಟ್ಟು, ಪ್ರಗತಿಯು ಅಪೂರ್ಣಗೊಂಡು, ಸಾಂಸಾರಿಕ ಮಟ್ಟ ಧೃತಿಗೆಟ್ಟು, ಮಕ್ಕಳ ಭವಿಷ್ಯವನ್ನು ರೂಪಿಸುವ ರೂವಾರಿಗಳಾಗದೆ ಅವರ ನಾಶಕ್ಕೆ ಇಂಬುಕೊಟ್ಟಂತೆ ಆಗುತ್ತದೆ.

೪. ಅನೇಕ ರಾಷ್ಟ್ರಗಳು ಸ್ತ್ರೀ ಮತದಾನದ ಹಕ್ಕನ್ನು ನೀಡಿದ್ದರು ಕೂಡ, ಅವರು ಸರಿಯಾಗಿ ಅವುಗಳನ್ನು ಉಪಯೋಗ ಪಡಿಸಿಕೊಳ್ಳದಿರುವುದು ಕಂಡುಬರುತ್ತದೆ, ಎಂಬ ಅಭಿಪ್ರಾಯವು, ಅಪವಾದವು ಸಹ ಇದೆ.

ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಬೆಳೆಯುತ್ತಾ ಬಂದಂತೆ ಸ್ತ್ರೀಗೆ ಮತದಾನದ ಹಕ್ಕನ್ನು ನೀಡಬೇಕೆಂಬ ವಾದಕ್ಕೆ ಹೆಚ್ಚಿನ ಮಾನ್ಯತೆ ದೊರೆಯಲಾರಂಭಿಸಿತು. ಅದಕ್ಕೆ ಕಾರಣವೆಂದರೆ, ಸಮಾನತೆಯು ಪ್ರಜಾಪ್ರಭುತ್ವದ ಅಡಿಗಲ್ಲು. ಇದಕ್ಕೆ ಅನುಗುಣವಾಗಿ ಸ್ತ್ರೀಪುರುಷರ ನಡುವೆ ಯಾವುದೇ ರೀತಿಯ ಬೇಧ ಭಾವಕ್ಕೆ ಸ್ಥಳಾವಕಾಶವಿಲ್ಲ. ಜೊತೆಗೆ ಸ್ತ್ರೀಯು ದುರ್ಬಲಳು ಇನ್ನು ಮುಂತಾದ ಅನಪೇಕ್ಷಣೀಯ ಭಾವನೆಗಳು, ಕಲ್ಪನೆಗಳು ಮಾಯವಾಗತೊಡಗಿದವು. ಅದಕ್ಕೆ ತಕ್ಕಂತೆ ನಾಗರಿಕ ಹಕ್ಕನ್ನು ಅನುಭವಿಸುವ ಇವಳು ರಾಜಕೀಯ ಹಕ್ಕುಗಳಿಗೆ ಅರ್ಹಳು ಎಂಬುದಕ್ಕೆ ಹೆಚ್ಚಿನ ಪ್ರೋತ್ಸಾಹ, ಪುರಸ್ಕಾರ ಎರಡು ದೊರೆಯುತ್ತಾ ಬಂದವು. ಅನೇಕ ವರ್ಷಗಳಿಂದ ಪಡೆಯದಿದ್ದ ಈ ಮತದಾನದ ಹಕ್ಕು ಇವಳಿಗೆ ಪ್ರಥಮ ಸಂಗ್ರಾಮದ ವೇಳೆಗೆ ಅಧಿಕೃತವಾಗಿ ದೊರೆಯಿತು. ೧೯೧೭ರಲ್ಲಿ ಡೆನ್ಮಾರ್ಕ್‌ನಲ್ಲಿ, ೧೯೧೮ರಲ್ಲಿ ಬ್ರಿಟನ್ನಿನಲ್ಲಿ, ೧೯೧೯ರಲ್ಲಿ ಅಮೇರಿಕಾದಲ್ಲಿ, ೧೯೪೭ರಲ್ಲಿ ಫ್ರಾನ್ಸ್‌ನಲ್ಲಿ, ೧೯೫೦ರಲ್ಲಿ ಭಾರತ ದಲ್ಲಿ ಸ್ತ್ರೀಯರಿಗೆ ಮತದಾನದ ಅಧಿಕಾರ ನೀಡಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಅದಕ್ಕೆ ಅನುಗುಣವಾಗಿ ಅನೇಕ ರಾಷ್ಟ್ರಗಳಲ್ಲಿ ಸ್ತ್ರೀಯರು ಯಾವುದರಲ್ಲೂ ಅಬಲೆಯರಲ್ಲ ಸಬಲೆಯರು ಎಂಬುದನ್ನು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಬೀತು ಪಡಿಸುತ್ತಿದ್ದಾರೆ ಅಥವಾ ಅದಕ್ಕೆ ಪ್ರಯತ್ನಿಸುತ್ತಿದ್ದಾರೆ.

ಸ್ತ್ರೀಮತದಾನದ ಪರವಾಗಿರುವ ವಿಚಾರಗಳು ಅಥವಾ ಗುಣಗಳನ್ನು ನೋಡುವುದಾದರೆ

೧. ಸ್ತ್ರೀಯರು ದಕ್ಷರು, ಸಾಮರ್ಥ್ಯ ಉಳ್ಳವರು, ಬಲಿಷ್ಠರು ಎಂಬುದನ್ನು ಈಗಾಗಲೇ ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಸಾಬೀತು ಪಡಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲಂತು ಕೆಲವು ಮಹಿಳೆಯರು ಗಂಡಸರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿರುವುದನ್ನು ಕಂಡಿದ್ದೇವೆ. ಅದಕ್ಕೆ ನಿದರ್ಶನವಾಗಿ ಸ್ತ್ರೀಯರ ಪಂಕ್ತಿಯಲ್ಲಿ ತುತ್ತ ತುದಿಗೆ ಏರಿ ಇವರ ಬಗ್ಗೆ ಇರುವ ಅನೇಕ ಕಲ್ಪನೆಗಳು ಸುಳ್ಳೆಂದು ಸಾಧಿಸಿ ತೋರಿಸಿರುವ, ಅದರಲ್ಲಿಯೂ ರಾಜಕೀಯ ರಂಗದಲ್ಲಿ ಬಹಳ ಪ್ರಮುಖರಾದವರೆಂದರೆ, ಶ್ರೀಮತಿ ಇಂದಿರಾಗಾಂಧಿ, ಸಿರಿಮಾವೊ ಬಂಡಾರ ನಾಯ್ಕೆ, ಮಾರ್ಗರೇಟ್ ಥ್ಯಾಚರ್, ಬೆನಜಿರ್ ಬುಟ್ಟೋ, ಚಂದ್ರಕುಮಾರ ತುಂಗ ಮುಂತಾದವರು. ಆಡಳಿತ ರಂಗದಲ್ಲಿಯೂ ಇವರ ಸಾಧನೆ ದಿನೇ ದಿನೇ ಹೆಚ್ಚುತ್ತಿರುವುದು ಸಂತಸದ ವಿಷಯವಾಗಿದೆ. ಹೀಗೆ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಸ್ತ್ರೀಯ ಅದ್ವಿತೀಯ ಸ್ಥಾನಗಳಿಸಿ ನಾನು ಅಬಲೆಯಲ್ಲ ಪ್ರಬಲೆ ಎಂಬುದನ್ನು ನಿಜವಾಗಿಸಿದ್ದಾಳೆ.

೨. ಇಂತಹ ಪರಿಸ್ಥಿತಿಯಲ್ಲಿ ಕೇವಲ ಮತದಾನದ ಹಕ್ಕಿನ ನಿರಾಕರಣೆ ಅಷ್ಟು ಸಮಂಜಸವಲ್ಲ. ಸಮಸ್ಯೆಗಳನ್ನು ಎದುರಿಸುವ ಎದೆಗಾರಿಕೆ ಸ್ತ್ರೀಯರಿಗಿರದೆ ಅವರು ಕೇವಲ ಚಂಚಲ ಸ್ವಭಾವದವರು, ಅಧೈರ್ಯಉಳ್ಳವರು, ಕರುಣೆಯ ಕುಡಿಗಳು, ಇದರಿಂದ ಆಡಳಿತವಾಗಲೀ ರಾಜಕೀಯ ಅದಿಕಾರವಾಗಲಿ ಇವರಿಂದ ಸಾಧ್ಯವಿಲ್ಲ ಎಂಬ ವಿಚಾರ ಕೇವಲ ಭ್ರಮೆ ಆಗಿದೆ. ಕಾರಣ ಇವೆಲ್ಲವನ್ನು ಮೀರಿ ನಡೆಯುವಂತೆ, ಸಾಧನೆಯನ್ನು ಮೂಡುವಂತಹ ಸಾಮರ್ಥ್ಯವನ್ನು , ಸ್ವಶಕ್ತಿಯನ್ನು ಹೊಂದಿದ್ದಾಳೆ, ಎಂಬುದನ್ನು ಅನೇಕ ಮಹಿಳಾ ಶಿರೋಮಣಿಗಳು ಮಾಡಿ ತೋರಿಸಿರುವುದು ವಿಶ್ವದ ಇತಿಹಾಸದ ಪುಟಗಳಲ್ಲಿ ಕಂಡು ಬರುವ ಸಾಮಾನ್ಯ ದೃಶ್ಯವಾಗಿದೆ. ಕೇ[illegible] ಈ ಕಾರಣಕ್ಕಾಗಿ ಇವಳನ್ನು ಈ ವಿಚಾರದಲ್ಲಿ ವಂಚಿಸಿರುವುದು ಅವಳಿಗೆ [illegible]ರಾದ ವೆಸಗಿದಂತೆ, ಆದ್ದರಿಂದ ಇದು ಕೂಡದು.

೩. ಪ್ರಜಾಪ್ರಭುತ್ವದ ತತ್ವಗಳಲ್ಲಿ ಪ್ರಮುಖವಾದದ್ದು ಸಮಾನತೆ ಎಂದು ಹೇಳಿ ಪುರುಷನಿಗೂ, ಸ್ತ್ರೀಗೂ ಅನೇಕ ವಿಚಾರಗಳಲ್ಲಿ ಅಸಮಾನತೆಯನ್ನು ಉಂಟು ಮಾಡಿರುವುದು ಅವಳನ್ನು ಶೋಷಣೆಗೆ ಒಳಪಡಿಸಿರುವುದು, ಜೊತೆಗೆ ಈಕೆಯನ್ನು, ಕೇವಲ ಭೋಗದ ವಸ್ತುವನ್ನಾಗಿ ಬಳಸಿಕೊಂಡು ಕುಟುಂಬದ ಪಾಲನೆ, ಪೋಷಣೆ, ಗೃಹಿಣಿ ಎಂಬ ಮಡಿವಂತಿಕೆಯ ಪದದಿಂದ ಪ್ರಜ್ವಲಿಸುವ ಪ್ರತಿಭೆಯನ್ನು ಚಿವುಟಿ

ಹಾಕಿರುವುದು ಹಾಗೂ ಆಕೆಯನ್ನು ಸಂಪ್ರದಾಯ ಎಂಬ ಸರಪಣಿಯಿಂದ ಕಟ್ಟಿ ಹಾಕಿ, ಸಮಾಜದ ಘನತೆ - ಗೌರವವನ್ನು, ಇನ್ನು ಮುಂತಾದ ನಡಾವಳಿಗಳ ಆಚಾರ - ವಿಚಾರಗಳಿಂದ ಬಂಧಿಸಿ , ಈ ಹಕ್ಕನ್ನು ನೀಡದಿರುವುದು ಸಮಾನತೆ ಎಂಬ ಪದಕ್ಕೆ ಅಪಮಾನ ಎಸಗಿದಂತೆಯೂ, ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಯಾವ ಅರ್ಥವೂ ಇಲ್ಲ, ಎಂದು ಭಾವಿಸಬಹುದಾಗಿದೆ.

೪. ಪ್ರಜಾಪ್ರಭುತ್ವದ ಇನ್ನೊಂದು ಅಡಿಗಲ್ಲೆಂದರೆ ಸಾರ್ವಜನಿಕ ಇಚ್ಛೆ ಅಥವಾ ಅಭಿಪ್ರಾಯ. ಅಂದರೆ ದೇಶದ ಸಮಸ್ತರಿಗೂ ಅನ್ವಯವಾಗುವಂತಹದ್ದು, ಇಲ್ಲಿ ಪುರುಷರು ಮಾತ್ರ ನಾಗರಿಕರು, ಅವರ ಇಚ್ಛೆಯು ಸಾರ್ವಜನಿಕ ಇಚ್ಛೆ ಎಂಬುದು ಸರಿಯೇ ? ಸಾರ್ವಜನಿಕರು ಎಂದ ಮೇಲೆ ಲಿಂಗಬೇಧವಿಲ್ಲದೆ ಇಬ್ಬರು ಒಂದೇ ಎಂಬುದು ಒಂದರ್ಥವಾದರೆ, ಎಲ್ಲಾ ರೀತಿಯ ಹಕ್ಕು ಬಾಧ್ಯತೆಗಳು ಇಬ್ಬರಿಗೂ ಸೇರಿರುವುವು ಎಂದರ್ಥ. ಆದರೆ ಒಬ್ಬರಿಗೆ ಮಾತ್ರ ಈ ಅಧಿಕಾರ ಇದ್ದುದ್ದೇ ಆದರೆ ಸಾರ್ವಜನಿಕ ಇಚ್ಛೆ ಎಂಬುದಕ್ಕೆ ಯಾವ ಅರ್ಥವು ಇರುವುದಿಲ್ಲ ಎಂಬುದು ಸರ್ವರಿಗೂ ವೇದ್ಯ.

೫. ಸ್ತ್ರೀಯು ಅಬಲೆ ಎಂಬ ಇನ್ನೊಂದು ಅಪವಾದವಿದೆ. ಒಂದು ವೇಳೆ ಅವರು ಹಾಗೆ ಇದ್ದುದ್ದಾದರೆ ಅವರ ಉಳಿವಿಗಾಗಿ ಅಥವಾ ರಕ್ಷಣೆಗಾಗಿ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕೊಳ್ಳಲು ಅವಕಾಶ ನೀಡಬೇಕು. ಜೊತೆಗೆ ಅವರಿಗಾಗಿ ವಿಶೇಷ ಕಾನೂನು, ನ್ಯಾಯಾಲಯ, ವಿಶೇಷಾಧಿಕಾರ ಹಾಗೂ ಮತ್ತಿತರ ಸೌಲಭ್ಯಗಳನ್ನು ಒದಗಿಸ ಬೇಕು ಎಂಬುದು ಬಹು ಸಾಮಾನ್ಯ ವಿಚಾರವಾಗಿದೆ.

ಪುರುಷರಿಗೆ ಸಮಾನವಾಗಿ ಸ್ತ್ರೀಯು ಎಲ್ಲಾ ರಂಗಗಳಲ್ಲಿಯೂ ಕೂಡ ದಕ್ಷತೆಯಿಂದ, ದುಡಿಯುತ್ತಿದ್ದಾಳೆ. ಅಂದರೆ ಕೃಷಿ, ಕೈಗಾರಿಕೆ, ಕಛೇರಿ, ಪೋಲೀಸ್, ಶಿಕ್ಷಣ, ಸಾಮಾಜಿಕ, ಸಾಂಸ್ಕೃತಿಕ , ಆರ್ಥಿಕ, ಆಡಳಿತಾತ್ಮಕ, ರಾಜಕೀಯ ರಂಗಗಳಲ್ಲಿ ಪ್ರಗತಿ ಪಥದತ್ತ ಪುರುಷನೊಡನೆ ಸ್ಪರ್ಧಿಸುವ ಸಹಕರಿಸುವಷ್ಟು, ಮುನ್ನಡೆದಿದ್ದಾಳೆ. ಅದರಲ್ಲಿಯೂ ಈ ದಿನ ಇವಳು ಕಾಲಿಡದ ಕ್ಷೇತ್ರಗಳೇ ಅಪರೂಪ. ಅದಕ್ಕಿಂತ ಮಿಗಿಲಾಗಿ ಕಾನೂನು, ವೈದ್ಯಕೀಯ, ವೈಜ್ಞಾನಿಕ, ತಾಂತ್ರಿಕ, ಸೈನಿಕ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಇವಳ ಸಾಧನೆ ದಿಗಂತದೆಡೆಗೆ ಸಾಗಿರುವುದು ಮೆಚ್ಚುವಂತಹದ್ದು. ಆದರೆ ಜೊತೆಗೆ ಅನೇಕ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದನ್ನು ಕಾಣ

ಬಹುದಾಗಿದೆ. ಅಷ್ಟೇ ಅಲ್ಲದೆ ಅನೇಕ ಮನೆಗಳಲ್ಲಿ ಇಡೀ ಕುಟುಂಬದ ಪಾಲನೆ, ಪೋಷಣೆಯ ಜವಾಬ್ದಾರಿಯನ್ನು ಹೊರುವಂತಹ ವಳಾಗಿದ್ದಾಳೆ. ಒಟ್ಟಾರೆ ಮಾನಸಿಗೆ ಮನೆಯೇ ಮಂತ್ರಾಲಯ, ಮೀಸಲು ಎಂಬೆಲ್ಲಾ ಅರ್ಥವನ್ನು ಅದು ಕಳೆದುಕೊಳ್ಳುತ್ತಾ ಬಂದಿದೆ.

೬. ಸ್ತ್ರೀಯರು ಮತ ಚಲಾವಣೆಯನ್ನು ಸ್ವಂತ ಬುದ್ಧಿಯಿಂದ ಮಾಡದೆ ತಮ್ಮ ಪೋಷಕರ, ಕುಟುಂಬದವರ ಮಾತಿಗೆ ಬೆಲೆ ಕೊಡುತ್ತಾರೆ ಎಂಬ ಇನ್ನೊಂದು ಅಪವಾದವಿದೆ. ಈಕೆಗೆ ರಾಜಕೀಯ ಅರಿವನ್ನು ಮೂಡಿಸಿ ಪಕ್ಷದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ನೀಡಿದರೆ ಆಕೆ ತನ್ನ ಪವಿತ್ರವಾದ ಮತವನ್ನು ದುರುಪಯೋಗ ಮಾಡಿಕೊಳ್ಳಲು ಸಾಧ್ಯವಿಲ್ಲ. ಇದೇ ಕಾರಣಕ್ಕಾಗಿ ಮತಾಧಿಕಾರ ನೀಡದಿರುವುದು ಸರಿಯಲ್ಲ. ಅಂದರೆ ಸ್ತ್ರೀಯರಲ್ಲಿ ರಾಜಕೀಯ ಪ್ರಜ್ಞೆ ಬರಿಸುವುದು, ಜಾಗ್ರತೆಗೊಳಿಸುವುದು ಸಮಂಜಸ.

೭. ಮತದಾನದ ಅಧಿಕಾರ ಪುರುಷರಿಗೆ ಮಾತ್ರ ಮೀಸಲು ಎಂಬುದು ಕೇವಲ ಮಾನವನಿಂದ ರಚಿತಗೊಂಡಿರುವುದೇ ವಿನಃ ನೈಸರ್ಗಿಕವಾದುದಾಗಲಿ ಅಥವಾ ದೈವಿಕವಾದುದಾಗಲೀ ಕೂಡ ಅಲ್ಲ ಎಂಬುದು ಕಟು ಸತ್ಯವಾಗಿದೆ. ಇವರಿಬ್ಬರು ಒಂದೇ ನಾಣ್ಯದ ಎರಡು ಮುಖಗಳು, ಆದ್ದರಿಂದ ಇವರಿಬ್ಬರಿಗೂ ಈ ಅಧಿಕಾರ ನೀಡಿದರೆ ಅದರ ಮೂಲಕ ರಾಜಕೀಯ ವ್ಯವಸ್ಥೆಯಲ್ಲಿ ಚಿರನೂತನ ಜಾಗ್ರತೆ ಮೂಡಬಹುದು.

೮. ಕಾನೂನು , ಕಟ್ಟಳೆ, ನೀತಿ, ನಿಯಮ, ಸಂಪ್ರದಾಯ, ರೂಢಿ ಇಬ್ಬರಿಗೂ ಸಮಾನವಾಗಿ ಅನ್ವಯಿಸುವಂತಹವು. ಆದರೂ ಸಹ ಕೇವಲ ಪುರುಷರಿಗೆ ಬಹುತೇಕ ವಿಚಾರಗಳಲ್ಲಿ ಪ್ರಧಾನತೆ ನೀಡಿರುವುದು ಸಮಂಜಸವಲ್ಲ. ಅದರ ಜೊತೆಗೆ ಪ್ರಜಾಪ್ರಭುತ್ವದ ಪ್ರಮುಖ ತತ್ವಗಳಿಗೆ ಯಾವ ಅರ್ಥವಿದೆ.

ಭಾರತೀಯ ಸಮಾಜದಲ್ಲಿ ಸ್ತ್ರೀಯನ್ನು ಒಂದು ಕಡೆ ಪೂಜಿಸಿದರೆ ಇನ್ನೊಂದು ಕಡೆ ಶೋಷಣೆಗೆ ಒಳಪಡಿಸಿರುವುದು ಕಂಡು ಬರುತ್ತದೆ. ಈ ವಿಚಾರದಲ್ಲಿ ಇವಳನ್ನು ಹಳೆಯ ಕಂದಾಚಾರದ ಗೂಟಕ್ಕೆ ಕಟ್ಟು ಹಾಕಿ ಶೋಷಣೆ ಮಾಡದೇ ಇತ್ತೀಚಿನ ವರ್ಷಗಳಿಂದ ಈ ಹಕ್ಕನ್ನು ನೀಡಿ ಗೌರವಿಸಿರುವುದು ಎಲ್ಲಾ ದೃಷ್ಟಿಯಿಂದಲೂ ಕ್ಷೇಮ. ಇದೇ ರೀತಿ ಅನೇಕ ಮುಂದುವರಿದ ರಾಷ್ಟ್ರಗಳು ಈ ಹಕ್ಕನ್ನು ನೀಡಿರುವುದನ್ನು ಈಗಾಗಲೇ ನೋಡಿದ್ದೇವೆ.

ಸ್ತ್ರೀಮತದಾನಧಿಕಾರದ ಬಗ್ಗೆ ವಿರೋಧ ಅಭಿಪ್ರಾಯಗಳು ಸಹ ಇವೆ. ಅವುಗಳಲ್ಲಿ ಪ್ರಮುಖವಾಗಿ ಈಕೆ ಸಂಸಾರದ ಕಣ್ಮಣಿ, ಮನೆಯ ಯಜಮಾನಿ, ಪ್ರಮುಖಳಾದ್ದರಿಂದ ಇವಳ ಮೂಲಕವೇ ಕುಟುಂಬ ಸರಿಯಾಗಬೇಕು ಹಾಗೂ ಮಕ್ಕಳ ಭವಿಷ್ಯವನ್ನು ರೂಪಿಸುವ ಶಿಲ್ಪಿ. ಆದ್ದರಿಂದ ಈಕೆಯು ಮನೆಯಲ್ಲೇ ಇದ್ದುಕೊಂಡು ಈ ಜವಾಬ್ದಾರಿಯನ್ನು ಸಮರ್ಪಕವಾಗಿ ನಡೆಸಿಕೊಂಡು ಹೋದರೆ ಅದರಿಂದ ಸಂಸಾರಕ್ಕೂ, ಸಮಾಜಕ್ಕೂ, ರಾಷ್ಟ್ರಕ್ಕೂ ಒಳಿತಾಗುತ್ತದೆ ಎಂಬ ಅಭಿಪ್ರಾಯವಿದೆ.

ಸ್ವತಂತ್ರವಿಲ್ಲದೆ ಇರುವ ಇವಳಿಗೆ ಸ್ವವಿವೇಚನೆ ಇರುತ್ತದೆ ಎಂಬುದು ನಂಬಲು ಅರ್ಹವಾದುದಲ್ಲ. ಅಂದರೆ ತನ್ನ ಕುಟುಂಬದವರ ಪ್ರೀತಿಗೂ, ಒತ್ತಡಕ್ಕೂ ವ್ಯವಸ್ಥೆಗೂ, ಮಣಿದು ಮತವನ್ನು ಅವರ ನಿರ್ದೇಶನದ ಮೇರೆಗೆ ಚಲಾಯಿಸುವ ಬದಲು ಈ ಮತದ ಹಕ್ಕೇ ಬೇಡ ಎನ್ನುವುದು ಒಂದು ಮತವಿದೆ. ಈ ವಿಚಾರದಲ್ಲಿ ಇವಳು ಮನೆಯವರ ಮಾತನ್ನು ದಿಕ್ಕರಿಸಿ ಅಥವಾ ಮೀರಿ ನಡೆದರೆ ಮುಂದಿನ ಪರಿಣಾಮ ಊಹಿಸಲು ಕೂಡ ಸಾಧ್ಯವಿಲ್ಲ. ಅಂದರೆ ಆ ಗೃಹ ಗ್ರಹವಾಗಿ ಕಾಡಿ ಅವರ ಸಂಸಾರದಲ್ಲಿ ಸುಂಟರಗಾಳಿ ಎದ್ದು ಅದರಿಂದ ಸಂಸಾರ ಹಾಳಾಗಿ ಹೋಗಬಹುದು, ಆದ ಕಾರಣ ಇದು ನಿಷಿದ್ಧ ಎನ್ನುವುದು ಬಹು ಜನರ ಅಭಿಪ್ರಾಯವಿದೆ.

ಸ್ತ್ರೀಯರು ಭಾವನಾ ಜೀವಿಗಳು, ಕೋಮಲೆಯರು, ಅಬಲೆಯರು ಆದ್ದರಿಂದ ಗಂಡಸರಂತೆ ದೈಹಿಕ ಶ್ರಮ ವಹಿಸಲಾರರು ಹಾಗೂ ಸಮಯದಲ್ಲಿ ಶಕ್ತಿಯನ್ನು ಬಳಸಲು ಅರಿಯರು. ಮುಗ್ಧ ಮನಸ್ಸಿನ, ದಯಾಮಯಿಯಾದ, ಕರುಣೆಯ ಕುಡಿಯಾದ ಈಕೆಗೆ ಈ ಅಧಿಕಾರ ಬೇಡ ಎಂಬುದು ಸಹ ಅನೇಕರ ಅಭಿಮತವಾಗಿದೆ.

ರಾಜಕೀಯ ಕೇಡಿಗರ ಅಂತಿಮ ಆಶ್ರಯವು ಅಧಿಕಾರ ಲಾಲಸೆ, ಪರ ದ್ರೋಹಾಚರಣೆ, ಪರ ನಿಂದನೆ, ವಂಚನೆ, ಮೋಸ, ಲಂಚ, ವಿಷಯ ಲಂಪಟತನ ಇನ್ನೂ ಮುಂತಾದ ಅಸುರೀಯ ಗುಣಗಳ ಸಾಗರವಾದ್ದರಿಂದ, ಸೌಂದರ್ಯ, ಮುಗ್ಧತನ, ಸರಳಸ್ವಭಾವ , ಸವಿನಯ, ಸಜ್ಜನಿಕೆ, ಸುಗುಣಗಳಿಂದ ಕೂಡಿರುವ ಸ್ತ್ರೀಯು ಇಂತಹ ಪರಿಸ್ಥಿತಿಗೆ ಸಿಲುಕಿ ಅದರಿಂದ ಅಪಕೀರ್ತಿಗೆ, ಅಪವಾದನೆಗೆ ಗುರಿಯಾಗಬಹುದು. ಆದ್ದರಿಂದ ಈ ಹಕ್ಕನ್ನು ನೀಡಬಾರದೆಂಬ ಉದ್ದೇಶವಿರಬಹುದು.

ಹೀಗೆ ಇನ್ನು ಮುಂತಾದ ಮನಮೋಹಕ ವಿಚಾರಗಳಿಂದ ಸ್ತ್ರೀಯನ್ನು ಈ ಕ್ಷೇತ್ರದಲ್ಲಿ ಸುಳಿಯದಂತೆ ಮಾಡಿದ್ದಾರೆ.

ಒಟ್ಟಾರೆ ಈ ದಿನದ ಸಮಾಜದಲ್ಲಿ ಸ್ತ್ರೀಯ ಬಗ್ಗೆ ಇರುವ ಉಕ್ತಿಗಳೆಲ್ಲ ಸತ್ಯದಿಂದ ದೂರವಾಗುತ್ತಿವೆ. ಅಂದರೆ ಅಬಲೆಯರು, ಶಕ್ತಿಹೀನರು, ಅದಕ್ಷರು, ಅಸಮರ್ಥರು, ಎಂಬೆಲ್ಲಾ ವಿಚಾರಗಳು ಸುಳ್ಳಾಗಿವೆ. ಈ ದಿನ ಸ್ತ್ರೀ ಎಲ್ಲಾ ಕ್ಷೇತ್ರದಲ್ಲಿಯೂ ಪ್ರವೇಶ ಮಾಡಿ ಈ ಆಪಾದನೆಗಳನ್ನೆಲ್ಲಾ ಗೆದ್ದು ತಮ್ಮ ಪ್ರತಿಭೆಯನ್ನು ತೋರಿಸಿ ಪ್ರಗತಿಪಥದ ಹಾದಿಯಲ್ಲಿ ಇವರಿದ್ದಾರೆ. ಅಷ್ಟೇ ಅಲ್ಲದೆ ರಾಜಕೀಯ ಪ್ರವೇಶದಿಂದ ದೇಶ ಹಾಳಾಗುತ್ತದೆ, ಸಾಮಾಜಿಕ ವ್ಯವಸ್ಥೆ ಹದಗೆಡುತ್ತದೆ, ಧಾರ್ಮಿಕ ಮೌಲ್ಯಗಳು ನಶಿಸಿ ಹೋಗುತ್ತವೆ ಎಂಬೆಲ್ಲಾ ಕಂದಾಚಾರಗಳ ಭಾವನೆ ಕೇವಲ ಪುರುಷ ಸಮಾಜದ ಕಲ್ಪನೆ ಜೊತೆಗೆ ಇವಳಿಗೆ ಅವಕಾಶ ನೀಡಬಾರದೆಂಬ ದುರುದ್ದೇಶ ಕಂಡು ಬರುತ್ತದೆ. ಈ ದಿನದ ಶೈಕ್ಷಣಿಕ, ವೈಜ್ಞಾನಿಕ, ತಾಂತ್ರಿಕ, ವೈಚಾರಿಕ ಮುಂತಾದ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮನಾಗಿ ಇದ್ದಾಳೆ ಎಂಬುದು ಸುಳ್ಳಲ್ಲ. ಮುಂದುವರಿದ ರಾಷ್ಟ್ರಗಳಲ್ಲಿ ಇವಳ ಪ್ರತಿಭೆಯನ್ನು ಗುರ್ತಿಸುತ್ತಿರುವುದು ಹಾಗೂ ಎಲ್ಲಾ ರೀತಿಯ ಅವಕಾಶವನ್ನು ಇವಳಿಗೆ ನೀಡಿ ಗೌರವಿಸುತ್ತಿರುವುದು ಕಂಡು ಬರುತ್ತಿದೆ.

◡ ◡ ◡

ಪ್ರಭುದೇವರು ಮತ್ತು ಗೋರಖನಾಥ - ಟಿಪ್ಪಣಿಗಳು

- ಡಾ. ವಿಜಯಕುಮಾರ ಮಹಾನುಭಾವಿಗಳು

ನವನಾಥ ಸಿದ್ಧರಲ್ಲಿ ಗೋರಖನಾಥ ಕೊನೆಯವನು. ಈ ಗೋರಖನಾಥ ರೇವಣ ಸಿದ್ಧರಿಂದ ರಸಸಿದ್ಧಿಯ ಸಂಬಂಧದಲ್ಲಿ ಭಂಗಿತನಾದವನು. ರೇವಣಸಿದ್ಧರು ಕೊಲ್ಲಾಪುರದಲ್ಲಿದ್ದ ಗೋರಖನಾಥನ ಮನೆಯ ಮುಂದೆ ಭಿಕ್ಷೆ ಬೇಡಿದಾಗ ಕಾದ ಕಬ್ಬಿಣದ ಕಟಾರಿಯನ್ನು ಭಿಕ್ಷೆಯಾಗಿ ಹಾಕಿದಾಗ ಅದು ರೇವಣಸಿದ್ಧರ ದೃಷ್ಟಿ ಮಾತ್ರದಿಂದ ಕರಗಿ ನೀರಾಗಿ ಗೋರಖನಾಥ ಹೊಟ್ಟೆ ಸೀಳಿ ಬೆನ್ನಿನಲ್ಲಿ ಕಾಣಿಸಿಕೊಳ್ಳುತ್ತದೆ. ಪರಾಜಿತನಾದ ಗೋರಖನಾಥನು ರೇವಣಸಿದ್ಧರಿಂದ ಮಾರ್ಗದರ್ಶನ ಪಡೆದು ಸಾಧನೆ ಮಾಡುವುದಕ್ಕಾಗಿ ಶ್ರೀ ಶೈಲದ ಕದಳೀವನಕ್ಕೆ ಹೋಗುತ್ತಾನೆ. ಈ ವಿವರವನ್ನು ಹರಿಹರನು ರೇವಣಸಿದ್ಧರ ರಗಳೆಯಲ್ಲಿ ಕೊಟ್ಟಿದ್ದಾನೆ.

ಕವಿ ಚಾಮರಸನು ಪ್ರಭುದೇವರು ಮತ್ತು ಗೋರಖನಾಥರ ನಡುವೆ ನಡೆಯಲಾದ ಯೋಗ, ಅನುಭಾವ ಸ್ಪರ್ಧೆಯನ್ನು ಚಿತ್ರಿಸಿದ್ದಾನೆ. ಚಾಮರಸನ ಪ್ರಭುಲಿಂಗಲೀಲೆಯ ಪ್ರಕಾರ ಗೋರಕ್ಷಕನು ಖಡ್ಗದಿಂದಲೂ ಭೇದಿಸಲಾರದ ವಜ್ರಕಾಯ ಶರೀರವನ್ನು ಸಿದ್ಧಿ ಮಾಡಿಕೊಂಡಿರುತ್ತಾನೆ. ಪ್ರಭುದೇವರನ್ನು ತನಗೆ ಶರಣಾಗತನಾಗಲು ಹೇಳುತ್ತಾನೆ. ನಿರಾಕರಿಸಿದ ಪ್ರಭುದೇವರು ತಮ್ಮ ಬಯಲು ಕಾಯಸಿದ್ಧಿಯನ್ನು ಅವನಿಗೆ ತೋರಿಸಿ ಅಚ್ಚರಿಗೊಳಿಸುತ್ತಾರೆ. ದೇಹ ಬಲಿಯುವುದರಿಂದ ಆಶೆ, ವ್ಯಸನಗಳು ಬಲಿಯುತ್ತವೆ. ಆದುದರಿಂದ ದೇಹದ ಹಂಗು ಗೆಲ್ಲ ಬೇಕು. ಅಶನ, ವ್ಯಸನ, ರೋಗ, ಮುಪ್ಪುಗೆಲ್ಲುವ ಬಯಲ ಸಿದ್ಧಿ, ಅನುಭಾವ ಜ್ಞಾನವೇ ಶ್ರೇಷ್ಠವಾದುದೆಂದು ಬೋಧಿಸುತ್ತಾರೆ. ಗೋರಖನಾಥ ಶರಣಾಗತನಾಗುತ್ತಾನೆ. ಅಂದಿನಿಂದ ಪ್ರಭುದೇವರ ಅನುಯಾಯಿಯಾಗುತ್ತಾನೆ. ಇದು ಕವಿ ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಬರುವ ಕಥಾ ಸಾರಾಂಶ.

ರೇವಣಸಿದ್ಧರ ಸಂದರ್ಭದ ಗೋರಖನಾಥ, ಪ್ರಭು ದೇವರಲ್ಲಿ ಭೇಟಿಯಾದ ಪರಾಜಿತನಾದ ಗೋರಖನಾಥ ಇಬ್ಬರೂ ಬೇರೆ ಬೇರೆಯೇ ಒಬ್ಬರೋ ? ಈ ಜಿಜ್ಞಾಸೆ ವಿದ್ವಾಂಸರು ನಡೆಸಿದ್ದಾರೆ. ಮಹಾರಾಷ್ಟ್ರದ ಈ ಜಲ ಕರಂಜದ ಸಮೀಪದ ಪಾತ್ ಕಣಗಲ ಎಂಬ ರೇಲುವೆ ನಿಲ್ದಾಣವಿದೆ. ಈ ಊರಿಗೆ ೬. ಕಿ. ಮೀ ದೂರದಲ್ಲಿ ಒಂದು ಗುಡ್ಡ

ದೋಪಾದಿಯ ಬೆಟ್ಟವಿದೆ. ಈ ಬೆಟ್ಟದ ಮೇಲೆ ಒಂದು ಪ್ರಭುದೇವರ ದೇವಾಲಯವಿದೆ. ಬೆಟ್ಟದ ತಳಭಾಗದಲ್ಲಿ ಪಾಯರಿಯಲ್ಲಿ ಒಂದು ಬೋರ್ಡ್ ಬರೆಸಿ ತೂಗುಹಾಕಲಾಗಿದೆ. ಆ ಬೋರ್ಡ್ ನಲ್ಲಿ ಹೀಗೆ ಬರೆಯಲಾಗಿದೆ. "ಶ್ರೀ ಮಹಾನ್ ಯೋಗಿ ಅಲ್ಲಮಪ್ರಭು ಯಾಂಚ್ಯ ಜ್ಯೋತಿಂಚ ಮಂದಿರ ಕಡೆ " ೧೦-೩-೧೯೯೬ ರಂದು ನಮ್ಮ ಗೋಕಾಕ್ ಪ್ರವಚನದ ಕಾಲಕ್ಕೆ ಹೋಗಿ ಫೋಟೋ ತೆಗೆದುಕೊಂಡು ಬಂದಿದ್ದೇವೆ. ಇಲ್ಲಿ ಪ್ರತಿವರ್ಷ ದವನದ ಹುಣ್ಣಿಮೆಯ ನಂತರ ಬರುವ ಅನುರಾಧ ನಕ್ಷತ್ರದ ದಿವಸ ಪ್ರಭುದೇವರ ಜಾತ್ರೆ ನಡೆಯುತ್ತದೆ. ಪಾಲಕಿ ಉತ್ಸವ ಮಧ್ಯರಾತ್ರಿ ೧೨ ಗಂಟೆಗೆ ನಡೆಯುತ್ತದೆ. ಇಲ್ಲಿಗೆ ಸಿದ್ಧರಾಮನ ತೇರು ಈ ವೇಳೆಗೆ ಬರುತ್ತದೆ. ಪ್ರಭುದೇವರು ಇಲ್ಲಿ ಬಂದು ಅನುಷ್ಠಾನಕ್ಕೆ ಕುಳಿತಾಗ ಪೂಜೆಗೆ ಹಚ್ಚಿಟ್ಟ ಪ್ರಣತೆಯನ್ನು ಇವತ್ತಿಗೂ ನಂದದಂತೆ ಉಳಿಸಿ ಕೊಂಡು ಬಂದಿದ್ದಾರೆ. ಈ ದೀಪಕ್ಕೆ ತಿಂಗಳಿಗೊಂದರಂತೆ ಬತ್ತಿ ಬದಲು ಮಾಡುತ್ತಾರೆ. ೨೪ ಗಂಟೆಗೆ ಒಮ್ಮೆ ಎಣ್ಣೆ ಹಾಕುತ್ತಾರೆ. ಆ ಜ್ಯೋತಿಯನ್ನು ಪ್ರಭುದೇವರ ಜ್ಯೋತಿ ಅಲ್ಲಮಪ್ರಭುದೇವರ ಜ್ಯೋತಿ ಎಂದು ಕರೆಯುತ್ತಾರೆ. ಅಲ್ಲಮಪ್ರಭುದೇವರನ್ನು ಲೋಹದ ಲಿಂಗಾಕಾರದಲ್ಲಿಯೂ ಜ್ಯೋತಿರೂಪದಲ್ಲಿಯೂ ಪೂಜಿಸಲಾಗುತ್ತದೆ. ದೇವಾಲಯದ ಗೂಡಿನಲ್ಲಿ ಜ್ಯೋತಿ ಇದೆ. ಗರ್ಭಗುಡಿಯ ವೇದಿಕೆಯಲ್ಲಿ ಪ್ರಭುದೇವರ ಹೆಸರಿನಲ್ಲಿ ಲೋಹದಲ್ಲಿ ಮಾಡಿದ ಸ್ಥಾವರಲಿಂಗವಿದೆ. ಇದೇ ಲಿಂಗದಲ್ಲಿ ಒಂಬತ್ತು ಕುದುರೆಗಳಿವೆ. ಒಂದರ ಪಕ್ಕ ಒಂದು ಇರುವ ಕುದುರೆಗಳು ಒಂದಕ್ಕಿಂತ ಇನ್ನೊಂದು, ಇನ್ನೊಂದಕ್ಕಿಂತ ಮತ್ತೊಂದು ಗಾತ್ರ, ಎತ್ತರದಲ್ಲಿ ದೊಡ್ಡ ದಿವೆ. ಎರಡು ಕುದುರೆಗಳ ಮೇಲೆ ಮಾತ್ರ ಇಬ್ಬರು ಕುಳಿತಿದ್ದಾರೆ. ಉಳಿದ ಏಳು ಕುದುರೆಗಳ ಮೇಲೆ ಯಾರೂ ಇಲ್ಲ. ಕುದುರೆಗಳ ಮೇಲೆ ಕುಳಿತವರು ವೀರ ಸೇನಾನಿಯಂತೆ ಕಿರೀಟ, ಖಡ್ಗ, ರಕ್ಷಾಕವಚ, ಇತ್ಯಾದಿ ಯುದ್ಧದ ಉಡುಗೆಯ ವೇಷದಲ್ಲಿದ್ದಾರೆ. ಅಲ್ಲಿಯ ಪೂಜಾರಿಗಳು ಒಬ್ಬರನ್ನು ಗೋರಖನಾಥ ಎಂತಲೂ ಮತ್ತೊಬ್ಬರನ್ನು ಮತ್ಸ್ಯೇಂದ್ರನಾಥ ಎಂತಲೂ ಹೇಳುತ್ತಾರೆ. ಇಂತಹ ದೇವಾಲಯವು ಕೊಲ್ಲಾಪುರದಲ್ಲಿ ಇದೆಯೆಂದೂ ಅಲ್ಲಿ ಪ್ರಭುದೇವರ ಬದಲು ರೇವಣಸಿದ್ಧರ ಹೆಸರಿನಲ್ಲಿ ಲಿಂಗವಿದೆಯೆಂತಲೂ ಹೇಳುತ್ತಾರೆ. ನಾವು ಹೋಗಿ ನೋಡಿಲ್ಲ.

ಈ ಪ್ರಭುದೇವರ ದೇವಾಲಯದ ಆಧಾರದಿಂದ ಎರಡು ಸಂಗತಿಗಳು ಖಂಡಿತವಾಗಿ ತಿಳಿಯುತ್ತದೆ. ೧. ಪ್ರಭುದೇವರು - ಗೋರಖನಾಥ ಸಮಕಾಲೀನರೆಂದು

ತಿಳಿಯುತ್ತದೆ. ೨. ಕವಿ ಚಾಮರಸನು ಪ್ರಬುಲಿಂಗಲೀಲೆಯಲ್ಲಿ ಚಿತ್ರಿಸಿರುವ ಪ್ರಭುದೇವರ - ಗೋರಖನಾಥರ ಪ್ರಸಂಗವು ನಡೆದ ಘಟನೆಯೆಂದು ಖಚಿತವಾಗಿ ಹೇಳಬಹುದು. ಯೋಗ, ಅರಿವು, ತಪಸ್ಸು ಇವುಗಳಿಗೆ ಗೋರಖನಾಥ ಪ್ರಭುದೇವರ ಅನುಯಾಯಿಯಾಗಿದ್ದರೆಂತಲೂ ಪ್ರಭುದೇವರು ಧರ್ಮಯಾತ್ರೆಯಲ್ಲಿದ್ದಾಗ ಇವರೆಲ್ಲ ಪ್ರಭುದೇವರ ಜೊತೆ ಇದ್ದರೆಂತಲೂ ಅಲ್ಲಿನ ಅರ್ಚಕರು, ಭಕ್ತರು ಹೇಳುತ್ತಾರೆ. ಈ ಪ್ರಭುದೇವರ ದೇವಾಲಯದಲ್ಲಿ ಎರಡು ಸಲ ಜಾತ್ರೆ ನಡೆಯುತ್ತದೆ. ಒಂದು ಕಾರ್ತೀಕ ಮಾಸದಲ್ಲಿ. ಮತ್ತೊಂದು ದವನದ ಹುಣ್ಣಿಮೆಯ ನಂತರದಲ್ಲಿ ಬರುವ ಅನುರಾಧ ನಕ್ಷತ್ರದಂದು. ಈ ಜಾತ್ರೆಯ ಕಾಲಕ್ಕೆ ಇನ್ನೊಂದು ವೈಶಿಷ್ಟ್ಯವಿದೆ. ಸುತ್ತಮುತ್ತಲ ಗ್ರಾಮದವರು ಪಂಜು ಹಿಡಿದು ಬೆಳಗಿಸಿ ಕೊಂಡು ಮಧ್ಯರಾತ್ರಿ ಹನ್ನೆರಡು ಗಂಟೆಗೆ ಅವರವರ ಊರುಗಳಿಂದ ಈ ಬೆಟ್ಟಕ್ಕೆ ಪ್ರಭುದೇವರ ಜಾತ್ರೆಗೆ ಬರುತ್ತಾರಂತೆ. ಈ ಜಾತ್ರೆಯನ್ನು ನಾವು ನೋಡಿಲ್ಲ. ವಿವರಗಳನ್ನು ಇನ್ನೂ ಹೆಚ್ಚು ಬರೆಯಬಹುದಿತ್ತು.

ಒಟ್ಟಾರೆ ಇಷ್ಟು ಹೇಳಬಹುದು. ಇದೇ ಗೊರಖನಾಥನೇ ಪ್ರಭುದೇವರು ಹಿಮಾಲಯಕ್ಕೆ ಹೋದಾಗ ಅವರ ಜೊತೆ ಹಿಮಾಲಯಕ್ಕೂ ಹೋಗಿ ಅಲ್ಲಿ ನೆಲೆ ನಿಂತು ಸಮಾಧಿಯಾಗಿದ್ದಾನೆ. ಹಿಮಾಲಯಲದಲ್ಲಿಯೂ ಈ ಗೋರಖನಾಥ ದೇವಾಲಯವಿದೆ. ಇದೇ ಗೋರಖನಾಥನು ಕಲ್ಯಾಣದಲ್ಲಿ ಪ್ರಭುದೇವರ ಜೊತೆ ಇದ್ದ ರೇವಣಸಿದ್ಧ ಅರ್ಥಾತ್ ರೇಣುಕಾಚಾರ್ಯರ ಸಮಕಾಲೀನನೂ ಆಗಿದ್ದ. ರಸವಿದ್ಯೆಯ ಅಜ್ಞಾನವನ್ನು ಹೋಗಲಾಡಿಸಿ ಕೊಂಡು ರೇವಣಸಿದ್ಧರಿಂದ ಉಪದೇಶ ಪಡೆದು ರೇವಣಸಿದ್ಧರ ಆದೇಶದಂತೆ ಶ್ರೀಶೈಲದ ಕದಳೀವನಕ್ಕೆ ಹೋಗಿ ತಪಸ್ಸು, ಯೋಗಸಾಧನೆ ನಡೆಸಿದ. ತಪಸ್ಸಿಗೆಂದು ಪ್ರಭುದೇವರು ಶ್ರೀಶೈಲದ ಕದಳೀವನಕ್ಕೆ ಬಂದಾಗ ಮತ್ತೆ ಪ್ರಭುದೇವರಿಂದ ಜ್ಞಾನೋಪದೇಶ ಪಡೆದು ಕೊನೆಯವರೆಗೂ ಪ್ರಭುದೇವರ ಜೊತೆಯಲ್ಲಿಯೇ ಇದ್ದರು. ವಚನ ಬರೆದಿರುವ ಗೋರಖನಾಥನೇ ಇವನು.

ನವಶೋಧಿತ ಶಿಲಾಯುಗ ಸ್ಮಾರಕಗಳು

- ಸಾಸಲು ಜೆ. ವಿಶ್ವನಾಥ್

ಶಿಲಾಯುಗ ಸಂಸ್ಕೃತಿಯಲ್ಲಿ ಕಬ್ಬಿಣ ಯುಗಕ್ಕೆ ಒಂದು ಮಹತ್ವದ ಸ್ಥಾನವಿದೆ. ಈ ಕಬ್ಬಿಣ ಯುಗದ ಕೊನೆಯ ಹಂತವೇ ಬೃಹತ್ ಶಿಲಾ ಸಂಸ್ಕೃತಿ ಯುಗ. ಮಾನವ ಒಂದೆಡೆ ನಿಂತು ವಸತಿ ನಿರ್ಮಿಸಿಕೊಂಡಿದ್ದು ಹಾಗೂ ಶವ ಸಂಸ್ಕಾರ ಪದ್ಧತಿಯಲ್ಲಿ ಬೃಹತ್ ಸ್ಮಾರಕಗಳ ರಚನೆ ಬಹುಮುಖ್ಯವಾದ ಬೃಹತ್ ಶಿಲಾಯುಗದ ಲಕ್ಷಣ ಗಳಾಗಿವೆ. ಈ ಸಂಸ್ಕೃತಿಯಲ್ಲಿ ನಾವು ಸಮಾಧಿಗಳ ರಚನೆಯಲ್ಲಿ ವೈವಿಧ್ಯತೆಯನ್ನು ಕಾಣಬಹುದು. ೧. ಶಿಲಾವೃತ್ತ ಸಮಾಧಿ, ಇದರಲ್ಲಿ ಏಕ; ದ್ವಿ ; ಪಂಚ್ ; ಸಪ್ತ ; ದಶ ಸುತ್ತುಗಳ ಸಮಾಧಿ, ೨. ಕಲ್ಲುಗಪ್ಪೆ ಅಥವಾ ಮೆಲ್ಲುಗಪ್ಪೆ ಸಮಾಧಿ ೩. ಹಾದಿಕೋಣೆ ಸಮಾಧಿ ೪. ರಂಧ್ರ ಕೋಣೆ ಸಮಾಧಿ ೫. ಸ್ವಸ್ತಿಕ್ ಮಾದರಿಯ ಸಮಾಧಿ ಇತ್ಯಾದಿ ಸಮಾಧಿಗಳನ್ನು ಬೃಹತ್ ಶಿಲೆಗಳಿಂದ ಬಾಕ್ಸ್ ಮಾದರಿಯಲ್ಲಿ ಕಟ್ಟಿ ಪೂರ್ವ ದಿಕ್ಕಿಗೆ ಒಂದು ರಂಧ್ರ ಕೊರೆದಿರುತ್ತಾರೆ. ಕೆಲವೆಡೆ ನೂರಾರು ಸಮಾಧಿಗಳ ಮಧ್ಯೆ ಒಂದು ಬೃಹತ್ ಶಿಲೆಯನ್ನು ಸ್ಮಾರಕದಂತೆ ನಿಲ್ಲಿಸುತ್ತಾರೆ. ಇದನ್ನು ನಿಲುವುಗಲ್ಲು, ಗೊಡ್ಡಗಲ್ಲು, ಪಾಂಡವರ ಕಲ್ಲು, ಕೋತಿ ಕಲ್ಲು, ಕೋಪ್ ಕಲ್ಲು ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಇದನ್ನು ಇಂಗ್ಲಿಷ್‌ನಲ್ಲಿ ಮೆನ್‌ಹರ್ ಎನ್ನುವರು.

ದಕ್ಷಿಣ ಭಾರತದಲ್ಲಿ ಈ ಸಂಸ್ಕೃತಿಯ ಸಾವಿರಾರು ನೆಲೆಗಳು ಪತ್ತೆಯಾಗಿವೆ. ಕರ್ನಾಟಕದಲ್ಲೂ ಈ ನೆಲೆಗಳು ಹಲವಾರು ದೊರೆತಿವೆ. ಆದರೆ ದಕ್ಷಿಣ ಕರ್ನಾಟಕದಲ್ಲಿ : ಸ್ಮಾರಕಗಳು ಹಾಗೂ ರೇಖಾಚಿತ್ರಗಳು ಕ್ವಚಿತ್ತಾಗಿ ದೊರೆತಿವೆ. ಸಮಾಧಿಗಳಂತೂ ಹೇರಳವಾಗಿ ದೊರೆತಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಬಹುಮುಖ್ಯ ವಾದ ಅಷ್ಟೇ ಮಹತ್ವದ ೫ ಬೃಹತ್ ಶಿಲಾಸಂಸ್ಕೃತಿಯ ನೆಲೆಗಳನ್ನು ಪತ್ತೆ ಹಚ್ಚಿದ್ದೇನೆ. ಈ ನೆಲೆಗಳಲ್ಲಿ ಅಪೂರ್ವವಾದ ಬೃಹತ್ತಾದ ೨೬ ನಿಲುವುಗಲ್ಲುಗಳು ಸುಮಾರು ೧,೫೦೦ ಕ್ಕೂ ಹೆಚ್ಚಿನ ವಿವಿಧ ರೀತಿಯ ಶಿಲಾಯುಗ ಸಮಾಧಿಗಳೂ ದೊರೆತಿವೆ. ದೇವನಹಳ್ಳಿ ದೊಡ್ಡಬಳ್ಳಾಪುರ ಮಾರ್ಗ ಮಧ್ಯದಲ್ಲಿನ ೧. ಕೊಯಿರ್ ೨. ಹೊಸೂರು ೩. ಹರುವನಹಳ್ಳಿ ೪. ಜೋತಿಪುರ ೫. ಬ್ಯಾಡರ ಹಳ್ಳಿ ಗ್ರಾಮಗಳ ಪರಿಸರದಲ್ಲಿ ಪ್ರಸ್ತುತ ಶಿಲಾಯುಗ ನೆಲೆಗಳು ಪತ್ತೆಯಾಗಿವೆ.

ದೇವನಪಳ್ಳಿ ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಬದಿಯಲ್ಲಿರುವ ಹೊಸೂರು ಗ್ರಾಮದ ಪಕ್ಕದಲ್ಲಿ ೧೨ ನಿಲುವುಗಲ್ಲುಗಳಿದ್ದು, ಸುಮಾರು ೩ ಕೀ.ಮೀ. ಪರಿಸರದಲ್ಲಿ ೧೦೦೦ ಕ್ಕೂ ಹೆಚ್ಚು ಕಲ್ಗುಪ್ಪೆ ಅಥವಾ ಮೇಲ್ಗುಪ್ಪೆ ಸಮಾಧಿಗಳಿವೆ. ದಪ್ಪ ದಪ್ಪ ಶಿಲೆಗಳನ್ನು ಸಮಾಧಿಗಳ ಮೇಲೆ ಟೋಪಿಯಂತೆ ಮುಚ್ಚಿರುವುದರಿಂದ ಸ್ಥಳೀಯರು ಈ ಕಲ್ಲುಗಳನ್ನು ಟೋಪಿಕಲ್ಲು ಎಂತಲೂ ಕರೆಯುತ್ತಾರೆ. ಇಲ್ಲಿ ದೊರೆತಿರುವ ೧೨ ಮೆನ್ಹರ್ ಗಳಲ್ಲಿ ೨ ನಿಲುವುಗಲ್ಲುಗಳು ೨೨ ಅಡಿ ಉದ್ದ ೫೨ ಅಡಿ ಅಗಲವಿದ್ದರೆ, ಏಳೆಂಟು ನಿಲುವುಗಲ್ಲುಗಳು ೮ ರಿಂದ ೧೧ ಅಡಿ ಉದ್ದ ಹಾಗೂ ೩-೫ ಅಡಿ ಅಗಲವಾಗಿವೆ. ಹಾಗೂ ಉಳಿದ ೨ ನಿಲುವುಗಲ್ಲುಗಳು ೪-೫ ಅಡಿ ಉದ್ದವಾಗಿದ್ದು ೨-೩ ಅಡಿ ಅಗಲವಾಗಿವೆ. ಈ ಎಲ್ಲಾ ನಿಲುವುಗಲ್ಲುಗಳು ನೂರಾರು ಸಮಾಧಿಗಳ ಮಧ್ಯದಲ್ಲಿ ಸ್ವಲ್ಪ ವಾಲಿಕೊಂಡು ಸ್ತಂಬಗಳಂತೆ ಗತ ಸಂಸ್ಕೃತಿಯನ್ನು ಸಾರುತ್ತಿವೆ.

ಹೊಸೂರಿನಿಂದ ಸ್ವಲ್ಪ ಮುಂದೆ ಕೊಯಿರಾದ ಕೃಷ್ಣಪ್ಪನ ಹೊಲದಲ್ಲಿ ೫ ನಿಲುವುಗಲ್ಲುಗಳಿವೆ. ಅದರಲ್ಲಿ ಒಂದು ೧೬ ಅಡಿ ಉದ್ದ, ೪ ಅಡಿ ಅಗಲವಾಗಿದೆ. ಮತ್ತೆರಡು ನಿಲುವುಗಲ್ಲುಗಳು ೧೦ ಅಡಿ ಉದ್ದ ೩ ಅಡಿ ಅಗಲವಾಗಿದ್ದರೆ ಉಳಿದೆರಡು ೬ ೧/೨ ಅಡಿ ಉದ್ದ ೩ ರಿಂದ ೩ ೧/೨ ಅಡಿ ಅಗಲವಾಗಿವೆ. ಇವೂ ಸಹ ಭೂಮಿಯ ಕಡೆ ವಾಲಿಕೊಂಡಿವೆ. ಈ ಪರಿಸರದಲ್ಲೂ ನೂರಾರು ಶಿಲಾವೃತ್ತಿ ಹಾಗೂ ಮೇಲ್ಗುಪ್ಪೆ ಸಮಾಧಿಗಳಿವೆ.

ಹೊಸೂರಿನಿಂದ ಸ್ವಲ್ಪ ದೂರದಲ್ಲಿರುವ ಬ್ಯಾಡರಹಳ್ಳಿ ಪರಿಸರದಲ್ಲಿ ಹೊಲಗಳ ಮಧ್ಯೆ ೫ ನಿಲುವುಗಲ್ಲುಗಳಿದ್ದು, ೫-೬ ಅಡಿ ಉದ್ದ ೨-೩ ಅಡಿ ಅಗಲವಾಗಿವೆ. ಕೃಷಿಗೆ ಈ ಭೂಮಿಯನ್ನು ಬಳಸುತ್ತಿರುವುದರಿಂದ ಇಲ್ಲಿ ಹಲವಾರು ಸಮಾಧಿಗಳು ಹಾಳಾಗಿವೆ. ಈ ಊರಿನ ರಸ್ತೆಗಳಲ್ಲಿಯೇ ಅಗೆದು ಹಾಳಾದ ತೊಟ್ಟಿಯಾಕಾರದ ಚಪ್ಪಡಿಗಳನ್ನು ಬಳಸಿರುವ ಸಮಾಧಿಗಳನ್ನು ನಾವು ಕಾಣಬಹುದು. ಜ್ಯೋತಿಪುರ, ಹರುವನಪಳ್ಳಿಗಳ ಪರಿಸರದಲ್ಲಿಯೂ ಸಣ್ಣ ಸಣ್ಣ ೩-೪ ಅಡಿ ಉದ್ದದ ನಿಲುವುಗಲ್ಲುಗಳನ್ನು ಹತ್ತಾರು ಸಮಾಧಿಗಳನ್ನು ನಾವು ಕಾಣಬಹುದಾಗಿವೆ.

ಈ ಎಲ್ಲಾ ಸ್ಮಾರಕಗಳು ಸಮಾಧಿಗಳಿರುವ ಸ್ಥಳಗಳನ್ನು ಸ್ಥಳೀಯರು ಪಾಂಡವರ ವಾಸಸ್ಥಳವೆಂದು ನಂಬಿರುತ್ತಾರೆ. ಹಾಗೂ ತೊಟ್ಟಿಯಾಕಾರದ ಸಮಾಧಿಗಳನ್ನು ಪಾಂಡವರು ಧಾನ್ಯ ಸಂಗ್ರಹಿಸುತ್ತಿದ್ದ ಕಣಜಗಳೆಂದು ಮಹಾಭಾರತದ ಕಥೆಗಳನ್ನು ಹೇಳುತ್ತಾರೆ. ಇಲ್ಲಿನ ನಿಲುವುಗಲ್ಲುಗಳನ್ನು ಪಾಂಡವರು ಆನೆ ಕಟ್ಟಲು ಬಳಸುತ್ತಿದ್ದ-ರೆಂದು ಹೇಳಿ ಇವುಗಳನ್ನು

"ಆನೆಗುಂಡು" ಎಂದು ಆ ಪ್ರದೇಶವನ್ನು "ಪಾಂಡವರ ದಿನ್ನೆ" ಎಂದು ಕರೆಯುತ್ತಾರೆ.

ಆ ನೆಡುಗಲ್ಲುಗಳನ್ನು ಪಾಂಡವರ ಕಲ್ಲುಗಳೆಂದು ಕರೆಯುವ ವಾಡಿಕೆಯನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ಗಮನಿಸಿದರೆ ಪ್ರಾಚೀನ ತಮಿಳಿನಲ್ಲಿ "ಪಾಂಡು" ಎಂದರೆ "ಸಮಾಧಿ" ಎಂಬ ಅರ್ಥವಿದೆ. ಭಾಗಶಃ ನೂರಾರು ವರ್ಷಗಳಿಂದ ಈ "ಪಾಂಡು" ಎಂಬ ತಮಿಳಿನ ಪ್ರಾಚೀನ ರೂಪ ಉಳಿದು ಇಲ್ಲಿನವರ ಬಾಯಲ್ಲಿ "ಪಾಂಡುಕಲ್ಲು" ಅಂದರೆ ಸಮಾಧಿಗಳೇ ಪಾಂಡವರ ಕಲ್ಲುಗಳೆಂದಾಗಿ, ಮಹಾಭಾರತದ ಕಥೆಗಳಿಗೆ ಸಾಮಿಪ್ಯ ಹೊಂದಿ ಬಳಕೆಯಾಗಿದ್ದಿರಬಹುದೆಂದು ಹೇಳಲು ಸಾಧ್ಯವಿದೆ.

ರಾತ್ರಿಯ ಸಮಯದಲ್ಲಿ ಹಣದಾಸೆಗಾಗಿ ಹತ್ತಾರು ಸಮಾಧಿಗಳನ್ನು ಸ್ಥಳೀಯರು ನಾಶಮಾಡಿದ್ದಾರೆ ಹೀಗೆ ಹಾಳಾದ ಸಮಾಧಿಗಳು ದಪ್ಪ ದಪ್ಪ ಗ್ರಾನೈಟ್ ತರದ ಕಲ್ಲುಗಳಿಂದ ಕೂಡಿದ್ದು, ಪೂರ್ವ ದಿಕ್ಕಿಗೆ ಒಂದು ರಂದ್ರವನ್ನು ಒಳಗೊಂಡಿದೆ. ಶಿಲಾಯುಗ ಕಾಲದ ಲಕ್ಷಣಗಳಿರುವ ಮಡಿಕೆಯ ಚೂರುಗಳು ಎಲುಬುಗಳು ಒಂದು ಸ್ವಲ್ಪ ಹಾಳಾದ ಮಡಿಕೆ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ದೊರೆತಿವೆ.

ಇಲ್ಲಿ ದೊರೆತಿರುವ ಸಮಾಧಿಗಳು ಏಕಶಿಲಾವೃತ್ತ, ಐದು ಶಿಲಾವೃತ್ತ, ಏಳು ಶಿಲಾವೃತ್ತವನ್ನು ಒಳಗೊಂಡಿವೆ. ಕೆಲವು ಸ್ವಸ್ತಿಕ್ ಆಕಾರದಲಿಲ್ಲವಾರೆ ಅತಿ ಹೆಚ್ಚು ಸಮಾಧಿಗಳು ಕಲ್ಲುಗಪ್ಪೆ ಸಮಾಧಿಗಳಾಗಿವೆ. ಕೆಲವು ಮಾತ್ರ ಹಾದಿ ಕೋಣೆ ಸಮಾಧಿಗಳು ಈ ಪರಿಸರದಲ್ಲಿವೆ.

ಇಲ್ಲಿ ಕ್ಯಾಪ್‌ಸ್ಟೋನ್ (ಕಲ್ಲುಗಪ್ಪೆ) ಸಮಾಧಿಗಳಿಗೆ ಬಳಸಿರುವ ಕಲ್ಲುಗಳು ೫ ಅಡಿ ಉದ್ದ ಒಂದು ಅಗಲದ ಚಪ್ಪಡಿಗಳಿಂದ ಕೂಡಿದ್ದು ಮೇಲ್ಭಾಗದ ಕಲ್ಲುಗಳು ೧೦ ರಿಂದ ೧೫ ಅಡಿ ಉದ್ದ ಮತ್ತು ಅಷ್ಟೇ ಅಗಲವಾಗಿ ವೃತ್ತದಂತಿವೆ. ಕೆಲವು ಸಮಾಧಿಗಳು ಮಾತ್ರ ತ್ರಿಕೋನ ಮಾದರಿಯಲ್ಲಿವೆ.

ಯಾವುದೇ ರೀತಿಯ ಆಯುಧಗಳು ಈ ಭಾಗದಲ್ಲಿ ಲಭ್ಯವಾಗಿಲ್ಲ. ವೈಜ್ಞಾನಿಕ ಉತ್ಖನನಕ್ಕೆ ಇಲ್ಲಿನ ಸಮಾಧಿಗಳು ಯೋಗ್ಯವಾಗಿವೆ. ಇಲ್ಲಿ ಉತ್ಖನನ ಮಾಡಿದರೆ ಶಿಲಾಯುಗದ ಸಂಸ್ಕೃತಿಯ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಲು ಸಹಾಯಕವಾಗುತ್ತಿದೆ. ಈ ಭಾಗದಲ್ಲಿನ ಎಲ್ಲಾ ಶಿಲಾಯುಗದ ನೆಲೆಗಳು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ್ದು, ಹಿರಿಯ ವಿದ್ವಾಂಸರ ಅಭಿಪ್ರಾಯದಂತೆ ಕ್ರಿ.ಪೂ. ೨-೩ನೇ ಶತಮಾನಕ್ಕೆ ಸೇರಿದವುಗಳೆಂದು ಕಾಲ ನಿರ್ಣಯ ಮಾಡಬಹುದಾಗಿದೆ.

ಬಾಣಂತಿಮಾರಮ್ಮ : ಒಂದು ಜಾನಪದೀಯ ಅಧ್ಯಯನ

- ಕೆ.ಪಿ. ದೊಡ್ಡಿ ಎಂ. ಭೈರೇಗೌಡ

ಕನ್ನಡ ಜಾನಪದದಲ್ಲಿ ಮಾರಮ್ಮನನ್ನು ಕುರಿತ ಹಲವಾರು ಪುರಾಣಗಳನ್ನು ಕಾಣುತ್ತೇವೆ. ಕಬ್ಬಾಳಮ್ಮ, ಮದ್ದೂರಮ್ಮ, ದಂಡಿನಮಾರಮ್ಮ, ಚಿಕ್ಕಮ್ಮ, ಬಿಸಿಲು ಮಾರಮ್ಮ, ಇವರೆಲ್ಲ ಶಕ್ತಿದೇವತೆಯ ಪ್ರತಿರೂಪವೇ ಆಗಿರುತ್ತದೆ. ಈ ಎಲ್ಲಾ ಮಾರಮ್ಮಗಳ ಉಲ್ಲೇಖಗಳು ಒಂದಲ್ಲೊಂದೆಡೆ ಕಂಡುಬಂದರೂ, ಕನಕಪುರ ತಾಲ್ಲೂಕಿನ ಇರುಳಿಗರ ಆರಾಧ್ಯ ದೇವತೆ ಬಾಣಂತಿಮಾರಮ್ಮನನ್ನು ಕುರಿತ ಉಲ್ಲೇಖಗಳು ನನಗೆ ತಿಳಿದಮಟ್ಟಿಗೆ ಕಂಡುಬರುವುದಿಲ್ಲ. ಆಕೆಯನ್ನು ಕುರಿತಂತೆ ಇರುವ ಐತಿಹ್ಯಗಳು, ನಂಬಿಕೆಗಳು, ಬಿಡಿ ಘಟನೆಗಳನ್ನು ಆಧರಿಸಿ ಪ್ರಸ್ತುತ ಲೇಖನವನ್ನು ಸಿದ್ಧಗೊಳಿಸಿರುತ್ತೇನೆ ಪೂರ್ಣ ಕ್ಷೇತ್ರಕಾರ್ಯ ಆಧಾರಿತವಾಗಿದ್ದು, ವಕ್ತೃಗಳ ಹೇಳಿಕೆಗಳನ್ನು ಮುಖ್ಯವಾಗಿ ದಾಖಲಿಸಿರುತ್ತೇನೆ. ಈ ಬಾಣಂತಿಮಾರಮ್ಮನ ಸುತ್ತ ಹೆಣೆದಿರುವ ಕಥಾಗುಚ್ಛದಲ್ಲಿ, ಜನಪದರ ಕಾವ್ಯ ಸೃಷ್ಟಿಯ ಪ್ರೌಢಿಮೆ ಗೋಚರಿಸುತ್ತದೆ. ಭಕ್ತ, ಭಗವಂತರ ನಡುವಿನ ಅಂತರ ಕೂದಲೆಳೆಯಷ್ಟು ಮಾತ್ರವೆನಿಸುತ್ತದೆ. ಭಗವಂತ ಭಗವತಿಯರನ್ನು ಮನುಷ್ಯ ರೂಪದಲ್ಲಿಯೇ ನೋಡಿ ಅವರಿಂದ ಭೂಲೋಕದಲ್ಲಿ ಪವಾಡಗಳನ್ನು ಸೃಷ್ಟಿಸಿ. ಆ ಪವಾಡಗಳ ಹೆಸರಿನಲ್ಲಿ ಜನರ ನಂಬಿಕೆಗಳನ್ನು ಭದ್ರಗೊಳಿಸಿ, ಅದರಿಂದಲೇ ಹೊಟ್ಟೆ ಹೊರೆವ ಪರಿಪಾಠವನ್ನು ಗಮನಿಸಬಹುದಾದರೂ ಇಲ್ಲಿನ ಇವರಲ್ಲಿನ ಕಥಾ ಹಂದರದ ಹರವು ಮಾತ್ರ ಕಲ್ಪನಾತೀತ.

ಇಲ್ಲಿನ ಮಾರಮ್ಮ ಕೈಲಾಸವಾಸಿ ಶಿವನ ಅರ್ಧಾಂಗಿಯಾದ ಶಕ್ತಿಯ ಮತ್ತೊಂದು ಅವತಾರ, ಭಕ್ತರನ್ನು ಉದ್ಧರಿಸಲು ರಾಕ್ಷಸೀಪ್ರವೃತ್ತಿಯನ್ನು ನಾಶಮಾಡಲು ಹೇಗೆ ಭೂಮಿಯಲ್ಲಿ ಅವತಾರವೆತ್ತಿದಳೆಂಬ ಪುರಾಣ ಕಥಾರೂಪವೇ ಬಾಣಂತಿಮಾರಮ್ಮನ ಇತಿವೃತ್ತ.

ಇರುಳಿಗ ವಕ್ತೃ ಚಿನ್ನಯ್ಯ ಹೇಳುತ್ತಾರೆ. ಶಕ್ತಿ ದೇವತೆ ಎನಿಸಿರುವ ಗಿರಿಜೆ ಭಕ್ತರನ್ನು ಕಾಪಾಡಲು, ರಕ್ಕಸರನ್ನು ಸದೆಬಡಿಯಲು ಹಲವಾರು ರೂಪುಗಳನ್ನು ಎತ್ತಿ ಬಂದಿದ್ದಾಳೆ. ಮೂಡಲನಾಡಾದ ದೇಶವನ್ನು ಕೊಂಗನಾಡೆಂದು ಕರೆಯುವರು. ಅಲ್ಲಿ ಕೈಲಾಸಗಿರಿ

ಎಂಬ ಪಟ್ಟಣ, ಆ ಪಟ್ಟಣದಲ್ಲಿ ಶಿವನಾಂಕಾರರಾಯನೆಂಬ ದೊರೆ. ಮಹಾದೇವಿಯೇ ಆತನ ಪತ್ನಿ, ಮಹಾಮುನಿ ನಾರದರೇ ಮಹಾಮಂತ್ರಿ.

ಬಹುಕಾಲ ಕಳೆದರೂ ಮಕ್ಕಳಾಗದೆ ಚಿಂತಾಕ್ರಾಂತರಾಗಿ ಕಾಲ ಕಳೆಯುತ್ತಿದ್ದರು. ಓಂಕಾರರೂಪಿ ಶಿವನು ಶಿವನಾಂಕಾರರಾಯನ ಕನಸಿನಲ್ಲಿ ಪ್ರತ್ಯಕ್ಷನಾಗಿ ನೀನು ಅನುರೂಪರಾದ ಮಕ್ಕಳನ್ನು ಪಡೆಯುವೆ ಎಂದು ಮಾಯವಾದ. ಮಹಾದೇವಿ ಗರ್ಭವತಿಯಾಗಿ ಗಂಡು ಮಗುವೊಂದನ್ನು ಪಡೆದಳು. ಆ ಮಗುವಿಗೆ ಮುತ್ತುರಾಯನೆಂಬ ಹೆಸರನ್ನಿಟ್ಟರು. ಕಾಲಾನಂತರ ಮತ್ತೊಂದು ಹೆಣ್ಣುಮಗುವಿಗೆ ಜನ್ಮವಿತ್ತಳು. ಆ ಹೆಣ್ಣು ಮಗುವಿಗೆ ಭಾಗೀರತಿ ಎಂದು ನಾಮಕರಣ ಮಾಡಿದರು. ನಂತರ ಹುಟ್ಟಿದ ಮತ್ತೊಂದು ಹೆಣ್ಣು ಮಗವೇ ಚಿಕ್ಕಮ್ಮ ತಾಯಿ. ಕಾಲ ಉರುಳುತ್ತಿತ್ತು ಭಾಗೀರತಿ, ಚಿಕ್ಕಮ್ಮತಾಯಿ ಎಂಬ ಆ ಹೆಣ್ಣುಮಕ್ಕಳು ಶಿವನ ಧ್ಯಾನದಲ್ಲಿ ಕಾಲಯಾಪನೆ ಮಾಡುತ್ತಿದ್ದರು. ಹತ್ತು ಹನ್ನೆರಡು ವರ್ಷಗಳುರುಳಿದವು.

ದಕ್ಷಿಣನಾಡಿನ ಮುಡುಕುದುರೆ ಮಲ್ಲರಾಯ, ತಲಕಾಡು ಪಂಚಲಿಂಗಯ್ಯ ಎಂಬ ಇಬ್ಬರು ಅಣ್ಣ ತಮ್ಮಂದಿರಲ್ಲಿ ಮಲ್ಲಯ್ಯನಿಗೆ ಮದುವೆಯಾಗಿದೆ. ತಮ್ಮನಾದ ಪಂಚಲಿಂಗಯ್ಯನಿಗೆ ಇನ್ನೂ ಮದುವೆಯಾಗಿರಲಿಲ್ಲ. ಮಂತ್ರಿ ಸಿದ್ಧರಾಮನನ್ನು ಕರೆದು ಪಂಚಲಿಂಗಯ್ಯನಿಗೊಂದು ಹೆಣ್ಣು ನೋಡಬೇಕು ನೀನು ಹೊರಡಲು ಸಿದ್ಧನಾಗು ಎಂದು ಹೇಳುತ್ತಾರೆ. ಸಿದ್ಧರಾಮನು ಆನಂದದಿಂದ ಕಾವೇರಿ ನದಿಗೆ ಹೋಗಿ ಸ್ನಾನ ಮಾಡಿ ಹೊರಡಲು ಅನುವಾದ.

ಇಬ್ಬರೂ ಹುಲಿಯಮೇಲೆ ಕುಳಿತು (ಸಿದ್ಧರಾಮ ಮತ್ತು ಪಂಚಲಿಂಗ) ದೇಶ – ದೇಶವನ್ನೆಲ್ಲಾ ಸುತ್ತಿ ಕೊನೆಗೆ ಕೊಂಗನಾಡು ದೇಶದ ಕೈಲಾಸಗಿರಿ ಪಟ್ಟಣಕ್ಕೆ ಬರುತ್ತಾರೆ. ಗುರು ಮಠಕ್ಕೆ ಹೋಗಿ ನೋಡುವಾಗ ಪಂಚಲಿಂಗಯ್ಯನ ಕಣ್ಣಿಗೆ ಭಾಗೀರತಿ ಬೀಳುತ್ತಾಳೆ. ಅವಳ ಮೇಲೆ ಮನಸಾಗುತ್ತದೆ. ಶಿವನಾಂಕಾರರಾಯ, ಮಲ್ಲರಾಯ, ಮುತ್ತುರಾಯ ಎಲ್ಲರೂ ಸೇರಿ ಮದುವೆ ಮಾತು ಮುಗಿಸುತ್ತಾರೆ. ಮತ್ತೆ ತನ್ನ ನಾಡಿಗೆ ಹೋಗಿ ಬೇಕಾದವರಿಗೆಲ್ಲ ವಿಷಯ ತಿಳಿಸಿ ಮದುವೆ ಮುಗಿಸಿಕೊಂಡು ಮಡದಿಯನ್ನು ಅಲ್ಲಿಯೇ ಬಿಟ್ಟು ಹುಲಿಯೇರಿ ದಕ್ಷಿಣದ ತಲಕಾಡಿಗೆ ಹಿಂದಿರುಗುತ್ತಾರೆ. ಮದುವೆಯಾಗಿ ಮೂರ್ನಾಲ್ಕು ತಿಂಗಳುಗಳಾದರೂ ಪತ್ನಿ ಬರಲಿಲ್ಲ. ಕರೆತರುವ ಎಂದು ಪಂಚಲಿಂಗಯ್ಯ ಮತ್ತೆ ಹುಲಿಯೇರಿ ಬರುತ್ತಾನೆ.

ಕೊಂಗಾಡು ದೇಶದ ಕೈಲಾಸಗಿರಿ ಪಟ್ಟಣಕ್ಕೆ ಬಂದ ಪಂಚಲಿಂಗಯ್ಯ ತನ್ನ ಪತ್ನಿ ಭಾಗೀರತಿಯೊಡನೆ ಸುಖದಿಂದ ಇರುವಾಗ ಹತ್ತು ಹನ್ನೆರಡು ವರ್ಷಗಳೇ ಕಳೆದುಹೋಗುತ್ತವೆ. ಹೀಗಿರುವಾಗ ಭಾಗೀರತಿ, 'ಸ್ವಾಮಿ, ನಮ್ಮ ಮದುವೆಯಾಗಿ ಇಷ್ಟು ವರ್ಷಗಳಾದರೂ ನಮಗೆ ಮಕ್ಕಳ ಭಾಗ್ಯವೇ ಇಲ್ಲವಲ್ಲ 'ಎನ್ನುತ್ತಾಳೆ. ಹೀಗೆ ಮಾತನಾಡಿಕೊಂಡು ಮಲಗಿದಾಗ - ಪರಮೇಶ್ವರರು ಅವರಿಗೆ ಮಕ್ಕಳ ಭಾಗ್ಯವನ್ನು ಕರುಣಿಸಲು ಕನಸಿನಲ್ಲಿ ಬಂದು ನಿಮಗೆ ಮಕ್ಕಳ ಫಲವುಂಟು, ಚಿಂತಿಸಬೇಡಿ ಎಂದು, ನೀವು ಹತ್ತು ಹಳ್ಳಿಗಳಿಗೇ ದೇವರಾಗಿ ಪೂಜಾರ್ಹರಾಗುವಿರಿ ಎಂದು ಹೇಳಿ ಮಾಯವಾದರು. ತಾನು ಕಂಡದ್ದನ್ನು ಪಂಚಲಿಂಗಯ್ಯನಿಗೆ ಭಾಗೀರತಿ ಹೇಳುತ್ತಾಳೆ.

ಹೀಗೆ ಕಾಲ ಕಳೆಯುವಾಗ ಭಾಗೀರತಿಗೆ ಮುಟ್ಟು ನಿಂತು ಗರ್ಭವತಿಯಾಗಿ ನಾಲ್ಕು ಐದು ತಿಂಗಳುರುಳಿದವು. ಆ ಸಂದರ್ಭದಲ್ಲಿ ಪಂಚಲಿಂಗಯ್ಯನು ತನ್ನ ನಾಡಿಗೆ ಹೊರಡಬೇಕೆಂದು ಭಾಗೀರತಿಯೊಡನೆ ಹುಲಿಯೇರಿ ದೇಶ-ದೇಶಗಳನ್ನು ನೋಡಿಕೊಂಡು, ಬೆಟ್ಟ ಪರ್ವತ, ಶಿಖರದ ಸಾಲುಗಳನ್ನು ನೋಡಿಕೊಂಡು ಬರುವಾಗ ಅಷ್ಟ ಸಿಕ್ಕಿದ ಬೆಟ್ಟ (ಇಂದಿನ ಬಾವುಟ [6] ಅಥವಾ ದೇವರಬೆಟ್ಟ [7])ವನ್ನು ಕಂಡು ಆಕರ್ಷಿತಳಾಗಿ ಅಲ್ಲಿನ ರಮಣೀಯ ಸೌಂದರ್ಯ, ಮಲೆನಾಡಿನ ವಾತಾವರಣವನ್ನು ಕಂಡು ಮನಸೋತು ಈ ಭಾಗವನ್ನು ನಾನು ಮನದಣಿಯ ನೋಡಬೇಕೆಂದು ಭಿನ್ನವಿಸಿಕೊಳ್ಳುತ್ತಾಳೆ . ಪೊಲ ರಾವಳ[8]ನ ಹಾವಳಿಯಿರುವುದು ಪಂಚಲಿಂಗಯ್ಯನಿಗೆ ತಿಳಿದಿದ್ದರೂ ಬಸುರೀ ಬಯಕೆಯನ್ನು ತೀರಿಸಬೇಕೆಂದು ಒಪ್ಪಿ ಬೆಟ್ಟದ ನೆತ್ತಿಯ ಸರ್ಪದ ಹೆಡೆಯ ಹಾಗಿರುವ ಸ್ಥಳದಲ್ಲಿ ಇಳಿಯುತ್ತಾರೆ. ಬೆಟ್ಟದ ತಪ್ಪಲಿನ ಸುತ್ತ ಸುಳಿದು ನೋಡುವಾಗ ಅಲ್ಲಿನ ಗುಹೆಗಳಲ್ಲಿ ಗವಿಸಿದ್ಧರು ಮರಗಳ ಕೆಳಗೆ ಮುನೀಶ್ವರರು, ಕೆಲದಲ್ಲಿ ರಸಾಸಿದ್ಧರು ತಪೋನಿರತರಾಗಿರುತ್ತಾರೆ. ಇದನ್ನು ಕಂಡ ಭಾಗೀರತಿ ಆ ಹಾ ಇದೆಂಥ ಪುಣ್ಯಭೂಮಿ, ಇಲ್ಲಿ ಮುಂದೆ ಆ ಬೆಟ್ಟದ ಎದುರಿಗೆ ಒಳ್ಳೆಯ ಗುರುಮಠವಾಗುತ್ತದೆ (ಈಗಿನ ದೇಗುಲ ಮಠ) ದೇವಾನುದೇವತೆಗಳ ವಾಸಸ್ಥಾನವಾಗುತ್ತದೆ. 'ನಾವೂ ಈ ಬೆಟ್ಟದಲ್ಲಿಯೇ ವಾಸಿಸಿಕೊಂಡು ಆನಂದದಿಂದ ಕಾಲ ಕಳೆಯುವ'ಎಂದು ಮನಸ್ಸಿನಲ್ಲಿ ಸಂಕಲ್ಪ ಮಾಡುತ್ತಾಳೆ. ಆನಂದದಿಂದ ಕಾಲ ಕಳೆಯುವಾಗ, ಎಂಟು ತಿಂಗಳ ಬಸುರಿ ಬಾಣಂತನಕ್ಕೆ ಬೇಕಾದ ಎಲ್ಲ ಪದಾರ್ಥಗಳನ್ನು ಸಿದ್ಧಮಾಡಿಟ್ಟು, 'ಭಾಗೀರತಿ, ಬಹುದಿನಗಳಾಯ್ತು, ಅಣ್ಣ ಮಲ್ಲರಾಯನನ್ನು ನೋಡಿ ಬರುತ್ತೇನೆ' ಎಂದು ಸುಟ್ಟ ಶುಕ್ರವಾರ ದಿನ ಪಂಚಲಿಂಗಯ್ಯ ಪಯಣ ಹೊರಡುತ್ತಾನೆ.

ಹೀಗೆ ಕಾಲ ಕಳೆಯುವಾಗ ಒಂಭತ್ತು ತಿಂಗಳು ತುಂಬಿದ ಭಾಗೀರತಿಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಸೂಲಗಿತ್ತಿ ಮಡಿವಾಳಮ್ಮರ ಸಹಾಯದಿಂದ ಸುಖ ಪ್ರಸವವಾಗಿ ಅವಳೀ ಗಂಡು ಶಿಶುಗಳಿಗೆ ಜನ್ಮ ನೀಡುತ್ತಾಳೆ. ಒಮ್ಮೆ ಹಸಿ ಬಾಣಂತಿ ಸ್ನಾನ ಮಾಡಿ ಎಳೆ ಬಿಸಿಲಿನಲ್ಲಿ ತಲೆ ಒಣಗಿಸಿಕೊಳ್ಳಲು ಸರ್ಪದಕಲ್ಲಿನ ಬದಿಗೆ ಬಂದು ಮಂಡೆಯನ್ನು ಒದರುತ್ತಾಳೆ. ಕೆಳಗಡೆಯಿದ್ದ ಹೊಲರಾವಳ ಅಂತರಿಸಿ ನೋಡಿ ಆಹಾ ಈ ಬೆಟ್ಟದಲ್ಲಿ ಯಾರೂ ಇರಲಿಲ್ಲ ! ಸುಂದರಿಯೊಬ್ಬಳು ತನ್ನ ಬಂಗಾರದ ಕೂದಲಿನ ಮಂಡೆಯನ್ನು ಒದರುತ್ತಿದ್ದಾಳೆ ಆಕೆ ಯಾರಿರಬಹುದು ? ಆಕೆಯನ್ನು ನನ್ನ ವಶಮಾಡಿಕೊಳ್ಳ ಬೇಕೆಂದು, ಸುತ್ತ ನೋಡುತ್ತಾನೆ. ಮೇಲೆ ಹತ್ತಿ ಹೋಗಲು ಎಲ್ಲೂ ಸ್ಥಳವಿರುವುದಿಲ್ಲ. ಅಕ್ಕ ಪಕ್ಕ ಬಿದ್ದ ದೊಡ್ಡ ದೊಡ್ಡ ಕಲ್ಲು ಬಂಡೆಗಳನ್ನು ಕಿತ್ತು ಹಂತ ಕಟ್ಟಿಕೊಂಡು ಎತ್ತರವಾದ ಶಿಖರವನ್ನು ಹತ್ತಲಾರಂಭಿಸಿದ. '

ಇದನ್ನು ಕಂಡ ಸೂಲಗಿತ್ತಿಯು ಭಾಗೀರತಿಗೆ ತಿಳಿಸುತ್ತಾಳೆ. ಆಗ ಭಾಗೀರತಿಯು 'ಶಿವನೇ ನೀನೇ ಗತಿ' – ಎಂದು ತನ್ನ ಪತಿದೇವರನ್ನು ಮನದಲ್ಲಿ ನೆನೆಯುತ್ತ ತುಂಬಿಟ್ಟಿದ್ದ ಎಣ್ಣೆಯ ಹಂಡೆಯನ್ನು ಬೆಟ್ಟದ ನೆತ್ತಿಯಿಂದ ಉರುಳಿಸುತ್ತಾಳೆ. ಎಣ್ಣೆಯ ಮಜ್ಜನದಿಂದ ಬೆಟ್ಟವಾದ ಬೆಟ್ಟವೆಲ್ಲಾ ನುಣ್ಣಗಾಗುತ್ತದೆ". ಎಣ್ಣೆ ಮಜ್ಜನದಿಂದ ನುಣ್ಣಗಾಗಿ ಜಾರುತ್ತಿದ್ದರೂ ಲೆಕ್ಕಿಸದೆ ಕಲ್ಲಿನ ಹಂತವನ್ನು (ಮೆಟ್ಟಿಲು) ಕಟ್ಟಿಕೊಂಡು ಬಾಣಂತಿಯ ಬಳಿಗೆ ಬರುತ್ತಿರುತ್ತಾನೆ. ಬರುತ್ತಿರುವ ಹೊಲರಾವಳನನ್ನು ನೋಡಿ ಆರ್ತನಾದ ಮಾಡುತ್ತಿರುತ್ತಾಳೆ. 'ರಾಮ ರಾಮ ಜಯ ರಾಮ ! ಎಲ್ಲಿರುವೆ ಮುಕುಂದ ರಾಮ ! ಮೆಲ್ಲಗೆ ಬಾರೋ ಸೀತಾರಾಮ ! ಎಲ್ಲರ ಕಾಯೋ ಕೋದಂಡರಾಮ !'- ಎಂದು ರಾಮ ಜಪದಲ್ಲಿದ್ದ ಮುತ್ತುರಾಯನಿಗೆ ತಂಗಿಯ ಗೋಳು ಕೇಳಿಸುತ್ತದೆ. 'ಇದೋ ತಂಗಿ ಬಂದೆ ' ಎಂದು ಒಂದೇ ನೆಗೆತಕ್ಕೆ ಬರುತ್ತಾನೆ. ಮುತ್ತುರಾಯ ಬರುವಷ್ಟರಲ್ಲಿ ತನ್ನ ಪತಿಯ ಪಾದ ಸ್ಮರಣೆ ಮಾಡುತ್ತಾ ನೀನೇ ನಿನ್ನ ಮಕ್ಕಳನ್ನು ಕಾಪಾಡಬೇಕೆಂದು ಬೆಟ್ಟದಿಂದ ಕೆಳಗೆಸೆಯುತ್ತಾಳೆ. ' ಮಕ್ಕಳನ್ನು ಬಿಸಾಡಿ ತಾನೂ ಬೆಟ್ಟದಿಂದ ಬೀಳಲು ಉದ್ಯುಕ್ತಳಾದಾಗ ಮುತ್ತುರಾಯ ಬಂದು ಹಿಡಿದುಕೊಳ್ಳುತ್ತಾನೆ.

ಬಂದಂಥ ಅಣ್ಣ ಮುತ್ತುರಾಯನಿಗೆ ಹೊಲರಾವಳನಿಗೂ ಘನಘೋರ ಯುದ್ಧ ವಾಗುತ್ತದೆ. ಹೊಲರಾವಳ ಸಂಹಾರವಾಗುತ್ತಾನೆ. ಭಯಂಕರ ಯುದ್ಧ ಮತ್ತು ಮಕ್ಕಳನ್ನು ಕಳದುಕೊಂಡ ದುಃಖದಿಂದ ಬಾಣಂತಿ ಮೂರ್ಛೆ ಹೋಗುತ್ತಾಳೆ. ಎರಡು

ಬೆಟ್ಟಗಳ ಮಧ್ಯದಲ್ಲಿ ದೋಣಿಯೋಪಾದಿಯ ಗುಡಿಯೊಂದನ್ನು ತೆಗೆದು ನೀರು ತಂದು ಚಿಮುಕಿಸಿ ತಂಗಿಯಾದ ಬಾಣಂತಿ (ಭಾಗೀರತಿ)ಗೆ ಸಾಂತ್ವನ ಹೇಳುತ್ತಾನೆ.

ಹೆದರ ಬೇಡ ತಂಗಿ ನಾನು ಸದಾ ನಿನ್ನ ಬಲಭಾಗದಲ್ಲಿ ಕಾವಲಿಗೆ ನಿಲ್ಲುತ್ತೇನೆ.' ಈ ಧೂಪದ ಮರದಡಿಯೇ ನಿನ್ನ ಆವಾಸಸ್ಥಾನ. ನೀನಿಲ್ಲಿ ಕುಳಿತುಕೊಂಡದ್ದರಿಂದ ಪಕ್ಕದೂರಿಗೆ ಕೂತಗೊಂಡನ ಹಳ್ಳಿ ಎಂಬ ಹೆಸರಾಗುತ್ತದೆ. ನೀನು ಆ ಹಳ್ಳಿಯ ಗ್ರಾಮ ದೇವತೆಯಾಗುವೆ. ನಿನ್ನ ಎದುರಿಗೆ ಈ ಮಡಿವಾಳಗಿತ್ತಿ ಮತ್ತು ಸೂಲಗಿತ್ತಿಯರು ನೆಲೆ ನಿಂತು ಪೂಜಾರ್ಪರಾಗುತ್ತಾರೆ. ಇಲ್ಲಿ ಕಾಣುವ ಮಲೆನಾಡಿನಂಥ ಕಾಡು ಜನಸಂಚಾರವಾಗಿ ಇಲ್ಲವಾಗುತ್ತದೆ. ದೋಣಿಯಂತೆ ನಿನಗಾಗಿ ತೆಗೆದಿರುವ ಗುಂಡಿ (ಸದಾ ನೀರಿರುವ ಬಾವಿಯಾಕಾರದ ಹೊಂಡ) ಯಲ್ಲಿ ಬತ್ತದ ಒರತೆಯಿಂದ ನಿನ್ನ ಮಜ್ಜನ, ಪೂಜಾದಿ ಗಳಿಗಾಗುತ್ತವೆ. ನೀನು ಬಲಕ್ಕೆಸೆದ ಮಗನೇ ಬಸವನಕೆರೆಯ ಬಸಪ್ಪ, ಎಡಕ್ಕೆಸೆದ ಮಗನೇ ವಸತಿಬಸವಿ, ಇವರ ವರಬಲದಿಂದ ಬಸವನ ಇರುಳಲ್ಲಿ ಜನಿಸಿದ ಇರುಳಿಗ ಪೂಜಾರಿಗೆ ನೀನು ಸಾಕ್ಷಾತ್ಕಾರವಾಗಿ ಸುತ್ತೇಳು ಹಳ್ಳಿಗಳಲ್ಲಿ ನೆಲೆನಿಂತು ಇರುಳಿಗ ಪೂಜಾರಿಗಳಿಂದಲೇ ನಿನ್ನ ಪೂಜೆ ಸಾಂಗೋಪಾಂಗವಾಗಿ ನೆರವೇರಲಿ. ನಾನು ನೆಲೆಸುವ ಮೇಲಿನ ದುರ್ಗಕ್ಕೆ ಹನುಮಂತರಾಯನದುರ್ಗ ಎಂದು ಹೆಸರಾಗಲಿ, ಇಲ್ಲಿಯವರೆಗೆ ಇದ್ದ ನಿನ್ನ ಭಾಗೀರತಿ ಎಂಬ ಹೆಸರು ಬಾಣಂತಿಮಾರಮ್ಮ ಎಂದು ಶಾಶ್ವತವಾಗಲಿ. ನೀನು ಪಾದಮಡಗಿ ತಳವೂರಿದ ಸರ್ಪನ ಕಲ್ಲಿಗೆ ಕಂಚಿನಕಲ್ಲು ಎಂದು ಹೆಸರಾಗಿ ಜಗತ್ತಿಗೇ ಹೆಸರು ವಾಸಿಯಾಗುತ್ತದೆ. ಇದೇ ಬೆಟ್ಟದ ತಪ್ಪಲಿನಲ್ಲಿ ಇಬ್ಬರು ಮುನಿಗಳು ಶಾಪಗ್ರಸ್ತರಾಗಿ, ಅವರಿಗೆ ಶಾಪ ನೀಡಿದ ಗುರುಗಳು ನಿಮ್ಮ ಶಾಪವಿಮೋಚನೆಗಾಗಿ ತಾಯಿ ಪಾರ್ವತಿಯೇ ದೊಡ್ಡಮ್ಮ ಚಿಕ್ಕಮ್ಮ ತಾಯಿಯರಾಗಿ, ಭಾಗೀರತಿ ಮದ್ದೂರಮ್ಮ ರಾಗಿ ಬಂದು ಶಾಪ ವಿಮೋಚನೆ ಮಾಡುತ್ತಾರೆ -ಎಂದು ತಿಳಿಸಿದ್ದರಂತೆ , ಈಗಲೇ ಹೋಗಿ ಅವರನ್ನು ಶಾಪ ವಿಮುಕ್ತರನ್ನಾಗಿ ಮಾಡಿರಿ, ನಿಮಗೆ ಕಷ್ಟ ಬಂದಾಗ ನನ್ನನ್ನು ನೆನೆಸಿಕೊಳ್ಳಿ ಆಗ ಬರುತ್ತೇನೆ' ಎಂದು ಮಾಯವಾದ .

ಇತ್ತ ಅಕ್ಕ- ತಂಗಿಯರು ಬೆಟ್ಟದ ತಪ್ಪಲಿನಲ್ಲಿ ಸುತ್ತಾಡಿದಾಗ, ರಸಸಿದ್ಧರು, ಗವಿಸಿದ್ಧರು, ತಪಸ್ಸಿನಲ್ಲಿ ಕುಳಿತಿದ್ದರು. ಅವರಲ್ಲಿ ಶಾಪಗ್ರಸ್ಥರಾದ ಮುನಿಗಳಿಬ್ಬರ ಶರೀರದ ಭಾಗವೆಲ್ಲ ಕಲ್ಲಾಗಿ, ತಲೆ ಮಾತ್ರ ಮನುಷ್ಯರದಾಗಿತ್ತು. ಮುನಿಗಳಿಬ್ಬರೂ ತಾಯಿ ಪಾದಕ್ಕೆ ನಮಸ್ಕರಿಸಿದರು. ಅವರಲ್ಲಿ ಒಬ್ಬರಿಗೆ 'ನೀನು ಹೆಜ್ಜೇನು ಬೆಟ್ಟದ

ಮುನಿಯಾಗಿ ಹೋಗು' ಎಂತಲೂ ಮತ್ತೊಬ್ಬರನ್ನು 'ಹೊನ್ನಗಾನ ಕಲ್ಲುಬೆಟ್ಟದ ಮುನಿಯಾಗು 'ಎಂದು ಅಪ್ಪಣೆಕೊಟ್ಟಳು. ಅದರಂತೆ ಅವರಿಬ್ಬರೂ ನಡೆದರು.

ಎಲ್ಲಾ ಋಷಿ ಮುನಿಗಳಿಗೆ ದೀಕ್ಷೆಕೊಟ್ಟು, ಸೂಲಗಿತ್ತಿಯನ್ನು ಧೂಪದ ಮರ, ಹೊನ್ನೆಮರದ ಮಧ್ಯದಲ್ಲಿರಿಸಿ, ಪಕ್ಕದಲ್ಲಿ ಮಡಿವಾಳಮ್ಮನನ್ನು ಇರಿಸಿದಳು. ತಾಯಿ ಬಾಣಂತಮ್ಮ ಮಾತ್ರ ಭೂಮಿಯನ್ನು ಭಾಗ ಮಾಡಿ ಭೂದೇವಿಯ ಗರ್ಭದಲ್ಲಿ ಸೇರಿಕೊಂಡಳು.

ಮುಂದೆ ನಡೆದಿವೆ ಎಂಬ ಘಟನೆಗಳನ್ನು ಸುಮಾರು ನೂರೈದು ವರ್ಷದ ಇರುಳಿಗ ಮುದುಕಿ ಕೆಂಪಮ್ಮನ ಬಾಯಿಂದಲೇ ಕೇಳಿ ತಿಳಿಯೋಣ. ಇಷ್ಟು ವಯಸ್ಸಾದರೂ ಕೆಂಪಮ್ಮ ತನಗೆ ಬೇಕಾದ ಅಡಿಗೆಯನ್ನು ತಾನೇ ಸಿದ್ಧಪಡಿಸಿಕೊಳ್ಳುತ್ತಾಳೆ. ಅದಕ್ಕಿಂತ ಹೆಚ್ಚಾಗಿ ಕುರಿ ಮತ್ತು ದನಗಳನ್ನು ಮೇಯಿಸಿಕೊಂಡು ಅಡಿಗೆಗೆ ಬೇಕಾದ ಸೌದೆಗಳನ್ನೂ ತಾನೇ ತರುತ್ತಾಳೆ. ಇಂದಿಗೂ ಈಕೆಯ ವಂಶಸ್ಥರೇ ಎಲ್ಲಾ ಗ್ರಾಮಗಳ ಬಾಣಂತಿಮಾರಮ್ಮ ದೇವಸ್ಥಾನದ ಪೂಜೆ ಮಾಡುತ್ತಿರುವವರು. ಆಕೆಯ ಬಾಯಿಂದಲೇ ಬಾಣಂತಿ ಮಾರಮ್ಮ ಅವರ ಹಿರಿಯರಿಗೆ ಸಿಕ್ಕ ವಿವರಗಳನ್ನು ತಿಳಿಯೋಣ.

ನಮ್ ತಾತ್ನೋರ್ ತಾತ ಶಿವನಯ್ಯ ಅಂತ ನನುಗ್ ನಾಲುಕ್ನೆ ತಲೆ, ಒಂದುಡ್ಗುನ್ ಕರ್ರೊಂಡು ಗೆಡ್ಡೆ ಗೆಣಸು ಕೀಳುಕ್ಕೆ ಅಂತ ಕಾಡ್ಗೋಗ್ದುä. ಎಲ್ಲೆಲ್ಲೋ ತಿರುಗುದ್ರು, ಬೆಟ್ಟಗುಡ್ಡ ಎಲ್ಲ ಸುತ್ತುದ್ರು ಎಲ್ಲೂ ಏನೂ ಸಿಗ್ಲಿಲ್ಲ. ಕೊನೆಗೆ ಈಗ ನೆಲ್ಗೊಂಡವ್ನಲ್ಲ ಅಲ್ಲಿ ಇತ್ತಾಗ್ (ಬಾಣಂತಿ ಮಾರಮ್ಮನ ಈಗಿರುವ ದೇವಸ್ಥಾನದ ಪೂರ್ವಕ್ಕೆ ಕಾಲುಚಾಚಿ) ಕಾಲನೀಡ್ಕುಬಿಟ್ಟು ಅತ್ತಾಗಾ ತಲೆ ಹಾಕ್ಕೊಂಡು, ಮಲ್ಗಿದ್ರು. ಹುಡ್ಗ ಇತ್ತಲ್ಲ ಅದು ನೀರ್ ಕುಡಿತುದೆ, ಮಣಿಕಿತ್ಕೊಂಡ್ ತಿಂತುದೆ ಈ ತರ ಮಾಡ್ತಾ ಅದೆ.

ಕಲ್ಗೊರಿಕೊಂಡು ಕುಂತಿತ್ತಲ್ಲ ಈ ಮಗ ಗೆಣ್ಸುನ್ ಬುಡ ಹಬ್ಬಿದ್ದುದ್ದು ಮಗಿನ್ ತಲೆಗೆ ಪಟ ಪಟ ಅಂತ ಹೊಡಿತಾ ಇತ್ತು ಈ ಶಿವ್ನಯ್ಯುನ್ಗೆ ಎಲ್ಲಿಲ್ಲುದ್ ಸಿದ್ದೆ ಬಂದ್ ಬುಡ್ತು. ಈ ಬೇರು ಮಗಿನ್ ತಲೆಗೊಡಿತಿತ್ತಲ್ಲ ಅದ್ನ ಪುಸುಕ್ಕೆ ಇಡ್ಕೊಬುಡ್ತು ಬೇರಿಡ್ಕೊಂಡುದ್ದೆ, 'ಅಪ್ಪಾ ಅಪ್ಪಾ ಏಳಪ್ಪಾ' - ಅಂತು.

'ಏನಪ್ಪಾ ಅದು 'ಅಂತ ಅಪ್ಪ ಎದ್ದ. 'ನೋಡಪ್ಪ ಈ ಗೆಣುಸ್ನಂಬು ಯಂಗೆ ನನ್ ತಲೆಗೆ ಪಟ್ಟ, ಪಟ್ಟ ಅಂತ ಹೊಡಿತುದೆ' ಅಂದ ಆ ಹುಡ್ಗ. ಇಷ್ಟ್ ಗಾತ್ರುಕ್ಕೆ ಆ ಗೆಣುಸ್ನಂಬು

ನುಲ್ಕೊಂಡೋಗಿತ್ತು ಎಲ್ಲೆಲ್ಲೋ ಹುಡಿಕೊಬಂದಿದ್ದ ಎಲ್ಲು ಗೆಣುಸ್ನಂಬು ಕಂಡಿರ್ಲಿಲ್ಲ. ಇಲ್ ಕಾಣುಸ್ತಲ್ಲ ಇವುನ್ಗೆ ಕುಸಿ ಆಗೋಯ್ತು. ಒಂದಾಳುದ್ದ ಇರೋದಂತೆ ಅರೆ ಕೋಲು, ಈ ಆರೆ ಕೋಲ್ನ ಚನ್ನಾಗ್ ಮಸ್ತಿ (ಮಸೆದು) ಮಡಿಕೊಂಡಿದ್ದ. ಎತ್ತಿ ಆ ಗೆಣ್ಸುನ್ ಬುಡುಕ್ಕೆ ಆರೆಕೋಲ್ ಬುಟ್ನಂತೆ ಚಿಲ್ಲುನ್ ಕಡುದ್ಬುಡ್ತಂತೆ ರಕ್ತ.

ಈ ಗೆಣ್ಸುನ್ ಗುಳಿಲಿ ಅಮ್ಮ ಸಿಕ್ಕುದ್ನಂತೆ. ಇವುನ್ಗೆ ಅಲೀಸಾ (ಆಯಾಸ) ಆಗೋಯ್ತು ಸುಮ್ನೆ ಕುಣ್ಸುಕ್ ಸುರು ಮಾಡ್ಬುಟ್ಟ. ತಿಗುಳ್ರಳ್ಳಿ, ತಾಮಸಂದ್ರ, ಹರಳಾಳುಸಂದ್ರದೋರೆಲ್ಲ ದನಿನ್ ಗುಡ್ಡಾಕಿದ್ರಂತೆ. ಈ ದನಿನ್ನೆಕ್ಕು ದನ ಮೇಸ್ತಿದ್ರಲ್ಲ ಆ ಹುಡುಗ್ರು ಇವ್ನು ಕುಣಿಯೋದ್ ನೋಡ್ ಬುಟ್ಟು ಇವುನ್ಗೆ ಹುಚ್ಚೋ ಬೆರಾಂತೋ (ಬ್ರಾಂತಿಯೋ) ಇವುನ್ಗೇನ್ ಬಂದಿರೋದು ಕಾಡುಗ್ ಬಂದೋನ್ಗೆ ಈ ತರ ಆಗದಲ್ಲ, ಇವುನ್ಗೆ ಹುಚ್ ಬಂದ್ಬುಟ್ಟದೆ, ಏನೋ ಮಲ್ಲಾಗ್ರು ಬಂದ್ ಬುಟ್ಟದೆ, ಹೋಗೋ ನಿಮ್ಮಮ್ಮುನ್ನ ಕೆಯ್ಯ - ಅಂದ್ಬುಟ್ಟುದ್ದೆ ಬೈತಿದ್ರಂತೆ.

'ಅಪ್ಪಾ ನನ್ಗೆ ಹುಚ್ಚೂ ಬರ್ಲಿಲ್ಲ, ಬೆರಾಂತೂ ಬರ್ಲಿಲ್ಲ, ಹೋಗಿ ಊರ್ ಗೌಡ್ನ, ಶಾನ್ ಭೋಗ್ರುನ, ಊರ್ ಪಟೇಲ್ನ ಕರ್ರೊಂಡು ಜಾಗರ್ತೆ ಬರೋಗಿ '- ಅಂದ.

'ಹೋಗಯ್ಯಯ್ಯೋವ್ , ಹುಚ್ ಬಂದು ಕುಣಿತಿದ್ದೀಯೇ ಶಾನ ಭೋಗುನ್ನ, ಪಟೇಲ್ನ, ಊರ್ಗೌಡನ್ನ ಎಲ್ಲಿಗಯ್ಯ ಕರ್ಕೊಂಬರೋದು '- ಅಂದ್ರಂತೆ.

ಆಗ ಯಾರೋ ಬುದ್ದಿವಂತ್ರಿದ್ದೋರು 'ಹೋಗ್ರುಲಾ ಹೋಗಿ ಕರ್ಕೊ ಬರೋಗ್ರುಲಾ ಏನೋ ಈ ವಯ್ಯುನ್ಗೆ ಇಂಗಾಗದೆ' - ಅಂದ್ರಂತೆ.

ಆಗ ಕರ್ಕೊ ಬಂದ್ರಂತೆ, ಬಂದೋರು ಕೇಳುದ್ರು ಅಪ್ಪಾ ದನ -ಕರ ಎಲ್ಲ ಎಲ್ಲೋ ಮಾಯ ಆದಂಗಾಗೋಗವೆ, ನಿನ್ ನೋಡುದ್ರೆ ಇಂಗ್ ಕುಣಿತಾಯಿದ್ದೀ, ನಾವೇನೂ ಕಾಣೋ ನಮುಗ್ ಮಾಯವತಾರಾನೆ ಕಾಣೊದಿಲ್ಲಾ - ಅಂತ ಕೈಮುಕ್ಕೊಂಡು ನಿಂತ್ಕೊಂಡ್ರಂತೆ.

'ನೋಡಿ ನಾನು ಬಾಣುತ್ ಮಾರಮ್ಮ ನಿಮ್ ದನ್ ಗೋಳ್ನ ನಾನೆ ಮಾಯ ಮಾಡಿದ್ದೀನಿ, ಒಂದೇ ರಾತ್ರಿಲಿ, ತೊಲೆ ಮುಂಡ್ಗೆಯಲ್ಲ ಕಡ್ದು ಗುಡಿಕಟ್ಟಿ, ಕೊಂಡ ಬಂಡಿ ಎಲ್ಲ ಆಗ್ಬೇಕು' - ಅಂತ ಕೇಳುದ್ನಂತೆ, ಅಂಗೇನೆ ಒಂದ್ ರಾತುರ್ಗೆನೆ ಎಲ್ಲ ಮಾಡುದ್ರು. ಆಚರೆ ಈಚರೆಯಲ್ಲ ಕಲ್ಲೊಲ್ತ್ ಬುಟ್ಟು ಗುಡಿ ಮಾಡ್ ಬುಟ್ರು. ಆಗ ತಾಯಿ ರೂಪಸ್ತೆ ಯಾಗಿ ಎದ್ನಂತೆ. ಎದ್ದುದ್ದೇ ಈ ಗೆಣುಸ್ ಕೀಳ್ತಿದ್ ಪೂಜಾರಪ್ಪುನ್ಗೆ ಕಂಡ್ನಂತೆ.

'ನಾನು ಯಾರೂ ಅಲ್ಲ, ನಾನೆ ಬಾಣ್ತಮ್ಮ' - ಅಂತ ಅಂದ್ಲಂತೆ. ಅಲ್ಲಿಗ್ ಬಾಮ್ತಿ ಅನ್ನೋ ಹೆಸ್ರು ತಕೊಂಡುದ್ದು.

ಹೆಸರೇ ಸೂಚಿಸುವಂತೆ ಬಾಣಂತಿ ಹೆಂಗಸು ರೌದ್ರರೂಪ ತಾಳಿ ಮಾರಮ್ಮನಾದಳು ಎಂಬುದು ವೇದ್ಯವಾಗುತ್ತದೆ. ಕನಕಪುರದಿಂದ ರಾಮನಗರಕ್ಕೆ ಬರುವ ಮಾರ್ಗದಲ್ಲಿ ಕೇವಲ ನಾಲ್ಕು ಕಿ.ಮೀ. ದೂರದಲ್ಲಿ ಹೊಸಕೋಟೆ ಅಥವಾ ಕೋಣನರೆಡ್ಡು ಎಂಬ ಒಂದು ಹಳ್ಳಿ ಪಟ್ಟಣದಿಂದ ಬಲು ಹತ್ತಿರವಿದ್ದರೂ ನಾಗರೀಕತೆಯ ಪ್ರಭಾವ ಆ ಹಳ್ಳಿಯ ಗಿರಿಜನರ ಮೇಲೆ ಆಗಿರುವುದು ಒಂದು ವಿಪರ್ಯಾಸ. ಸುಮಾರು ಐವತ್ತು ಮೊಟ್ಟೇಗರಿಯ ಮಹಲುಗಳ ಒಡೆಯರು ಇರುಳಿಗರು. ಅಲ್ಲಿ ದಕ್ಷಿಣಕ್ಕೆ ದನಕರುಗಳು ಹೋಗುವ ದಾರಿ ಇದೆ. ಎತ್ತರವಾದ ಬೆಟ್ಟಕ್ಕೆ ದೇವರ ಬೆಟ್ಟವೆಂದು ಕರೆಯುತ್ತಾರೆ. ಆ ದೇವರ ಬೆಟ್ಟದ ಮಧ್ಯಭಾಗದಲ್ಲಿ ಕೂತ ಕೊಂಡನಹಳ್ಳಿಗೆ ನಡೆದು ಹೋಗಬಹುದಾದ ಕೂಡುದಾರಿಯಿದೆ. ಆ ದಾರಿಯಲ್ಲಿ ನಡೆದು ಹೋಗುವಾಗ ನಮಗಾದ ಅನುಭವ ಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ಕೂತಗೊಂಡನ ಹಳ್ಳಿಗೆ ಬೆಟ್ಟದ ಮಧ್ಯಭಾಗದಿಂದ ನಡೆದು ಹೋದರೆ ಐದಾರು ಕಿಲೋಮೀಟರ್‌ಗಳಾಗಬಹುದು. ಆದರೆ ಬಸ್ಸಿನಲ್ಲಿ ಹೋದರೆ ಇಪ್ಪತ್ತು ಕಿಲೋಮೀಟರ್ ಗಳ ಅಂತರವಿದೆ. ದೇವರ ಬೆಟ್ಟದ ಮಧ್ಯಭಾಗದಲ್ಲಿ ಹಾಯ್ದು ಹೋಗುವಾಗ ಬಾವುಟ ಕಾಣುತ್ತದೆ.

ಗಾರೇಸೋಣೆ - ಮೇಯುತ್ತಿದ್ದ ಹಂದಿಯೊಂದು ನೀರು ಕುಡಿಯಲು ಈ ಬಾಣಂತಿ ಮಾರಮ್ಮನ ಬೆಟ್ಟದ ಮೇಲಿರುವ ಸೋಣೆಗೆ ಹೋಗುತ್ತಿತ್ತು. ನೀರು ಕುಡಿಯುವಾಗ ದವಡೆಯ ಸಂದಿನಲ್ಲಿ ಸಿಕ್ಕಿಕೊಂಡಿದ್ದ ಬತ್ತದ ಕಾಳೊಂದು ಕೊಳಕ್ಕೆ ಬಿದ್ದು ಅಲ್ಲೇ ಹುಟ್ಟಿ ಬೆಳೆದು ಬತ್ತದ ಗೊನೆಯೊಂದನ್ನು ಬಿಟ್ಟಿತ್ತು. ಪುಣ್ಯವಂತರಿಗೆ ಮಾತ್ರ ಅದು ಗೋಚರವಾಗುತ್ತದೆಂಬ ನಂಬಿಕೆ, ಕಂಡಾಗ ಕಿತ್ತುಕೊಳ್ಳಲು ಹೋದರೆ ಉದುರಿ ಹೋಗುತ್ತದೆಯಂತೆ - ಎಂದು ನಮ್ಮ ಜೊತೆಯಲ್ಲಿದ್ದ ಇರುಳಿಗ ಕೂತಗಂಡನಹಳ್ಳಿಯ ವೀರಭದ್ರಯ್ಯ ಹೇಳುತ್ತಾರೆ.

ಹೆಬ್ಬಂಡೆಗಳ ಮಧ್ಯದ ಕಾಲುದಾರಿಯಲ್ಲಿ ನಡೆಯುವುದೇ ಒಂದು ರೋಮಾಂಚಕಾರಿ ಅನುಭವ, ಬಿದಿರು, ಹೆಬ್ಬಿದಿರು, ಮುಳ್ಳೀಮರ, ಬಾಡುಬಕ್ಕ, ಜಿಡ್ಡಿ, ಕಕ್ಕೆ, ಜೆಪ್ಪಾಲೆ, ಆಲೆ, ಮೊಂಡುಸೀಗೆಸೊಪ್ಪಿನ ಮೆಳೆ, ಸೀಗೇಸೊಪ್ಪಿನ ಮೆಳೆ, ರೋಜವಾರದ

ಗಿಡ, ಬಿಳಿದಾಳೆಮರ, ಕೆಂದಾಳೆ, ಸುಂಕತ್ತಿಮರ, ಕಾರೇಗಿಡ, ಬಿಳಿಸೂಲೀ ಮಳೆ, ಕೊಗ್ಗೆಗಿಡ, ಬೆಟ್ಟರಾಗೀ ಹುಲ್ಲು, ಗರಿಕೆ, ದರ್ಬೆ, ತಾರೇಮರಗಳು, ನಾಲೇಹುಲ್ಲು ಹೀಗೆ ಅನೇಕ ಜಾತಿಯ ಸಸ್ಯ - ಸಾಮ್ರಾಜ್ಯದಲ್ಲಿ ಒಬ್ಬರು ಮಾತ್ರ ನಡೆಯಲು ಸಾಧ್ಯವಾಗುವಂಥ ಕಿರಿದಾದ ದಾರಿ, ಅದೊಂದು ರುದ್ರರಮಣೀಯ ಅನುಭವ, ಕರಡಿ, ಮಿಗ, ಮುಳ್ಳುಹಂದಿ, ಮೊಲ , ಕಾಡ್ಬೆಕ್ಕು ಮುಂತಾದ ಪ್ರಾಣಿಸಂಕುಲ ಕಾಡುಕೋಳಿ,ನೀರುಕೋಳಿ, ಪಿಟ್ಟೆ ಕೋಳಿ, ದೊಡ್ಡ ಕೋಳಿ, ಸಾರಕ್ಕಿ, ಮರಕುಟಿಕ, ಕಾಡಕ್ಕಿ , ಗೌಜಲಕ್ಕಿ, ಗುಬ್ಬಚ್ಚಿ, ಪಾರಿವಾಗಿಳಿ, ಗಿಡುಗ, ಮುಂತಾದ ಪಕ್ಷಿ ಪರಿವಾರಗಳ ಕಿಲ - ಕಿಲ ನಿನಾದದ ಆಹ್ಲಾದ ದೊಡನೆ ಕಡಿದಾದ ಆ ಗಿರಿಶೃಂಗವನ್ನು ಮೂರ್‍ನಾಲ್ಕು ಕಿ.ಮೀ. ನಷ್ಟು ಹತ್ತಿ ಹೋದಾಗ ...

ಆಂಜನೇಯ ಸ್ವಾಮಿ ದೇವಸ್ಥಾನ ಹೊಲರಾವಳನು ಬಾಣಂತಮ್ಮನನ್ನು ಹಿಡಿದುಕೊಳ್ಳಲು ಹೋದಾಗ, ನಿನ್ನ ಬಲಭಾಗದಲ್ಲಿ ನಾನಿದ್ದೇನೆ ಹೆದರಬೇಡ ಎಂದು ಧೈರ್ಯ ಹೇಳಿದ ಆಂಜನೇಯ ಸ್ವಾಮಿ ಅಲ್ಲೇ ನೆಲೆ ನಿಂತ ಎಂಬ ಪ್ರತೀತಿ. ಈಗಲೂ ಆ ಆಂಜನೇಯ ಸ್ವಾಮಿಯ ವೀರಭದ್ರಾಸನದ ಕಲ್ಲಿನ ವಿಗ್ರಹ ಬೆಟ್ಟದ ಮೇಲಿದೆ ಬಂದ ಭಕ್ತಾದಿಗಳು ಪೂಜೆ ಮಾಡಿಕೊಂಡು ಹೋಗುತ್ತಿದ್ದಾರೆ.

ಆಂಜನೇಯ ಸ್ವಾಮಿಯ ದರ್ಶನವಾದಮೇಲೆ ಬೆಟ್ಟವನ್ನು ಹತ್ತುವ ಕೆಲಸ ನಿಲ್ಲುತ್ತದೆ. ಸುಮಾರು ಅರ್ಧ ಕಿ.ಮೀ. ನಷ್ಟು ಬೆಟ್ಟ ಇಳಿದರೆ, ದೈತ್ಯಾಕಾರದ ಶನಿದೇವರ ಆವಾಸಸ್ಥಾನ ತಾರೇಮರ ಸಿಗುತ್ತದೆ. ಅಲ್ಲಿ ಬೀಸುವ ತಂಗಾಳಿಗೆ ಮೈಯ್ಯೊಡ್ಡಿದಾಗ ತಣ್ಣನೆಯ ತಂಪುಗಾಳಿ ದಣಿದು ಬಂದ ದಾರಿಯ ದೂರವನ್ನು ಮರೆಸುತ್ತದೆ.

ತಾರೇಮರ - ಇರುಳಿಗೆ ವೀರಭದ್ರಯ್ಯ ಹೇಳುವಂತೆ, ಕೆಲ ವರ್ಷಗಳ ಹಿಂದೆ ಯಾರೋ ಒಬ್ಬ, ದೈತ್ಯಾಕಾರದ ತಾರೇಮರದ ರೆಂಬೆಗಳನ್ನು ಕತ್ತರಿಸಲು ಪ್ರಾರಂಭಿಸಿದ ನಂತೆ, ಕತ್ತರಿಸುವಾಗ ಅದರ ರೆಂಬೆಗಳಿಂದ ಧಾರಾಕಾರವಾಗಿ ರಕ್ತ ಸುರಿಯಲಾರಂಭಿಸಿತು. (ಮರ ಕಡಿಯುತ್ತಿದ್ದ ಆ ಮನುಷ್ಯ ಇರುಳಿಗರವನೇ, ಕಾಡಿನಲ್ಲಿಯೇ ಇದ್ದುಕೊಂಡು ಮರಗಳನ್ನು ಕಡಿದು ಸುಟ್ಟು ಇದ್ದಿಲು ಮಾಡಿ ಮಾರಾಟ ಮಾಡುತ್ತಿದ್ದವನಂತೆ. ಕಾಡಿನ ದೊಡ್ಡ ದೊಡ್ಡ ಮರಗಳು ಮುಗಿದಾಗ ಈ ತಾರೇಮರ ಕಣ್ಣಿಗೆ ಬಿದ್ದು ಅದನ್ನೇ ಕತ್ತರಿಸುತ್ತಿದ್ದನಂತೆ) ಮರ ಕಡಿಯುತ್ತಿದ್ದ ಆತ ತೀವ್ರ ಅಸ್ವಸ್ಥನಾದ. ದನಕಾಯಲು ಬಂದ ಕೂತಗೊಂಡನಹಳ್ಳಿಯ ಜನ ಈತನನ್ನು ಕನಕಪುರದ ಆಸ್ಪತ್ರೆಗೆ ತೆಗೆದುಕೊಂಡು

ಹೋಗಿ ತೋರಿಸಲು ಗುಣವಾಗದೆ ಕೊನೆಯುಸಿರೆಳೆದನಂತೆ, ಸಾಯುವ ಮುನ್ನ ನನ್ ಕತೆ ಇಂಗಿಂಗಾಯ್ತು ಆ ತಾರೇಮರದಲ್ಲಿ ಮಹಾತ್ಮ ಅವ್ಳೆ ಪೂಜೆ ಮಾಡ್ರಿ - ಎಂದು ಹೇಳಿದ್ದನಂತೆ. ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚಿ ತಿಂಗಳಿನಲ್ಲಿ ಪೂಜೆ, ಅನ್ನ ಸಂತರ್ಪಣೆಯನ್ನು ಈಗಲೂ ನಡೆಸಿಕೊಂಡು ಬರುತ್ತಾರೆ.

ಮುತ್ತೈದೆ ಬಾಣಂತಮ್ಮ :- ಬಾಣಂತಮ್ಮ ಇರುಳಿಗನೊಬ್ಬನ ಕನಸಿಗೆ ಬಂದು 'ನನ್ನ ಗಂಡ ಪಂಚಲಿಂಗೇಶ್ವರ ಸತ್ತಿಲ್ಲ ಬದುಕಿದ್ದಾರೆ, ನಾನು ಮುತ್ತೈದೆ ನನಗೆ ಹರಿಶಿಣ ಕುಂಕುಮವಿಟ್ಟು ಪೂಜೆ ಮಾಡಿ, ನನ್ನ ಗಂಡ ತಪಸ್ಸಿನಲ್ಲಿರುವಾಗ ನಾನು ನನ್ನ ಮಗುವಿಗೆ ಜನ್ಮ ನೀಡಿದೆ, ತಪಸ್ಸಿನಲ್ಲಿದ್ದ ಗಂಡನ ಮಜ್ಜನಕ್ಕೆ ಎಣ್ಣೆ ಗಡಿಗೆಯನ್ನು ತೆಗೆದುಕೊಂಡು ಹೋಗುವಾಗ ಬಂದ ಹೊಲರಾವಳನ ಹಾವಳಿಯನ್ನು ತಡೆಯಲಾಗದೆ ಆ ಗಡಿಗೆಯನ್ನು ಕುಕ್ಕಿ ಬೆಟ್ಟದಿಂದ ಬಿದ್ದು ಇಲ್ಲಿ ನೆಲೆಗೊಂಡಿದ್ದೇನೆ' ಎಂದು ಹೇಳಿದಳಂತೆ. ಅಲ್ಲಿವರೆಗೆ ಬಾಣಂತಿ ಮಾರಮ್ಮನಿಗೆ ಹರಿಶಿನ ಕುಂಕುಮ ಹುಚ್ಚುತ್ತಿರಲಿಲ್ಲವಂತೆ, ಹೊಲರಾವಳನಿಂದ ಈಕೆಯ ಗಂಡ ಸತ್ತು ಹೋಗಿದ್ದಾನೆ. ಈಕೆ ವಿಧವೆ ಎಂದು ತಿಳಿದು, ಬರೀ ವಿಭೂತಿಯನ್ನು ಹಚ್ಚಿ ಪೂಜೆ ಮಾಡುತ್ತಿದ್ದರಂತೆ. ಈಗ ಮುತ್ತೈದೆಯನ್ನು ಪೂಜಿಸುವಂತೆ ಹರಿಷಿನ ಕುಂಕುಮ ಹಚ್ಚಿ ಪೂಜೆ ನಡೆಸುತ್ತಿದ್ದಾರೆ.

ಮೇಲ್ಜಾತಿಯವರ ಪ್ರಯತ್ನ : - ಇರುಳಿಗರು ಪೂಜಾರಿಗಳಾಗಿರುವುದನ್ನು ಸಹಸಲಾರದ ಕೆಲವು ಮೇಲುಜಾತಿಯ ಜನರು ಪ್ರಯತ್ನಪೂರ್ವಕವಾಗಿ ದೇವರನ್ನು ತಮ್ಮ ಮೇಲೆ ಆವಾಹನೆಗೆ ಕರೆದಿದ್ದು, ಯಾರ ಮೈಮೇಲೂ ತಾಯಿ ಬರದಿರುವುದರಿಂದ, ಆ ಪ್ರಯತ್ನವನ್ನು ಕೈಬಿಟ್ಟರು ಎಂದ ಕೂತಗೊಂಡನಹಳ್ಳಿಯ ಇರುಳಿಗರು ಹೇಳುತ್ತಾರೆ. ಒಮ್ಮೆ ಬೇರೆ ಜಾತಿಯವರು ಬಂದು ನೀವು ಬರುವುದು ಬೇಡ ದೇವಸ್ಥಾನದ ಕೀಲಿಯನ್ನು ಕೊಡಿ ನಾವೇ ಪೂಜೆ ಮಾಡಿಕೊಳ್ಳುತ್ತೇವೆ ಎಂದರಂತೆ, ಮರುಮಾತಾಡದೆ ಕೀಲಿಕೈಯನ್ನು ಕೊಟ್ಟುಬಿಟ್ಟರಂತೆ . ಆದರೆ ಬಾಗಿಲು ತೆಗೆಯಲು ಹೋದಾಗ ಬಾಗಿಲಿಗಡ್ಡವಾಗಿ ಏಳು ತಲೆಯ ಸರ್ಪ ಮಲಗಿತ್ತಂತೆ. ಪರದೂಟಕ್ಕೆ ಸಿದ್ಧಪಡಿಸಿದ್ದ ಅಡಿಗೆಗೆ ಹುಳು ಬಿದ್ದುಬಿಟ್ಟಿತ್ತಂತೆ. ಮತ್ತೆ ಇರುಳಿಗರವನನ್ನೇ ಕರೆತಂದು ಬೀಗ ತೆಗೆಯಲು ಹೋದಾಗ ಬಾಗಿಲಿಗೆ ಅಡ್ಡಲಾಗಿದ್ದ ಏಳುತಲೆಯ ಸರ್ಪ ದೂರ ಹೋಯಿತ್ತಂತೆ. ತೀರ್ಥ ಹಾಕಿದಾಗ ಪರ ದೂಟಕ್ಕೆ ಮಾಡಿದ್ದ ಅಡಿಗೆ ಸರಿಹೋಯಿತಂತೆ.

ಸೊಪ್ಪಿನ ಗುಡಿಸಿಲಿಂದ ಕಲ್ಲುಗುಡಿಯಾಗಿ, ಹೆಂಚಿನ ಗುಡಿಯಾಗಿ ಸುತ್ತಮುತ್ತಲ

ಹಳ್ಳಿಯ ಭಕ್ತರ ಹರಕೆಗಳ ಫಲವಾಗಿ ಇಂದು ತಾರಸಿಯ ಗುಡಿಯಾಗಿದೆ. ಗಂಡು ಮಕ್ಕಳ ಫಲ ಬೇಡುವ ಅಚ್ಚಮುತ್ತೈದೆಯರು ಅಲ್ಲಿಗೆ ಬಂದು ತಮ್ಮ ಅಭೀಷ್ಟ ನೆರವೇರಿದ್ದೇ ಆದರೆ ಒಪ್ಪಿಕೊಂಡ ಹರಕೆಯಿಂದ ಬರುವ ಸಂಪನ್ಮೂಲದಿಂದ ದೇವಸ್ಥಾನವು ಸುಸ್ಥಿತಿಯಲ್ಲಿದೆ. ದೇವಸ್ಥಾನದಿಂದ ಮೂರು ಕಿಲೋಮೀಟರ್ ದೂರದಲ್ಲಿ ಕೂತಗೊಂಡನಹಳ್ಳಿಯಿದೆ. ಆ ಕೂತಗೊಂಡನಹಳ್ಳಿಯ ಇರುಳಿಗ ಶಿವನಯ್ಯ ಬಾಣಂತಿ ಮಾರಮ್ಮನ ಪೂಜಾರಿ.

ದೇವಸ್ಥಾನದ ಪೂರ್ವಭಾಗಕ್ಕೆ ಒಂದು ಬಾದಿಯಾಕಾರದ ಗುಂಡಿಯಿದೆ. ಅದರ ವ್ಯಾಸ ಸುಮಾರು ಐದು ಅಡಿಗಳಿರಬಹುದು ಆಳ ಸುಮಾರು ಆರು ಅಡಿಗಳಿರಬಹುದು. ಅಲ್ಲಿ ನಡೆಯುವ ಎಲ್ಲ ಕೆಲಸ ಪರ ಮುಂತಾದವುಗಳಿಗೆ ಬೇಕಾದ ನೀರು ಎಲ್ಲಾ ಕಾಲಗಳಲ್ಲಿಯೂ ಧಾರಾಳವಾಗಿ ದೊರೆಯುತ್ತವೆ. ಎಷ್ಟು ನೀರು ತೆಗೆದರೂ ಯಾವ ಕಾಲಕ್ಕೂ ನೀರು ಸುಂಡುವುದಿಲ್ಲ (ಬತ್ತುವುದಿಲ್ಲ) ವೆಂಬ ನಂಬಿಕೆ. ತಗ್ಗು ಪ್ರದೇಶ ಗಳಲ್ಲಿರುವುದರಿಂದ ಬೆಟ್ಟದಲ್ಲಿರುವ ನೀರು ಜೌಗುರೂಪದಲ್ಲಿ ಅಲ್ಲಿ ಶೇಖರಣೆಯಾ ಗುತ್ತಿದೆ ಎನಿಸುತ್ತದೆ.

ಬಲಭಾಗದಲ್ಲಿ ಮಡಿವಾಳಮ್ಮ, ಎಡಭಾಗದಲ್ಲಿ ಸೂಲಗಿತ್ತಿಯಮ್ಮ, ಇವರಿಬ್ಬರೂ ದೇವಿಗೆ ಹೆರಿಗೆ ಮಾಡಿಸಿದವರೆಂದು ಅಲ್ಲಿಯೇ ನೆಲೆಸಿಲ್ಲಿಸಿಕೊಂಡಿದ್ದಾಳೆಂದು ಹೇಳುತ್ತಾರೆ. ಈ ದೇವಸ್ಥಾನದ ಅರ್ಚಕರು ಮೂರುಜನ ಅಣ್ಣತಮ್ಮಂದಿರಿದ್ದು, ಎಲ್ಲರೂ ಒಂದೊಂದು ವರ್ಷ ಪೂಜೆಯ ಕಾರ್ಯವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಎಲ್ಲರ ಮೇಲೂ (ಈ ಮೂರು ಜನ) ದೇವರು ಬರುತ್ತದಂತೆ. ಗಂಡು ಮಕ್ಕಳ ಫಲ ನೀಡುವುದು, ದೆವ್ವ ಬಿಡಿಸುವುದು, ತಾಯಿತ ಮಾಡಿ ಕೊಡುವುದು ಮುಂತಾಗಿ ಭಕ್ತರನ್ನು ಆಕರ್ಷಿಸುತ್ತಿದೆ.

ದೆವ್ವ ಬಿಡಿಸುವುದು :- ಬಾಣಂತಿಮಾರಮ್ಮನ ದೇವಸ್ಥಾನದಲ್ಲಿ ಮಂಗಳವಾರ ಮತ್ತು ಶುಕ್ರವಾರ ಈ ದೇವಿಯು ಪೂಜಾರಿಯ ಮೇಲೆ ತಾಯಿ ಬರುತ್ತಾಳೆ. ಆಗ ಭಕ್ತಾದಿಗಳು ಭಯ ಭಕ್ತಿಯಿಂದ ಕುಳಿತು ತಮಗೊದಗಿದ ಕಷ್ಟ ಕಾರ್ಪಣ್ಯಗಳ ಪರಿಹಾರದ ಮಾರ್ಗವನ್ನು ಕೇಳಿಕೊಳ್ಳುತ್ತಾರೆ. ಹರಕೆ ಕಾಣಿಕೆ ಇತ್ಯಾದಿಗಳನ್ನು ಒಪ್ಪಿಸುತ್ತಾರೆ. ಈ ದೇವಸ್ಥಾನದಲ್ಲಿ ದೆವ್ವ ಬಿಡಿಸುವ ಪರಿಯನ್ನು ತಿಳಿಯಲೇಬೇಕು.

ತಾರೀಖು ೧೪.೦೭.೧೯೯೫ರ ಮಧ್ಯಾಹ್ನ ಒಂದು ಗಂಟೆ ಸಮಯ. ಬೆಂಗಳೂರಿ

ನಿಂದ ಬಂದಿದ್ದ ಒಬ್ಬಾಕೆಯ ಮೇಲೆ ಬಂದಿದ್ದ ದೆವ್ವ ಬಿಡಿಸಿದ ರೀತಿಯನ್ನು ಹೇಳ ಬಯಸುತ್ತೇನೆ. ಅರ್ಚಕ ಶಿವನಯ್ಯ, ದೇವರು ಮೈಮೇಲೆ ಬರಲೆಂದು ಹಸೆಯ ಮೇಲೆ ಕುಳಿತ, ದೆವ್ವ ಬರುತ್ತಿದ್ದ ಆ ಹೆಂಗಸಿನ ಮೇಲೆ ತೀರ್ಥ ಹಾಕಿ ದೇವಿಯ ಎದುರಿಗೆ ಕೂಡಿಸಿದರು. ಅಂದು ಶಿವನಯ್ಯನ ಮೇಲೆ ದೇವರು ಬರಲಿಲ್ಲ. ಆಗ ಮೇಲೆದ್ದು ಮಂಗಳಾರತಿ ತೆಗೆದುಕೊಂಡು ಪೂಜೆ ಮಾಡಿ ಸೂರ‍್ಯ ನಮಸ್ಕಾರ ಮಾಡುತ್ತಿದ್ದಂತೆಯೇ ದೇವಿ ಆತನ ಮೈಮೇಲೆ ಬಂದಳು. ಆತ ಆರತಿ ತಟ್ಟೆಯೊಡನೆ ಬೀಳುವುದರಲ್ಲಿದ್ದ. ಅಲ್ಲಿದ್ದ ನಾಲ್ಕೈದು ಮಂದಿ ಅನಾಮತ್ ಎತ್ತಿ ಹಸೆಯ ಮೇಲೆ ಕೂಡಿಸಿದರು, ಅಷ್ಟರಲ್ಲಿ ಎದುರಿಗೆ ಕುಳಿತಿದ್ದ ಈ ಹೆಣ್ಣುಮಗಳಿಗೆ ದೆವ್ವ ಹಿಡಿದಿತ್ತು. ದೆವ್ವ ಬಂದಾಗ ಮುಂದಲೆಯ ಜುಟ್ಟಿನ ಹದಿನೈದು ಇಪ್ಪತ್ತು ಕೂದಲುಗಳನ್ನು ಹಿಡಿದು ಗಂಟು ಹಾಕುತ್ತಾರೆ. ಆ ಗಂಟು ಇರುವವರೆಗೂ ಬಂದಿರುವ ದೆವ್ವ ಆಕೆಯನ್ನು ಬಿಟ್ಟು ಹೋಗುವ ಹಾಗಿಲ್ಲ. ಇದು ಆ ದೆವ್ವಕ್ಕೆ ಹಾಕುವ ದಿಗ್ಬಂಧನ.

ಈಗ ದೇವರು ಬಂದವನು ಪ್ರಶ್ನಿಸಲು ಪ್ರಾರಂಭಿಸುತ್ತಾನೆ. ದೆವ್ವ ಬಂದಾಕೆ ಅದಕ್ಕೆ ಉತ್ತರಿಸಬೇಕು. ಇಲ್ಲವಾದರೆ ಕುಳಿತಲ್ಲಿಂದಲೇ ಬೆತ್ತದಿಂದ ಹೊಡೆಯುತ್ತಾನೆ. ಆಗ ಆ ಪೆಟ್ಟು ದೆವ್ವಕೆ (ದೆವ್ವ ಹಿಡಿದಾಕೆಗೆ) ತಗುಲಿ ಬಾಯಿ ಬಿಡುತ್ತದೆ. ಆ ದಿನ ಆತ ಪ್ರಶ್ನೆ ಕೇಳಿದ್ದು, ಅದಕ್ಕೆ ಆ ದೆವ್ವ ಹಿಡಿದಾಕೆ ಉತ್ತರಿಸಿದ ರೀತಿಯನ್ನು ನೋಡೋಣ (ಇದರ ಧ್ವನಿಮುದ್ರಣ ಸುರುಳಿ ನನ್ನ ಬಳಿ ಇದೆ)

ದೇವರು :- ಯಾರು ನೀನು ? ಯಾರಮ್ಮ ನೀನು ?

ದೆವ್ವ : -ನಾನು ಪುಟ್ಟಂಕಿ

ದೇವರು :- ಮತ್ತೆ ಯಾರ‍್ಯಾರು ಇದ್ದೀರೀ ? (ಅಂದರೆ ಈಕೆಯ ಮೇಲೆ ಬಂದಿರುವುದು ಒಂದು ದೆವ್ವವಲ್ಲ ಮೂರು ದೆವ್ವಗಳು).

ದೆವ್ವ:- ಮೌನವಾಗಿರುತ್ತದೆ (ಬೆತ್ತದಿಂದ ನಾಲ್ಕೇಟು ಅವನು ಕುಳಿತಿರುವಲ್ಲಿಯೇ ನೆಲದ ಮೇಲೆ ಬಡೆಯುತ್ತಾನೆ. ತಾಳಲಾರದೆ) ಹೇಳುತ್ತೇನೆ (ಎಂದು ಉಳಿದೆರಡು ಹೆಸರುಗಳನ್ನು ಹೇಳುತ್ತಾಳೆ ಆ ದೆವ್ವ ಹಿಡಿದ ಹೆಣ್ಣುಮಗಳು).

ದೇವರು :- ಯಾಕೆ ಬಂದಿರುವೆ?

ಹೀಗೆಯೇ ಪ್ರಶ್ನೋತ್ತರಗಳು ಮುಂದುವರಿಯುತ್ತವೆ. ದೆವ್ವ ಹಿಡಿದಿರುವಾಕೆ ತನ್ನ ಸುಪ್ತ ಮನಸ್ಸಿನ ಬಯಕೆಗಳನ್ನೆಲ್ಲ ಹೊರಗೆಡಹುತ್ತಾಳೆ. ಅಲ್ಲಿಯೇ ನಿಂತಿದ್ದ

ಮತ್ತೊಬ್ಬ ವ್ಯಕ್ತಿ ಘರ್ಜಿಸುತ್ತ ಬೆತ್ತ ಹಿಡಿದು ಮನಬಂದಂತೆ ದೆವ್ವ ಹಿಡಿದ ಆ ಹೆಣ್ಣುಮಗಳ ಮುಂದಲೆಯ ಕೂದಲುಗಳನ್ನಿಡಿದು ಎಳದಾಡಿ 'ಬಿಟ್ಟು ಹೋಗುವೆಯೋ ಇಲ್ಲವೋ?' ಎಂದು ಬೆದರಿಸುತ್ತಾನೆ. ಹದರಿದ ದೆವ್ವ ಹಿಡಿದಾಕೆ ಹೊರಟು ಹೋಗುತ್ತೇನೆ ಎಂದು ಅಂಗಲಾಚುತ್ತದೆ. (ಈ ಘಟನೆಯ ಭಾವಚಿತ್ರಗಳನ್ನು ತೆಗೆದಿರಿಸಿಕೊಂಡಿರುತ್ತೇನೆ).

ಸರಿ ನೀನು ಬಿಟ್ಟು ಹೋಗುತ್ತಿರುವುದಕ್ಕೆ ಗುರುತು ಕೊಡು ಎಂದು ಕೇಳಿ ಆಕೆಯ ಮುಂದಲೆಯ ಗಂಟು ಹಾಕಿರುವ ಕೂದಲ ತೊಂಪೆಯನ್ನು ದೇವಸ್ಥಾನದ ಮುಂದೆ ಇರುವ ಗಣಗಲೆ ಹೂವಿನ ಮರಕ್ಕೆ ಜಡಿದ ಮೂರು ಮೂರುವರೆ ಅಂಗುಲದ ಮೊಳೆಗೆ ಸಿಕ್ಕಿಸಿ ಎಳೆದು ಆ ಕೂದಲುಗಳನ್ನು ಕಿತ್ತು ಕೊಡುತ್ತಾಳೆ. ಇದೊಂದು ಬೀಭತ್ಸ್ಯ ದೃಶ್ಯ ವಾಗಿರುತ್ತದೆ. ಈ ಕ್ರೂರ ಆಚರಣೆಗಳು ಅವರ ಮೂಢನಂಬಿಕೆಗೆ ಸಾಕ್ಷಿ. ಇದನ್ನೆಲ್ಲ ನೋಡಿ ಮರುಗುವುದಷ್ಟೇ ನನ್ನ ಕೆಲಸವಾಯಿತು. ವಿರೋಧಿಸಲು ಆಗುವುದಿಲ್ಲ. ಅಲ್ಲಿನ ಸ್ಥಿತಿ ಹಾಗಿರುತ್ತದೆ. ನಾಗರಿಕತೆಯ ತುದಿ ಮೆಟ್ಟಿಲಿನಲ್ಲಿರುವ ಬೆಂಗಳೂರಿನ ಹೆಣ್ಣು ಮಗಳೊಬ್ಬಳು ದೆವ್ವ ಬಿಡಿಸಿಕೊಂಡ ಈ ರೀತಿಯನ್ನು ಕಂಡು ದಂಗುಬಡಿದುಹೋದೆ. ಆದರೆ ಆ ಸನ್ನಿವೇಶದಲ್ಲಿ ನಾನೊಬ್ಬ ಅಸಹಾಯಕ.

ಬಾಣಂತಿಮಾರಮ್ಮನ ಹಬ್ಬ (ಊರ ಹಬ್ಬ)

ಬಾಣಂತಿ ಮಾರಮ್ಮ ನೆಲೆಸಿರುವ ಏಳು ಊರುಗಳಲ್ಲಿ ಏಳೇಳು ಹಳ್ಳಿಗಳ ಜನರು ಭಯಭಕ್ತಿಗಳಿಂದ ಬಾಣಂತಿಮಾರಮ್ಮನ ಹಬ್ಬವನ್ನು ಪ್ರತಿ ವರ್ಷವೂ ಆಚರಿಸುತ್ತಾರ ದಿ.೨೮-೪-೯೭ ರಂದು ಕೆ.ಐ.ಟಿ.ಡಿ.ಪಿ. ಕಾರ್ಯಕರ್ತರಾದ ಕಬ್ಬಾಳಯ್ಯನವರೊಡನೆ ಕೂತಗೊಂಡನಹಳ್ಳಿಗೆ ಕ್ಷೇತ್ರಕಾರ್ಯಾರ್ಥಿಯಾಗಿ ಹೋಗಿ ಮೂರು ದಿನಗಳು ಅಲ್ಲಿಯೇ ಇದ್ದು ಎಲ್ಲಾ ಆಚರಣೆಗಳನ್ನು ಗಮನಿಸಿ, ಅದರ ವಿವರಗಳನ್ನು ಸಹೃದಯ ಓದುಗರೊಡನೆ ಹಂಚಿಕೊಳ್ಳುತ್ತೇನೆ.

ಮೊದಲನೆಯ ದಿನ ಕೊಂಡವನ್ನು ಸ್ವಚ್ಛಗೊಳಿಸಿ ಮೊದಲ ಪೂಜೆ ಮಾಡುತ್ತಾರೆ. ಮುಖ್ಯವಾಗಿ ಮೂರನೆಯ ದಿನ ಎಲ್ಲಾ ಕಾರ್ಯಕ್ರಮಗಳೂ ವಿಧಿವತ್ತಾಗಿ ಪ್ರಾರಂಭ ವಾಗುತ್ತವೆ. ಅಂದು ಸಂಜೆ ಏಳು ಹಳ್ಳಿಗಳಿಂದ್ ಯಳವಾರದ ಕೊನೆಗಳು ಬರುತ್ತವೆ. ಎಲ್ಲವೂ ಕೂತಗೊಂಡನಹಳ್ಳಿಗೆ ಬಂದು ಸೇರಿ ಕೊಂಡದ ಬಳಿಗೆ ಹೋಗಲು ಮಧ್ಯರಾತ್ರಿ ೧೨ ಗಂಟೆಯ ಸಮಯವಾಗುತ್ತದೆ. ನಂತರ ಎಲ್ಲರೂ. ತಮ್ಮ ತಮ್ಮ ಮನೆಗೆ ಹಿಂತಿರುಗಿ ಊಟ ಮುಗಿಸಿ ಕೊಂಡಕ್ಕೆ ಸೌದೆ ಜೋಡಿಸಲು ಬರುತ್ತಾರೆ. ಪಕ್ಕದ ಹಳ್ಳಿಗಳಾದ ಚೂಡ

ಹಳ್ಳಿಯ ಬಿಸಿಲಪ್ಪ, ಮಂಚಯ್ಯನ ದೊಡ್ಡಿಯ ಹುಲಿಯಮ್ಮ, ಕೂತಗೊಂಡನಹಳ್ಳಿಯ ಮದ್ದೂರಮ್ಮಗಳನ್ನು ತಂದು ಬಾಣಂತಿಮಾರಮ್ಮನ ಗುಡಿಯಲ್ಲಿಳಿಸುತ್ತಾರೆ.

ಊರಜನರು, ಪಕ್ಕದ ಆರು ಹಳ್ಳಿಗಳ ಜನರೂ ಸೇರಿ ಕೊಂಡಕ್ಕೆ ಬಂದಿರುವ ಸೌದೆಗಳನ್ನು ಜೋಡಿಸುತ್ತಾರೆ. (ಕೊಂಡಕ್ಕೆ ಸೌದೆ ಜೋಡಿಸುವಾಗ ಕೊಂಡದಲ್ಲಿ ಭಾಗ ಮಾಡಿಕೊಂಡು ಅವರವರ ಊರಿನಿಂದ ಬಂದ ಸೌದೆಗಳನ್ನು ಅವರವರೇ ಬೇಯಿಸುತ್ತಾರೆ). ದೇವಸ್ಥಾನದಲ್ಲಿ ಪೂಜೆ ಮಾಡಿದ ಕರ್ಪೂರದ ಬೆಂಕಿಯಿಂದಲೇ ಕೊಂಡಕ್ಕೆ ಬೆಂಕಿ ಹಚ್ಚುತ್ತಾರೆ. ಎಲ್ಲಾ ಸೌದೆಯನ್ನು ಬೇಯಿಸಿ ಕೆಂಡ ಕೊಂಡವನ್ನು ತಯಾರು ಮಾಡುತ್ತಾರೆ.

ಬೆಳಗಿನ ಝಾವ ನಾಲ್ಕು ಗಂಟೆಗೆ ಸರಿಯಾಗಿ ಊರ ಹೊರವಲಯದಲ್ಲಿ ಸಿಂಗರಿಸಿದ ಕರಗವನ್ನು ತೆಗೆದುಕೊಂಡು ಹೋಗಿ ಇರುಳಿಗ ಪೂಜಾರಿಗೆ ಸಿಂಗರಿಸಿ ಆತನ ತಲೆಯಮೇಲೆ ಪೂಜೆ ಮಾಡಿದ ಕರಗವನ್ನು ಹೊರಿಸುತ್ತಾರೆ. ಕರಗ ಹೊತ್ತ ಪೂಜಾರಿಯ ಮೇಲೆ ದೇವಿಯ ಆವಾಹನೆಯಾಗುತ್ತದೆ. ಊರಿನ ಪ್ರಮುಖ ಬೀದಿಗಳಲ್ಲಿ ಮುಂದೆ ಕಳಸಕನ್ನಡಿ ಹಿಡಿದ ಮುತ್ತೈದೆಯರು, ಬಾಣಂತಿಮಾರಮ್ಮ, ಹುಲಿಯಮ್ಮ, ಮದ್ದೂರಮ್ಮ, ಬಿಸಿಲಪ್ಪ ಮುಂತಾದ ಉತ್ಸವ ಮೂರ್ತಿಗಳ ಹಿಂದೆ ಮಡಿಬಟ್ಟೆಯ ಮೇಲೆ ಹೋಗುತ್ತಿರುವಂತೆಯೇ ಹೆಣ್ಣುಮಕ್ಕಳು ಹಸಿಅಕ್ಕಿಯ ತಂಬಿಟ್ಟಿನ ತಟ್ಟೆಗಳನ್ನಿಡಿದು ಆ ಮೆರವಣಿಗೆಯಲ್ಲಿ ಸೇರಿಕೊಳ್ಳುತ್ತಾರೆ. ಏಳು ಹಳ್ಳಿಗಳ ತಂಬಿಟ್ಟಿನಾರತಿಗಳೂ ಒಂದೆಡೆ ಸೇರಿ ಜನಸಮುದ್ರದ ಸುಂದರ ದೃಶ್ಯ ನಿರ್ಮಾಣವಾಗುತ್ತದೆ. ತಮಟೆ, ನಗಾರಿ. ಮಂಗಳ ವಾದ್ಯಗಳ ಗಗನಚುಂಬಿ ಶಬ್ದದಿಂದ ನಿಃಶಬ್ದ ವಾತಾವರಣದಲ್ಲಿ ರುದ್ರರಮಣೀಯ ವಾತಾವರಣ ಸೃಷ್ಟಿಯಾಗುತ್ತದೆ.

ಎಲ್ಲರೂ ಕೊಂಡದ ಬಳಿಗೆ ಹೋಗುವಷ್ಟರಲ್ಲಿ ಬೆಳಗಿನ ಆರುಗಂಟೆಯಾಗಿ ಪೂರ್ವ ದಿಗಂತದಲ್ಲಿ ಸೂರ್ಯನ ಹೊಂಗಿರಣಗಳು ಅರುಣವರಾಗವಾಡುತ್ತ, ಸ್ವಾಗತ ಕೋರುತ್ತವೆ. ಪ್ರದಕ್ಷಿಣೆ ಹಾಕಿಸಿದ ಎಲ್ಲಾ ಉತ್ಸವ ಮೂರ್ತಿಗಳನ್ನೂ ಕರಗದ ಮಂಟಪದಲ್ಲಿಳಿಸುತ್ತಾರೆ. ದೇವರು ಬಂದವನನ್ನು ಪಶ್ಚಿಮ ಭಾಗದ ಕೊಂಡದ ಬಾಯಿಗೆ ಪೂಜೆ ಮಾಡಿ, ಹೋತವೊಂದರ ಬಲಿಯನ್ನರ್ಪಿಸಿ, ಕೆಂಡಕೊಂಡಕ್ಕೆ ಬಿಡುತ್ತಾರೆ. ಧಗಧಗ ಉರಿವ ಕೆಂಡದುಂಡೆಗಳ ಮೇಲೆ ಸಾಗಿ ಬರುವಾಗ ಕೆಂಪು ಕೆಂಡಗಳು ಮೇಲಕ್ಕೆ ಗರುತ್ತವೆ. ತಂಬಿಟ್ಟಿನಾರತಿ ತಂದ ಹೆಣ್ಣು ಮಕ್ಕಳು ಪೂಜೆ ಮಾಡಿಸಿಕೊಂಡು ಮನೆಗೆ ಹಿಂದಿರುಗುತ್ತಾರೆ. ಅಲ್ಲಿಗೆ ಕೊಂಡದ ಕಾರ್ಯಕ್ರಮ ಮುಗಿಯುತ್ತದೆ.

ಅನ್ನ ಸಂತರ್ಪಣೆ : ಊರ ಪೊರಲವಯದ ಸೀತಾರಾಮಪ್ಪಸ್ವಾಮಿಗಳ ಮಠದ ಆವರಣದಲ್ಲಿ ಅಡಿಗೆ ವ್ಯವಸ್ಥೆಯಾಗುತ್ತದೆ. ಬಂದ ಭಕ್ತಾದಿಗಳೆಲ್ಲ (ಸಾವಿರಾರು ಜನರು) ಪ್ರಸಾದ ಸ್ವೀಕರಿಸುತ್ತಾರೆ. ರಾತ್ರಿಗೆ ಎಲ್ಲ ದೇವರುಗಳನ್ನೂ ನಗಾರಿ ನೌಪತ್ತು ಗಳೊಡನೆ ಎಲ್ಲಾ ಗ್ರಾಮಗಳಲ್ಲೂ ಮೆರವಣಿಗೆ ಪ್ರಾರಂಭವಾಗುತ್ತದೆ. ರಾತ್ರಿ ೧೦ ಗಂಟೆಗೆ ಆರಂಭವಾದ ಮೆರವಣಿಗೆ ಮಾರನೇ ದಿನ ಬೆಳಗಿನ ೧೧ ಗಂಟೆಯವರೆಗೂ ನಡೆಯುತ್ತದೆ.

(ತಾ. ೧-೫-೧೯೯೭) ಬೆಳಿಗ್ಗೆ ಮುಗ್ಗೊಂಡಕ್ಕೆ ಹೋತನ ಬಲಿಕೊಡುತ್ತರೆ. (ಕೊಂಡಕ್ಕೆ ಬಲಿ ಕೊಟ್ಟ ಹೋತಗಳನ್ನು ಮಡಿವಾಳಿ ಮತ್ತು ತೋಟಿಗಳಿಗೆ ಕೊಡುತ್ತಾರೆ) ಉಳಿದಂತೆ ಎಲ್ಲ ಜಾತಿಯವರೂ ಅವರವರ ಮನೆಗಳಲ್ಲಿಯೇ ಪೂಜೆ ಮಾಡಿ ತಾಯಿ ಮಾರಮ್ಮನಿಗೆ ಬಲಿಕೊಟ್ಟು ಕಳ್ಳು[22] ಕುಡಿದು ಮಾಂಸದಡಿಗೆಮಾಡಿ ಬಂದ ನೆಂಟರಿಷ್ಟರಿ ಗೆಲ್ಲ ಬಡಿಸಿ ಸಂತಸದಿಂದ ಇರುತ್ತಾರೆ.

ಸಿಡಿ : ಹದಿನಾಲ್ಕು ಅಡಿ ಎತ್ತರದ ಕಲ್ಲಿನ ಕಂಬಕ್ಕೆ ಮರದ ದಿಮ್ಮಿಗಳನ್ನು ಕೂಡಿಸಿ ಒಂದು ಕಡೆಗೆ ಮರದ ಕಾಗಡಿ (ತೊಟ್ಟಿಲಿನಾಕಾರದ್ದು)ಯನ್ನು ಕಟ್ಟಿ ಮೊದಲು ಸಿಡಿರಣ್ಣನನ್ನು ಕೂಡಿಸಿ ಸುತ್ತಿಸುತ್ತಾರೆ. ನಂತರ ಹರಕೆ ಪೊತ್ತವರನ್ನು ಕೂಡಿಸಿ ಸಿಡಿ ಆಡಿಸುತ್ತಾರೆ.ಮುಡಿಯ ಹರಕೆಪೊತ್ತವರು ತಮ್ಮ ಮುಡಿಯನ್ನು ಕೊಟ್ಟು ಹರಕೆ ಸಲ್ಲಿಸು ತ್ತಾರೆ. ಎಲ್ಲಾ ಆಚರಣೆಗಳಲ್ಲೂ ಇರುಳಿಗರದೇ ಮುಖ್ಯ ಪಾತ್ರ. ಎಲ್ಲಾ ಕಾರ್ಯಕ್ರಮಗಳ ನಿರ್ದೇಶಕರು ಅವರೇ, ರಾತ್ರಿಗೆ ನಾಟಕ-ಬಯಲಾಟಗಳನ್ನು ಆಡುತ್ತಾರೆ. ಸಾಮಾನ್ಯವಾಗಿ ಪೌರಾಣಿಕ (ರಾಮಾಯಣ, ಮಹಾಭಾರತದ) ವಸ್ತುಗಳನ್ನಿಟ್ಟುಕೊಂಡು ಇಡೀ ರಾತ್ರಿ ನಡೆಸುತ್ತಾರೆ.

ವಾರಕ್ಕೆ ಸರಿಯಾಗಿ ಬಾಣಂತಿಮಾರಮ್ಮನ ಮೆರವಣಿಗೆ (ಕೂತಗೊಂಡನಹಳ್ಳಿ ಯಲ್ಲಿಮಾತ್ರ) ನಡೆಯುತ್ತದೆ. ಅಲ್ಲಿಗೆ ವರ್ಷದ ಹಬ್ಬ ಮುಗಿಯುತ್ತದೆ.

ಈ ಎಲ್ಲಾ ಸಂದರ್ಭಗಳಲ್ಲೂ ಇರುಳಿಗ ಹೆಂಗಸರಿಂದ ಬಾಣಂತಿಮಾರಮ್ಮನ ಮಹಿಮೆಗಳನ್ನು ಕುರಿತ ಹಾಡುಗಳು ಓತಪ್ರೋತವಾಗಿ ಹರಿದುಬರುತ್ತವೆ. ಅಂತಹ ಹಾಡುಗಬ್ಬಗಳ ಸಂಗ್ರಹ ಪಾಠವನ್ನು ಕೆಳಗೆ ಕೊಡಲಾಗಿದೆ.

ಬಾಣಂತಮ್ಮನ ಮನೆಯನ್ನು ಕುರಿತಂತೆ....

ಒಂಬಾಳೆ ದಿಂಬ ನೋಡೇ ಬಾಣತವ್ವಾ,

ಚಂಡಾಡೋ ಚಂದಾ ನೋಡೇ !! ೨!!
ಇತ್ತಲ ಮನೆಯೋಳೆ ಇರಿಕಾನ ನರಿಯೋಳೇ
ಸುತ್ತಪಾವಡಿಯ ಮನೆಯೋಳೇ
ಆಕಾಶ ಲೋಕ ಕಾಣೇ ! ಬಾಣತವ್ವಾ ! ಲೋಕಕೆ ಚೆಲುವೇ ಕಾಣೇ !

ಸುತ್ತ ಪಾವಡಿಯ ಮನೆಯೋಳೆ ಬಾಣತವ್ವಾ
ಸುತ್ತಿಬರುತೀನಿ ದನಿತೋರೇ
ಎಲ್ಲಿಗೋಗಿದ್ದೆ ನೀನೂ !ಬಾಣತವ್ವಾ ! ಮುಗ್ಗು ತಂದಿದ್ದೊ ನಾವೂ !

ಕರಗ ತಯಾರಿಸುವ ಕುಂಬಾತಿಯನ್ನು ಕುರಿತು ಹಾಡುತ್ತಾರೆ ..

ಗುಂಡಿಯ ಮನೆಯೋಳೆ ಗುಂಡಿನ ಸರದೋಳೇ
ಗುಂಡಿಲಿ ಮಣ್ಣ ತುಳಿಯೋಳೇ
ಒಂಬಾಳೇ ವನವನೋಡೇ ! ಬಾಣತವ್ವ ! ಹಿಂದೆ ಬರೋ ದಂಡು ನೋಡೇ !

ಗುಂಡೀಲಿ ಮಣ್ಣ ತುಳಿಯೋಳೆ ಕುಂಬಾತಿ
ಚೆಂದಾಗಿ ಮಾಡೀ ಕರುಗಾವೆ
ಬಣ್ಣಾಕೆ ಬಾಗುತಾಳೇ ! ಬಾಣತವ್ವಾ ! ಚಿನ್ನಾಕೆ ತೂಗುತಾಳೇ !

ನನ್ನ ಕರುಗಾದಲೇನೇನು ಗೆಯ್ಯುಬೇಕೂ
ಚಿತ್ತಾರ ನೂರು ಗಿಣಿ ನೂರೂ
ಓಲಾಡಿ ಒಳಗೋದಳೇ !ಒ ಬಾಣತವ್ವಾ! ಜಲನಾಡಿ ದೇವ್ರ ತಂದಾಳೇ !

ಚಿತ್ತಾರ ನೂರು ಗಿಣಿ ನೂರು ಬಾಣತವ್ವ
ಪಾದಾದ ಮ್ಯಾಲೆ ಪದನೂರೂ
ಅಜ್ಜೆ ಮ್ಯಾಲೆ ಅಜ್ಜೆ ಬಂದಾಳೇ ! ಬಾಣತವ್ವಾ ! ಗೆಜ್ಜೆ ಮ್ಯಾಲೆ ಅವಳೇ ಬಂದಾಳೇ !!

ಬಾಣತಮ್ಮನ ಅಂದ ಚಂದಗಳ ವರ್ಣನೆ ....

ವಾಲೆ ಬೆಳಕೇಲಿ ಕುಂತೋಳೆ ಬಾಣತವ್ವಾ
ತಾಳಿ ಬೆಳಕೇಲಿ ತೆಳುಸೂಳೇ
ಹೂವಿನವಿನಾರಾ ! ಬಾಣತಮ್ಮೇ ! ಬೆಳ್ಳಿ ಘಂಟೇಲಿ ಪೂಜೇ ಕಾಣೇ !

ತಾಳಿ ಬೆಳಯಕೇಲಿ ತೆಳು ಸೂಳೆ ಬಾಣತವ್ವಾ
ಯಾವ ಮಗನೀಗೆ ಹರುಸಾವೇ
ಆಕಾಶ ಲೋಕ ಕಾಣೇ ! ಬಾಣತವ್ವಾ ! ಲೋಕಕೆ ಚೆಲುವೆ ಕಾಣೇ !

ಕೊಂಡ ಹಾಯುವವನನ್ನು ಕುರಿತು...

ಹಸೆಯ ಚೆದುರಸಾವೇ ರಸ ಬುಟ್ಟಿ ಬಿಳ್ಯಾಗ
ಹಸಿದ ನಿನಮಗ ಅಗಲುಗೊಂಡಾ
ಹಣೆ ಮ್ಯಾಲೆ ಗಂಧ ಕಾಣೇ ! ಬಾಣತವ್ವಾ ! ಗಳ್ಳಾಗಿ ಬಂದ ನೋಡೇ !

ಗಂಡು ಮಗ ಬಂದೂ ಗಂಧಾವ ತೇದಾನೆ
ಚಂದುಕ್ ದೋತುಕರವಾ ತೊಡುತಾನೇ
ವಾಲಾಡಿ ಒಳಗೆ ಹೋದಾಳೇ ! ಬಾಣತವ್ವಾ ! ಜಲನಾಡಿ ದೇವ್ರ ತಂದಾಳೇ !

ಕೊಂಡಕ್ಕೆ ಸೌದೆ ತರುವ ರೀತಿ (ಯಳವಾರ) ....

ಹಾಲು ಅನ್ನ ಉಂಡು ಐದೆಲೆ ಕುಡ್ಡು ತರಿಸಿ
ಕಾಡಿಗೆ ಹೋಗಿ ಕೊನೆ ತಂದಾ
ಬಣ್ಣಾಕೆ ಬಾಗುತಾಳೇ ! ಬಾಣತವ್ವಾ ! ಚಿನ್ನಾಕೆ ತೂಗುತಾಳೇ !

ಕಾಡಿಗೆ ಹೋಗಿ ಕೊನೆ ಕಡುದಿ ಬಾಣುತವ್ವಾ
ಅಲ್ಲೆ ಕಟ್ಟಾರೆ ಯಳವಾರಾ
ಆಕಾಶ ದೂಪ ಕಾಣೇ ! ಬಾಣತವ್ವಾ ! ಲೋಕಕೆ ಚಲುವೆ ಕಾಣೇ !

ಅನ್ನ ತುಪ್ಪ ಉಂಡಿ ಒಪ್ಪದೆಲಿ ಕುಡ್ಲ ತರಿಸಿ
ಕಾಡೀಗೆ ಹೋಗಿ ಕೊನೆ ಕಡಿಸೀ
ಜಲಜಲನೆ ಜೆವುತಳಲ್ಲೀ ! ಬಾಣತವ್ವಾ ! ಜಲದ ಬೆಟ್ಟ ಹೊರಟಾಳಲ್ಲೀ !

ತಾಯಿ ಬಾಣತಮ್ಮ ಕೊಂಡದೊತ್ತಿಗೆ ಯಾರ್‍ಯಾರು ಬರಬೇಕು ಅಂತಾಳೆ ಅಂದ್ರೆ...

ಬಾಳೆ ತೋಟ್ ದೆಲಿರುವ ಚಿಟ್ಟು ಬಸುವಾ ನೀನೀಗ
ಮುಂಗೊಂಡದೊತ್ತೀಗೆ ಬರಬೇಕೂ
ಅಜ್ಜೆ ಮ್ಯಾಲೆ ಅಜ್ಜೆ ಬಂದಾಳೀ ! ಬಾಣತವ್ವಾ ! ಗೆಜ್ಜೆ ಮ್ಯಾಲೆ ಅವಳೀ ಬಂದಾಳೀ !

ಮುಂಗೊಡದೊತ್ತಿಗೆ ಬರಬೇಕು ಅಂತೇಳಿ
ಸರಸರನೆ ಅವಳು ಹೋಗುತಾಳೀ
ಒಂಬಾಳೆ ವನವ ನೋಡೇ ! ಬಾಣತವ್ವಾ ! ಹಿಂದೆ ಬರುವ ದಂಡು ನೋಡೇ !

ಕಡ್ಲೆ ಮೇದಾವ್ರೋ ಕಾವಲೆಲ್ ನೀರ್ ಕುಡದಾವ್ರೋ
ಕಡದೀ ಬತ್ತಾನೆ ಬಸುವಣ್ಣಾ
ಮುಂದೆಲ್ಡು ಚಿನ್ನ(ದ) ಕುದುರೇ !ಬಾಣತವ್ವಾ ! ಹಿಂದೆಲ್ಡು ರನ್ನದ್ ಕಳಸಾ !

ಬಾಣತಮ್ಮನಿಗೆ ಮಡಿಲು ತುಂಬುವ ಪರಿ ..
ಹೂವುನ್ ಸೀರೇಗೆ ಊದಾರೆ ಮಡಿಲಕ್ಕಿ
ಊರಿನ ಗೌಡಾನಮ ಮನೆ ಮುಂದೇ
ಮುಂದೆಲ್ಢ ಚಿನ್ನ ಕಳುಸಾ ! ಬಾಣತವ್ವಾ ! ಹಿಂದೆಲ್ಢ ಚಿನ್ನ ನ ಕುದುರೇ !
ಪಟ್ಟೆ ಬಣ್ಣಾಕೆ ಕಟ್ಟಾರೆ ಮಡಿಲಕ್ಕಿ
ಸುಟ್ಟ ಗೌಡಾರ ಮನೆ ಮುಂದೇ
ಎಲ್ಲಿಗೋಗಿದ್ರಿ ನೀವು ! ಬಾಣತವ್ವಾ ! ಮುಗ್ಗು ತಂದಿದ್ದೋ ನಾವೂ !

ಬಾಣತಮ್ಮನ ಪೂಜೆಯ ಮ್ಯಾಲೆ ಮಲ್ಲಿಗೆಯನ್ನು ಚೆಲ್ಲುತ್ತಾರೆ...
ಚೆಲ್ಲೀರಿ ಮಲ್ಲಿಗೆಯಾ ಚಿನ್ನಾದ ಗಿಂಡಿ ಮ್ಯಾಲೀ
ಬಾಣತವ್ವ ಮೆರೆವಾ ಪೂಜೆ ಮ್ಯಾಲೀ !

ಚಿನ್ನದ ಕಿರೀಟ ಧರಿಸ್ ಕೊಂಡು ಬಾಣತವ್ವಾ
ಬೆಳ್ಳಿ ಬೆತ್ತಾವ ಇಡಕೊಂಡೂ ! ಚೆಲ್ಲಿರಿ ಮಲ್ಲಿಗೆಯಾ!

ಬೆಳ್ಳಿ ಬೆತ್ತಾವ ಇಡಕೊಂಡು ಬಾಣತವ್ವಾ
ಬೆಟ್ಟ ಇಳುದಾಳೀ ಬೆವುತಾಳೀ ! ಚೆಲ್ಲೀರಿ ಮಲ್ಲೀಗೆಯಾ !

ಬೆಟ್ಟ ಇಳುದಾಳೀ ಬೆವುತಾಳಿ ಬಾಣತವ್ವಾ
ಮುಂಗೊಂಡ್ ದೊತ್ತೀಗೆ ಬರುತಾಳಿ ! ಚೆಲ್ಲೀರಿ ಮಲ್ಲೀಗೆಯಾ !

ಹಠಮಾಡಿಕೊಂಡು ಗುಡಿಯಲ್ಲೇ ಕುಳಿತುಕೊಂಡವಿವರನೀಡುತ್ತಾರೆ...
ಬಣ್ಣ ಕಮ್ಮಿ ಎಂದು ಬಂಗಾರವೊನೆಯಿಂದೂ
ಮಂಡುಕ್ ಕೂತವಳೀ ಗುಡಿಯಲ್ಲೀ ! ಚೆಲ್ಲೀರಿ ಮಲ್ಲೀಗೆಯಾ !

ಮಂಡುಕ್ ಕೂತವಳಿ ಗುಡಿಯಲ್ಲಿ ಮಾರವ್ವಾ
ಮುಂದ್ ಬರೋೀವಾತ ಮುದಿಯೆಂದೂ ! ಚೆಲ್ಲೀರಿ ಮಲ್ಲೀಗೆಯಾ !

ವಾತಾ (ಪೋತ)ನೋಡಾಳಿ ಉಸನಾಗವ ನಗುತಾಳೀ
ಕೊಂಡುಕ್ ಮೂರಜ್ಜೆ ಹೊರುತಾಳೀ ! ಚೆಲ್ಲೀರಿ ಮಲ್ಲೀಗೆಯಾ !

ಕೊಂಡುಕ್ ಮೂರಜ್ಜೆ ಹೊರುಟಾಳಿ ಬಾಣತವ್ವಾ
ಹಸಿಯಾಚುದ್ ಸೌದೆ ಸರಬುಟಿ! ಚೆಲ್ಲೀರಿ ಮಲ್ಲೀಗೆಯಾ !

ತಂಬಿಟ್ಟಿನಾರತಿಯ ವಿವರಗಳು ....

ಎಣ್ಣು ಮಕ್ಕು ಬಂದಿ ಬಣ್ಣಾ ಉಡಬನ್ನಿ
ಕೊಂಡಕಾರುತಿಯ ಕೊಡಬನ್ನಿ ! ಯಾರು ಬಂದಾರು ಮನುಗೇ !

ಆರೂತಿ ಇಡುದೀ ಅಂಗೈಯಿ ನೋವು ಬಂದೋ
ಮುಂಗೈನಲವಳ ಜಡುದವಳೇ! ಬಾಣತವ್ ಬಂದಾಳು ಮನೆಗೇ !

ಮುಂಗೈನಲವಳ ಜಡುದಾರೆ ಬಾಣತವ್ವಾ
ಮುಂದಿನಾರುತಿಯ ಬಯ್ಯಬ್ಯಾಡಾ !ಬಾಣತವ್ ಬಂದಾಳು ಮನೆಗೇ !

ತುಂಬೆ ಹೂವಿನಂಗೆ ತಂಬಿಟ್ಟು ಗುಡಿಮುಂದೆ
ಮಲ್ಲಿಗೂವಿನಂಗೆ ಚೆಲ್ಲೀತೂ ! ಬಾಣತವ್ ಬಂದಾಳು ಮನೆಗೇ !

ಮಲ್ಲಿಗೂವಿನಂಗೆ ಚೆಲ್ಲೀತು ಕೊಂಡುದ್ ಸುತ್ತ
ತಂಬಿಟ್ನ ಪೂಜೆ ಮಾಡುವಾಗ! ಬಾಣತವ್ ಬಂದಾಳು ಮನುಗೇ !

ತಂಬಿಟ್ನ ಪೂಜೆ ಮಾಡುವಾಗ ಬಾಣತವ್ವ
ಸಂಪಿಗೂವ್ ನಂಗೆ ಗುಂಪುಗೂಡೀ ! ಬಾಣತವ್ ಬಂದಾಳೆ ಮನುಗೇ!

ಬಾಣತಮ್ಮನ ಸೇವೆಗೆ ...

ಕನ್ನಂಬಾದಿಂದ ಕನಕ ತಮಟೆ ಬಂದೋ
ಭೂಲೋಕದಿಂದ ಅರೆ ಬಂದೋ ! ಬಾಣತವ್ ಬಂದಾಳೋ ಮನುಗೇ !

ನವುಲಾಡಿ ನವುಲು ನಲಿದಾಡಿ ಬಾಣತವ್ವಾ
ಚೆನ್ನಪಟ್ಟಣದ ಸಣ್ಣಮಲ್ಲಿಗೆ ಮುಡುದೂ !ಬಾಣತವ್ ಬಂದಾಳು ಮನುಗೇ !

ಭೂಲೋಕದಿಂದ ಹೂವಿನ ಹಾರ ಬಂದೋ
ನಿನ್ನ ನೋಡುಕ್ಕೆ ಶಿವ ಬಂದಾ !ಬಾಣತವ್ ಬಂದಾಳು ಮನುಗೇ !

ಮಡಿವಾಳಿ ಮಡಿಬಟ್ಟೆ ಹಾಸಿ ಕರೆವರೆ ಮಾತ್ರ ಬರುವಳಂತೆ ..

ಪಾಲಕಿಲವಳೆ ಪತುವ್ರತೆ ಬಾಣತವ್ವಾ
ಯಾರೂ ಕರುದಾರೂ ಬರುಲಲ್ಲೇ !ಬಾಣತವ್ ಬಂದಾಳು ಮನುಗೇ !

ಮಡಿವಾಳಿ ಹೋಗಿ ಮಡಿಬುಟ್ಟಿ ಕರುದಾರೇ
ಪಾರಿಲಾಲೀಸಿ ಬರುತಾಳೇ !ಬಾಣತವ್ ಬಂದಾಳು ಮನುಗೇ !

ತಂಗಿ ಮದ್ದೂರಮ್ಮ ನೊಡನೆ ...
ಜಾಲುದಾ ಹೂವ ಯಾರೀಗೆ ಬಾಣುತ್ರಮ್ಮಾ
ಜಾಣೆ ಅವಳೇಳೇ ನನತಂಗೀ !ಬಾಣತವ್ ಬಂದಾಳು ಮನುಗೇ !
ಜಾಣೆ ಅವಳೇಳೇ ನನ ತಂಗಿ ಮದ್ದೂರವ್ವಾ
ತಂಗಿ ಮದ್ದೂರಿ ಕಿರುಜಡೆಗೇ !ಬಾಣತವ್ ಬಂದಾಳು ಮನುಗೇ !
ಅಕ್ಕ ಬಾಣುತವ್ವಾ ತಂಗಿ ಮದ್ದೂರವ್ವಾ
ಜೋಡಂಗದ ಓಲೆ ಕಿವಿಗಿಕ್ಯೊ !ಬಾಣತವ್ ಬಂದಾಳು ಮನುಗೇ !
ಇಬ್ಬನಿ ಹೊಲಚಂದಾ ನಿಂತಾಡೋ ಗಿಣಿಚಂದಾ
ಇಬ್ಬರು ಮೆರೆಯೋದು ಬಲುಚೆಂದಾ !ಬಾಣತವ್ ಬಂದಾಳು ಮನುಗೇ !
ಅಕ್ಕ ಬಾಣತವ್ವಾ ತಂಗೀ ಮದ್ದೂರವ್ವಾ
ಪಗಡೆನಾಡಾರೇ ಗುಡಿಯಲ್ಲೀ !ಬಾಣತವ್ ಬಂದಾಳು ಮನುಗೇ !

ಬಾಣತಮ್ಮ ನೆಲೆಗೊಂಡದ್ದು ಎತ್ತಕ್ಕೆಂದು ಹೇಳುತ್ತಾರೆ...
ಕಾಡಿನ ಅಂದಾಕೆ ಕಾಡಿನ ಚಂದಾಕೆ
ಕಾಡುಮಲ್ಲಿಗೆಯ ಗಮೂಲಾಕೇ ! ಮಲ್ಲಿಗೆ ಮರವೇರೀ !
ಕಾಡುಮಲ್ಲಿಗೆಯ ಗಮುಲಾಕೆ ಬಾಣತವ್ವಾ
ಕಾಡೊಳ್ಳೆದೆಂದೂ ನೆಲಗೊಂಡ್ಳೂ ! ಮಲ್ಲಿಗೆ ಮರವೇರೀ !
ಗುರುಗಂಜಿ ಗುಡ್ಡೇಲಿ ಗುಡಗನಾಡೋಳ್ಯಾರೇ
ಗುರುಗಂಜಿ ಬಣ್ಣ ನೆರಿಯೋಳೇ ! ಮಲ್ಲಿಗೆ ಮರವೇರೀ !
ದುರ್ಗದ್ ಮ್ಯಾಲೆ ನಿಂತುಕೊಂಡೂ ಚದುರಂಗ ನೋಡೋಳೆ
ಕುದುರೆ ಬಣ್ಣಾದ ನೆರಿಯೋಳೇ ! ಮಲ್ಲಿಗೆ ಮರವೇರೀ !

ಮಕ್ಕಳ ಫಲ ಬೇಡುವ ಬಂಜೆ ಹೆಣ್ಣುಮಕ್ಕಳ ಬೇಡಿಕೆ ...

ಬಂಜೇರು ಬಂದವರೇ ನಿನ ಬಳಿ ಬಾಣತವ್ವಾ
ಕಂದಾನ ಕೊಡೇ ತೊಡೆಮ್ಯಾಲೇ !ದೀವೂಗೆ ಉರುದಾವೋ !
ಕಂದಾನ ನೀನು ತೊಡೆಮ್ಯಾಲೆ ಕೊಟ್ಟರೆ
ನಿನ್ನಂತಾಕೊಜ್ಜೂರವಾ ಗಯುಸೇವೂ !ದೀವೂಗೆ ಉರುದಾವೋ !
ಎಂದೇ ಮಗುನಂಗೇ ಇಂಬೀಯ ಹೂವಿನಂಗೆ
ರಂಬೇರ್ ಬಂದವರೇ ನಿನ್ನ ಬಳಿಗೇ !ದೀವೂಗೆ ಉರುದಾವೋ !
ರಂಬೆರು ಬಂದವರೇ ನಿನ ಬಳಿಗೆ ಬಾಣತವ್ವಾ
ಪುತ್ರಾನಕೊಡೇ ತೊಡೆಮ್ಯಾಲೆ !ದೀವೂಗೆ ಉರುದಾವೋ !
ಪುತ್ರಾನ ನೀನು ಕೊಟ್ಟಾರೆ ಬಾಣತವ್ವಾ
ನಿನ್ನುತ್ತಾಕೆ ಮುತ್ತ ಗೆಯುಸೇನೂ !ದೀವೂಗೆ ಉರುದಾವೋ !
ಬಾಳೆ ಎಲೆಯಂಗೆ ಬಾಳೇಯ ಗೊನೆಯಂಗೆ
ಬಾಲೇರ್ ಬಂದವರೇ ನಿನಬಳಿಗೇ !ದೀವೂಗೆ ಉರುದಾವೋ !
ಬಾಲೇರು ಬಂದವರೇ ನಿನ ಬಳಿಗೆ ಬಾಣತವ್ವಾ
ಬಾಲಾನ ಕೊಡೇ ತೊಡೆಮ್ಯಾಲೇ !ದೀವೂಗೆ ಉರುದಾವೋ !
ಬಾಲಾನ ನೀನು ಕೊಟ್ಟಾರೆ ಬಾಣತವ್ವಾ
ನಿನ್ ಬಾಗುಲುಗುಬ್ಬೀಯ ಗೆಯುಸೇವೋ !ದೀವೂಗೆ ಉರುದಾವೋ !

ಹೀಗೆ ಬಾಣಂತಿ ಮಾರಮ್ಮನನ್ನು ಕುರಿತಂತೆ, ಆಕೆಯ ಹಾವಭಾವ ಚಲನವಲಗಳಿಗೆಲ್ಲಾ ಒಂದೊಂದು ಕಥೆಕಟ್ಟಿ ಹಾಡುತ್ತಾರೆ. ಒಂದೊಂದೂ ಬಿಡಿ ಮುಕ್ತಕಗಳಂತೆ ಜನಪದ ಹಾಡುಗಾರ್ತಿಯರ ನಾಲಿಗೆಗಳಲ್ಲಿ ನಲಿದಾಡುತ್ತವೆ. ಉಪಮೆ, ರೂಪಕ, ದೀಪಕ, ಪಡೆನುಡಿ, ಗಾದೆ ಮಾತುಗಳು ಎಲ್ಲವೂ ತುಂಬಿರುತ್ತವೆ. ಎದೆ ತುಂಬಾ ಪದಗಳೇ ತುಂಬಿ, ಅವರ ನಾಲಿಗೆಗಳಲ್ಲಿ ನರ್ತಿಸುತ್ತವೆ.

ಅಡಿ ಟಿಪ್ಪಣಿಗಳು

೧ ವಿದೇಶೀ ಪ್ರವಾಸಿಗರು ಬಂದು ಬೆಟ್ಟಹತ್ತುವ ಸಾಹಸ ಕ್ರೀಡೆಯಲ್ಲಿ ತೊಡಗಿ (ರಾಕ್ ಕ್ಲೈಂಬಿಗ್) ಕಡಿದಾದ ಬೆಟ್ಟವನ್ನು ಹತ್ತಿ ಅದರ ನೆತ್ತಿಯ ಮೇಲೆ ಧ್ವಜ ಹಾರಿಸುತ್ತಿರುವುದರಿಂದ ಅಕ್ಕ ಪಕ್ಕದ ಹಳ್ಳಿಯ ದನಗಾಹಿಗಳು ಆ ಭಾಗಕ್ಕೆ

ಬಾವುಟ ಎಂದು ಕರೆಯುತ್ತಾರೆ.

ಸುತ್ತಮುತ್ತ ಹಲವಾರು ದೇವಸ್ಥಾನಗಳಿರುವುದರಿಂದ ದೇವರ ಬೆಟ್ಟವೆಂದು ಕರೆಯುತ್ತಾರೆ.

ಹೊಲರಾವಳ - ಇರುಳಿಗರ ದೃಷ್ಟಿಯಲ್ಲಿ ಹೊಲೆರೆಂದರೆ ತೀರಾ ಕೀಳು ಜಾತಿಯುವರೆಂಬ ಭಾವನೆ ಇಂದಿಗೂ ಇದೆ. ಹೊಲರಾವಳ ಎಂದರೆ ಹೊಲೆಯರ ರಾಜ ಎಂಬ ಅರ್ಥದಲ್ಲಿ ಬಳಸುತ್ತಾರೆ. ಅವರನ್ನು ನೋಡುವುದು, ಅವರೊಡನೆ ಮಾತನಾಡುವುದು, ಅವರನ್ನು ಮನೆಯ ಒಳಗಡೆ ಸೇರಿಸುವುದು ಇರುಳಿಗರಲ್ಲಿ ಕೆಲವೆಡೆ ಈಗಲೂ ನಿಷಿದ್ಧವಾಗಿದೆ.

ಹೊಲರಾವಳ ಕಟ್ಟಿದ ಆ ದೊಡ್ಡ ಕಲ್ಲುಗಳ ಹಂತ ಈಗಲೂ ಗೋಚರಿಸುತ್ತದೆ. (ಆತ ಕಟ್ಟಿದನೋ ಇಲ್ಲವೋ ಹಂತಹಂತವಾಗಿ ದೊಡ್ಡ ದೊಡ್ಡ ಕಲ್ಲುಗಳನ್ನು ಒಂದರಮೇಲೊಂದನ್ನು ಕಟ್ಟಿಕೊಂಡು ಹೋದಂತೆ ಕಾಣುತ್ತದೆ).

ಬೆಟ್ಟ ಈಗಲೂ ತುಂಬಾ ನುಣುಪಾಗಿರುವುದನ್ನು ತೋರಿಸಿದ ನಮ್ಮೊಡನಿದ್ದ ಇರುಳಿಗ ವ್ಯಕ್ತಿ ವೀರಭದ್ರಯ್ಯ ಅಂದು ಬಾಣಂತಮ್ಮ ಚೆಲ್ಲಿದ ಎಣ್ಣೆಯಿಂದಲೇ ನುಣ್ಣಗಾಯಿತು ಈ ಬೆಟ್ಟ ಎಂದು ಸಮರ್ಥಿಸಿಕೊಳ್ಳುತ್ತಾರೆ.

ಬಾಳೇಕಾಯಿಬಸಪ್ಪ, ವಸತಿಬಸಪ್ಪ ಎಂದೂ ಈಗಲೂ ಪೂಜೆಗೊಳ್ಳುತ್ತಿರುವ ಎರಡು ಚಿಕ್ಕ ದೇಗುಲಗಳಿವೆ. ಆ ದೇಗುಲಗಳಲ್ಲಿರುವವರೇ ಅಂದು ಬಾಣತಮ್ಮ ಬಿಸುಡಿದ ಮಕ್ಕಳೆಂಬುದು ಅಲ್ಲಿನವರ ನಂಬಿಕೆ.

ಬಾಣಂತಿ ಮಾರಮ್ಮ ನೆಲೆನಿಂತ ಏಳು ಗ್ರಾಮಗಳು ಹೀಗಿವೆ ಕನಕಪುರ, ಕೋಣಶೆಡ್ಡು ಅಥವಾ ಹೊಸಕೋಟೆ ಅಥವಾ ಕೋಣನದೊಡ್ಡಿ, ತಾಮಸಂದ್ರ, ದೊಂಗಾಣಿ ದೊಡ್ಡಿ, ಅಯ್ಯೋರದೊಡ್ಡಿ ಸ್ವಾಮೇದಪ್ಪನಹಳ್ಳಿ ಮತ್ತು ಕೂತಗೊಂಡನಹಳ್ಳಿ.

ಯಳವಾರ ತರುವ ಏಳು ಹಳ್ಳಿಗಳೆಂದರೆ ಕೂತಗೊಂಡನಹಳ್ಳಿ, ಕೊತ್ತಿದಿಂಬ, ಗುರಕಾರದೊಡ್ಡಿ ಮಂಚನದೊಡ್ಡಿ ಅಥವಾ ಮುತ್ತಪ್ಪನ ದೊಡ್ಡಿ, ಸಿಂಗಮ್ಮನ ದೊಡ್ಡಿ, ಕುಂಬಾರ ದೊಡ್ಡಿ ರಾಚಯ್ಯನ ದೊಡ್ಡಿ ಮತ್ತು ಇಲ್ಲಿಗರ ಕಾಲೋನಿ.

ಪ್ರತಿಯೊಂದು ಹಳ್ಳಿಗಳಿಗೂ ಒಬ್ಬೊಬ್ಬರಂತೆ ಕೂತಗೊಂಡೇನಹಳ್ಳಿಯ ಇರುಳಿಗ ಪೂಜಾರಿಗಳು ಹೋಗಿ ಆಯಾ ಊರಿನ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ,

ಮನೆ - ಮನೆಗಳಲ್ಲೂ ಪೂಜೆ ಮಾಡಿಸಿಕೊಂಡು ಕರೆದು ತರುತ್ತಾರೆ.

೧೧ ಒಕ್ಕಲಿಗರು, ಇರುಳಿಗರು, ಶೆಟ್ಟರು, ನಾಯಕರು, ಅಗಸರು, ಕುಂಬಾರರು, ಬೆಸ್ತರು, ಕಮ್ಮಾರ, ಅಕ್ಕಸಾಲಿ ಇತ್ಯಾದಿ.

೧೨ ಕಳ್ಳು ತನ್ನ ಅರ್ಥವನ್ನು ಇಂದು ಕಳೆದುಕೊಂಡಿದೆ. ಸಾರಾಯಿ ಪ್ಯಾಕೆಟ್ಟುಗಳು ಅದರ ಜಾಗವನ್ನು ಆಕ್ರಮಿಸಿಕೊಂಡಿವೆ. ಅಲ್ಲಿನ ಎಲ್ಲ ಜನರ ಪ್ರಕಾರ ಊರ ಹಬ್ಬದಲ್ಲಿ ಕೊನೆಯ ದಿನದೂಟವೇ ಭರ್ಜರಿ ಊಟ.

ಮಾಹಿತಿಗಾರರು

೧. ಕೆಂಪಮ್ಮ ೧೦೫ ವರ್ಷ, ಹೊಸಕೋಟೆ, ಇರುಳಿಗರು
೨ ಮೋಟಯ್ಯ ೮೦ ವರ್ಷ , ಕೂತಗೊಂಡನಹಳ್ಳಿ , ಇರುಳಿಗರು
೩ ಚಣ್ಣಯ್ಯ, ೩೩ ವರ್ಷ , " "
೪ ರಾಮಸ್ವಾಮಿ, ೪೫ ವರ್ಷ, " "

ಹಾಡುಗಾರ್ತಿಯರು

೧. ಚಿಕ್ಕೋಳಮ್ಮ, ೭೦ ವರ್ಷ, " "
೨. ತಿಮ್ಮಮ್ಮ , ೫೨ ವರ್ಷ, " "
೩. ಮುತ್ತಮ್ಮ , ೪೫ ವರ್ಷ, " "
೪. ರೇಣುಕಮ್ಮ , ೪೭ ವರ್ಷ, " "

ರಾಜಘಟ್ಟ - ಒಂದು ಪರಿಶೀಲನೆ

- ಎಂ.ಜಿ. ಮಂಜುನಾಥ, ಆರ್. ಜಗದೀಶ್

ದೊಡ್ಡ ಬಳ್ಳಾಪುರ ಬಳಿ ಪ್ರಾಚೀನ ನೆಲೆ ಪತ್ತೆ ಎಂಬ ಶೀರ್ಷಿಕೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ರಾಜಘಟ್ಟ ಎಂಬ ಗ್ರಾಮದಲ್ಲಿ ಆದಿ ಚರಿತ್ರ ಕಾಲಕ್ಕೆ ಸೇರಿದ (ಕ್ರಿ.ಶ. ೧ ಮತ್ತು ೨ನೆಯ ಶತಮಾನ) ಇಟ್ಟಿಗೆ ಕಟ್ಟಡಗಳುಳ್ಳ ಪ್ರಾಚೀನ ನೆಲೆಯೊಂದನ್ನು ಸಂಶೋಧಕರಾದ ಶ್ರಿ ಮೈಸೂರು ನಾಗರಾಜ ಶರ್ಮರು ಕಂಡುಹಿಡಿದ ಬಗ್ಗೆ ಇತ್ತೀಚೆಗೆ ದಿನಪತ್ರಿಕೆಗಳಲ್ಲಿ ಪ್ರಕಟವಾಗಿದೆ.[೧]

"ವಿಜಯನಗರ ಹಾಗೂ ಗಂಗರ ಕಾಲದಲ್ಲಿ ಬಳಸುತ್ತಿದ್ದ ಇಟ್ಟಿಗೆಗಳಿಗಿಂತ ರಾಜಘಟ್ಟದಲ್ಲಿ ದೊರೆತಿರುವ ಇಟ್ಟಿಗೆಗಳು ಗಾತ್ರದಲ್ಲಿ ದೊಡ್ಡದಾಗಿವೆ. ೪೦-೨೦-೬ ಸೆಂ.ಮೀ. ಗಾತ್ರದ ಇಟ್ಟಿಗೆಗಳನ್ನು ಆಗ ಬಳಸಲಾಗುತ್ತಿತ್ತು. ವಿದೇಶಿ ಪ್ರವಾಸಿ ಟಾಲೆಮಿಯ ಎ ಗೈಡ್ ಟು ಜಿಯಾಗ್ರಫಿ ಎಂಬ ಗ್ರಂಥದಲ್ಲಿ ಉಲ್ಲೇಖಿತವಾಗಿರುವ 'ಪುನ್ನಾಟ' ಎಂಬ ಪ್ರಾಚೀನನಗರದ ಲಕ್ಷಣಗಳೊಂದಿಗೆ ರಾಜಘಟ್ಟದಲ್ಲಿ ದೊರೆತಿರುವ ಅವಶೇಷಗಳು ಸಾಮ್ಯತೆ ಹೊಂದಿವೆ ಎಂದು ಶ್ರೀ ನಾಗರಾಜ ಶರ್ಮ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೨]

ಶ್ರೀ ನಾಗರಾಜ ಶರ್ಮರ ಈ ಅಭಿಪ್ರಾಯ ಸಂಪೂರ್ಣವಾಗಿ ತಪ್ಪೆಂದು ತೋರುತ್ತದೆ. ಏಕೆಂದರೆ ಟಾಲೆಮಿಯ ಕೃತಿಯಲ್ಲಿ ಉಕ್ತವಾಗಿರುವ 'ಪುನ್ನಾಟ'ವನ್ನು ಈಗಾಗಲೇ ವಿದ್ವಾಂಸರು ಖಚಿತವಾಗಿ ಗುರ್ತಿಸಿ ಅದೇ ಟಾಲೆಮಿಯು ಹೇಳಿರುವ ಪುನ್ನಾಟ ಎಂದು ನಿರ್ವಿವಾದವಾಗಿ ಸಾಧಿಸಿ ತೋರಿಸಿದ್ದಾರೆ. ಮೈಸೂರು ಜಿಲ್ಲೆ ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ಇಂದಿನ ಕಿತ್ತೂರು ಹಿಂದಿನ 'ಪುನ್ನಾಟ' ಎಂಬ ನಗರವಾಗಿತ್ತು. ಪುನ್ನಾಟದ ಅರಸರು ಎಂದು ಗುರ್ತಿಸಲ್ಪಡುವ ಒಂದು ಅರಸು ಮನೆತನದವರು ಈ ಪ್ರದೇಶವನ್ನು ಆಳುತ್ತಿದ್ದರು. ಈ ವಂಶಕ್ಕೆ ಸಂಬಂಧಿಸಿದ ಶಾಸನಗಳು ಲಭ್ಯವಾಗಿವೆ. ಆ ಶಾಸನಗಳ ಆಧಾರದ ಮೇಲೆ ಪುನ್ನಾಟದ ಅರಸರ ವಂಶಾವಳಿಯನ್ನು ವಿದ್ವಾಂಸರು

---

[೧] ಪ್ರಜಾವಾಣಿ ದಿನಪತ್ರಿಕೆ ನವೆಂಬರ್ ೬, ೧೯೯೭, ಪುಟ ೫.

[೨] ಪೂರ್ವೋಕ್ತ - ಅದೇ -

ಗುರ್ತಿಸಿದ್ದಾರೆ[1] ಕ್ರಿ.ಶ. ೪೦೫ರಲ್ಲಿ ವಿಷ್ಣುದಾಸನೆಂಬ ಅರಸನಿಂದ ಪ್ರಾರಂಭವಾದ ಪುನ್ನಾಟದ ಅರಸರ ಆಳ್ವಿಕೆಯು ಕ್ರಿ.ಶ. ೫೫೦ ರವರೆಗೂ ಇಮ್ಮಡಿ ಸ್ಕಂದವರ್ಮನವರೆಗೂ ಮುಂದುವರೆದಿದ್ದು ಸ್ಕಂದವರ್ಮನ ನಂತರ ಆತನ ಮಗಳ ಮಗನಾದ ದುರ್ವಿನೀತನ ವಶವಾದುದು ಶಾಸನಗಳಿಂದ ತಿಳಿದುಬರುತ್ತದೆ.

ಶಾಸನಗಳಲ್ಲಿ ಪುನ್ನಾಟವನ್ನು 'ಪುಂರಾಷ್ಟ್ರ' ಎಂದೂ ಕರೆದಿರುವ ಉದಾಹರಣೆಗಳಿವೆ. ಈ ಶಾಸನಗಳಲ್ಲಿ ಪುನ್ನಾಟದ ಭೌಗೋಳಿಕ ವಿವರಣೆಯೂ ದೊರೆಯುತ್ತದೆ. ಅದು ಕಾವೇರಿ ಹಾಗೂ ಕಪಿನೀ ನದಿಗಳಿಂದ ಶೋಭಿಸುತ್ತಿತ್ತೆಂದು ಹೇಳಲಾಗಿದೆ[2]. ಕಾವೇರಿ ಹಾಗೂ ಕಪಿನೀ ನದಿಗಳಿಂದ ಶೋಭಿಸುತ್ತಿರುವುದು ಪುನ್ನಾಟವೆಂಬುದು ಖಚಿತವಾಗಿರುವುದರಿಂದ ರಾಜಘಟ್ಟವನ್ನು ಪುನ್ನಾಟ ಎಂದು ಗುರ್ತಿಸಲು ಪ್ರಯತ್ನಿಸುವುದು ಅರ್ಥಹೀನ ಪ್ರಯತ್ನವೆನ್ನಿಸುತ್ತದೆ.

ತಾಮ್ರಕಶ್ಯಪ ಕುಲಕ್ಕೆ ಸೇರಿದ ಪುನ್ನಾಟದ ಅರಸನಾದ ಇಮ್ಮಡಿ ಸ್ಕಂದವರ್ಮ (ಕ್ರಿ.ಶ. ೫೨೫-೫೫೦) ನು ತನ್ನ ಮಗಳನ್ನು ಗಂಗರ ಅವಿನೀತನಿಗೆ ಕೊಟ್ಟು ವಿವಾಹ ಮಾಡಿದ್ದನು. ಸ್ಕಂದವರ್ಮನ ಮರಣಾನಂತರ ಆತನ ಮಗಳ ಮಗನಾದ ಗಂಗ ದುರ್ವಿನೀತನು ಕ್ರಿ.ಶ. ೫೫೦ ರ ನಂತರ ತನ್ನ ತಾತನ ರಾಜ್ಯವಾದ ಪುನ್ನಾಟಕ್ಕೂ ಅಧಿಪತಿಯಾದನು.

ರಾಜಘಟ್ಟದಲ್ಲಿರುವ ಒಂದು ಶಾಸನವು ಶ್ರೀ ನಾಗರಾಜಶರ್ಮರು ರಾಜಘಟ್ಟವನ್ನು ಪುನ್ನಾಟ ಎಂದು ತಪ್ಪಾಗಿ ಗುರುತಿಸುವಂತೆ ಪ್ರೇರೇಪಿಸಲು ಕಾರಣವಾಗಿರಬಹುದು. ಆ ಶಾಸನದಲ್ಲಿನ ಎಂಟನೆಯ ಸಾಲಿನಲ್ಲಿ

(೮) XXX ವರ್ಮರು ಪುಣ್ನಾಡ
(೯) ಯ ಪತ್ತ ನಾಡವರ ಸಂ
(೧೦) ಕಥಾ ವಿನೋದ ದಿಂ ರಾಜ್ಯಂ
(೧೧) ಗೆಯ್ಯುತ್ತಿರಲು[3] ಎಂಬ ಬರಹವಿದೆ

ಆದರೆ ಪ್ರಸ್ತುತ ಶಾಸನದಲ್ಲಿ ಹಲವಾರು ತಪ್ಪುಗಳಿವೆ. ಇದು ಬಹುಶಃ ಕಂಡರಣೆ

---

[1] ಇ.ಸಿ. ೩ ಸಂ., ಬಾರಾಗೋಪಾಲ ಪೀಠಿಕೆ, ಪುಟ ೬೩

[2] ಇಸಿ ೩, ಸಂ. ಡಾ. ಬಾ.ರಾ. ಗೋಪಾಲ, ಪುಟ ೬೨

[3] ಇ.ಸಿ. ೯ ಸಂ. ಬಿ.ಎಲ್. ರೈಸ್ ದೊಡ್ಡಬಳ್ಳಾಪುರ ೩೮ (ಕ್ರಿ.ಶ. ೧೩೨೯) ಪುಟ ೧೪೭

ಕಾರನ ದೋಷವಿರಬಹುದೆಂದು ತೋರುತ್ತದೆ. ಈ ಸಾಲುಗಳ ಭಾಗದಲ್ಲಿ 'ಶ್ರೀ ವೀರಬಲ್ಲಾಳ ದೇವರ್ಸ್ವರು ತಿರುವುಣಾಮಲೆ ಪಟ್ಟಣದಲಿ ಸುಖ ಸಂಕಥಾವಿನೋದ ದಿಂ ರಾಜ್ಯಂಗೆಯ್ಯುತ್ತಿರಲು' ಎಂಬ ಬರಹವಿರಬೇಕಾಗಿತ್ತು. ಇದಕ್ಕೆ ಆಧಾರವಾಗಿ ರಾಜಘಟ್ಟದ ಸನಿಹದಲ್ಲಿಯೇ ಇರುವಂತಹ ಕುರಿವಿಗೆರೆಯ ಶಾಸನವೊಂದನ್ನು ಗಮನಿಸಬಹುದು. ಪ್ರಸ್ತುತ ರಾಜಘಟ್ಟದ ಶಾಸನ ರಚನೆಯಾದ ದಿನದಂದೇ ಕುರಿವಿಗೆರೆಯ ಶಾಸನವೂ ರಚನೆಯಾಗಿರುವುದು ಗಮನಾರ್ಹ ಅಂಶ [೧].

ಆ ಶಾಸನದಲ್ಲಿ

೧. ಸ್ವಸ್ತಿ ಶ್ರೀಮತುಸಕವ

೨. ರುಷ ೧೨೫೧ನೇ ವಿಭವ ಸಂವತ್ಸರ

೩. ಶ್ರಾವಣ ಸು. ೧೫ ಶು ವಾರದಂದು

೪. ..... ಪ್ರತಾಪ ಚಕ್ರವರ್ತಿ ಪೋಯಿ

೫. ಸಳ ಶ್ರೀ ವೀರಬಲ್ಲಾಳ ದೇವರ್ಸ್ವರು

೬. ವುಂಣಾಮಲೆಪಟ್ಟಣದಲಿ ಸುಖ

೭. ಸಂಕಥಾವಿನೋದದಿಂ ರಾಜ್ಯ

೮. ಂಗೆಯುತ್ತಂಶ್ರೀಮನು ಮಹಾ

೯. ಪ್ರಧಾನಂ ... ಹೀಗೇ ಶಾಸನ ಮುಂದುವರೆಯುತ್ತದೆ.

ರಾಜಘಟ್ಟದ ಶಾಸನವೂ ಸಹ ಸಂಪೂರ್ಣವಾಗಿ ಇದೇ ರೀತಿಯ ಪಾಠವನ್ನು ಹೊಂದಿದೆ. ಸಂಪೂರ್ಣವಾಗಿ ಇದೇ ಕಾಲದ್ದಾಗಿದೆ. ಶಕವರುಷ ೧೨೫೧ ನೆಯ ವಿಭವ ಸಂವತ್ಸರ ಶ್ರಾವಣ ಮಾಸ ಶು ೧೫ ರಂದೇ ಇದೂ ಬರೆಯಲ್ಪಟ್ಟಿದೆ. ಆದರೆ ಕಂಡರಣೆಕಾರನ ದೋಷದಿಂದಾಗಿ 'ವುಂಣಾಮಲೆ ಪಟ್ಟಣದಲಿ ಸುಖ ಸಂಕಥಾ ವಿನೋದದಿಂ '[೨] ಎಂಬಲ್ಲಿ ಆಕಸ್ಮಿಕವಾಗಿ "ಪುಣ್ಣಾಡಯ ಪತ್ತನಾಡ ವರಸಂ "ಎಂದು ದೋಷಯುಕ್ತವಾಗಿ ಲಿಖಿತವಾಗಿದೆ. ಈ ಅಂಶವನ್ನು ಸರಿಯಾಗಿ ಪರಿಶೀಲಿಸದೆ ನಾಗರಾಜ ಶರ್ಮರು ಇದು ಟಾಲೆಮಿಯ ಕೃತಿಯಲ್ಲಿ ಉಕ್ತವಾದ ಪುನ್ನಾಟ ಎಂದು ತಪ್ಪಾಗಿ ಗುರುತಿಸಿದ್ದಾರೆಂದು ತೋರುತ್ತದೆ.

[೧] ಇಸಿ ೯ ಸಂ. ಬಿ.ಎಲ್. ರೈಸ್ ದೊಡ್ಡ ಬಳ್ಳಾಪುರ, ೧೮, ಕ್ರಿ.ಶ. ೧೩೨೯, ಪುಟ ೧೩೪

[೨] ವುಣಾಮಲೆ ಪಟ್ಟಣ ಎಂದರೆ ತಿರುವಣಾಮಲೈ ಇದು ತಮಿಳುನಾಡಿನಲ್ಲಿದೆ. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಇದು ಒಂದು ನೆಲೆವೀಡಾಗಿತ್ತು. (ರಾಜಧಾನಿಯಾಗಿತ್ತು)

ಹಿರಿಯ ವಿದ್ವಾಂಸರಾದ ಡಾ. ಎ.ವಿ. ನರಸಿಂಹಮೂರ್ತಿಯವರು "ರಾಜಘಟ್ಟ ಎಂದರೆ ಹಿಂದಿನ ಪ್ರಮುಖ ವಾಣಿಜ್ಯ ಮಾರ್ಗ ಅಥವಾ ರಾಜಮಾರ್ಗದಲ್ಲಿ ಇರುತ್ತಿದ್ದ ತಂಗುದಾಣ ಎಂಬರ್ಥ, ಈ ಅರ್ಥ ಮತ್ತು ಹೊಸಶೋಧನೆಯ ಹಿನ್ನೆಲೆಯಲ್ಲಿ ಬೆಂಗಳೂರಿನ ಎಚ್.ಎ.ಎಲ್. ಬಡಾವಣೆ ಹಾಗೂ ಯಶವಂತಪುರ ಬಳಿ ಎರಡುಸಾವಿರ ವರ್ಷಗಳ ಹಿಂದೆ ಇದ್ದಿತೆನ್ನಲಾದ ರೋಮನ್ನರ ತಾತ್ಕಾಲಿಕ ಕಾಲೋನಿಗಳಿಗೂ ರಾಜಘಟ್ಟಕ್ಕೂ ಸಂಬಂಧವಿರುವುದಾಗಿ" ಅಭಿಪ್ರಾಯಿಸಿದ್ದಾರೆ[೧].

ಆದರೆ ಶ್ರೀ ನರಸಿಂಹ ಮೂರ್ತಿಯವರ ರಾಜಘಟ್ಟ ಸ್ಥಳನಾಮದ ಬಗೆಗಿನ ಅರ್ಥೈಸುವಿಕೆ ಸರಿಯೆಂದು ತೋರುವುದಿಲ್ಲ. ದೊಡ್ಡ ಬಳ್ಳಾಪುರ ತಾಲ್ಲೂಕು ಬೆಟ್ಟ, ಗುಡ್ಡ, ಕಣಿವೆಗಳಿಂದ ಕೂಡಿರುವ ಪ್ರದೇಶ. ಘಟ್ಟ ಎಂದರೆ ಗುಡ್ಡ, ಬೆಟ್ಟ ಎಂದರ್ಥ. ರಾಜಘಟ್ಟದ ಅಕ್ಕಪಕ್ಕಗಳಲ್ಲಿ ಘಟ್ಟ ಎಂದು ಅಂತ್ಯವಾಗುವ ಹಲವಾರು ಊರುಗಳಿವೆ. ಕೊಣಘಟ್ಟ, ಕಸವಘಟ್ಟ, ಮುಪಡಿಘಟ್ಟ ಇತ್ಯಾದಿ. ರಾಜಘಟ್ಟದ ಹತ್ತಿರದಲ್ಲಿಯೇ ಘಾಟಿ ಸುಬ್ರಹ್ಮಣ್ಯವೂ ಇದೆ. (ಘಾಟಿ > ಘಟ್ಟ). ಅದೇ ಪ್ರದೇಶದಲ್ಲಿಯೇ ಗುಡ್ಡ ಎಂಬ ಅರ್ಥವನ್ನೇ ನೀಡುವ ಮಲೆ ಕೋಟೆ (ಮಲೆ = ಬೆಟ್ಟ, ಗುಡ್ಡ) ನಂದಿಕುಂದ (ಗುಂದ > ಕುಂದ =ಗುಡ್ಡ, ಬೆಟ್ಟ) ಮುಂತಾದ ಊರುಗಳಿವೆ. ರಾಜಘಟ್ಟ ಎಂದರೆ ಎತ್ತರವಾದ, ದೊಡ್ಡದಾದ ಗುಡ್ಡ ಎಂದರ್ಥ, ದೊಡ್ಡಗುಡ್ಡವೊಂದರ ಸನಿಹದಲ್ಲಿರುವುದೇ ಇಂದಿನ ರಾಜಘಟ್ಟ ಗ್ರಾಮ. ಪಶ್ಚಿಮಘಟ್ಟ, ಬನ್ನೇರುಘಟ್ಟ, ಕೊಮ್ಮಘಟ್ಟ, ಕತ್ತರಿಘಟ್ಟ ಮುಂತಾದ ಹೆಸರುಗಳನ್ನು ಗಮನಿಸಿದರೆ ರಾಜಘಟ್ಟದ ಹಿನ್ನೆಲೆ ಅರ್ಥವಾಗುತ್ತದೆ.

ಶ್ರೀ ನಾಗರಾಜ ಶರ್ಮರು ೪೦-೨೦-೬ ಸೆಂ.ಮೀ. ಗಾತ್ರದ ಇಟ್ಟಿಗೆಗಳನ್ನು ಆದಿ ಚರಿತ್ರ ಕಾಲದಲ್ಲಿ ಬಳಸಲಾಗುತ್ತಿತ್ತು ಎಂದು ಅಭಿಪ್ರಾಯಿಸಿದ್ದಾರೆ[೨]. ಆದರೆ ಗಂಗರ ಕಟ್ಟಡಗಳಲ್ಲಿ ಈ ಗಾತ್ರದ ಇಟ್ಟಿಗೆಗಳನ್ನು ಬಳಸುತ್ತಿದ್ದುದನ್ನು ಗುರ್ತಿಸ ಬಹುದಾಗಿದೆ. ರಾಜಘಟ್ಟದ ಹತ್ತಿರದಲ್ಲಿಯೇ ಇರುವ ಮಣ್ಣೆಯು ಕ್ರಿ.ಶ. ೮ನೆಯ ಶತಮಾನದ ಕಾಲದಲ್ಲಿ ಗಂಗರ ರಾಜಧಾನಿಯಾಗಿತ್ತು. ಮಣ್ಣೆಯ ಗಂಗರ ಅವಶೇಷಗಳಲ್ಲಿ, ಗಂಗವಾರದಲ್ಲಿ , ಅರೆತಿಪ್ಪೂರಿನ ಅವಶೇಷಗಳಲ್ಲಿ ಮುಂತಾದ ಗಂಗರ ಪ್ರಾಚೀನ ಅವಶೇಷಗಳು ದೊರೆತಿರುವ ಸ್ಥಳಗಳಲ್ಲಿ ೪೦-೨೦-೬ ಸೆಂ.ಮೀ. ಅಳತೆಯ ಇಟ್ಟಿಗೆಗಳು

---

೧. ಪ್ರಜಾವಾಣಿ ದಿನಪತ್ರಿಕೆ , ಪೂರ್ವೋಕ್ತ ಪುಟ ೫

೨ ಪ್ರಜಾವಾಣಿ , ಪೂರ್ವೋಕ್ತ

ದೊರೆಯುತ್ತವೆ. ರಾಜಘಟ್ಟದಲ್ಲಿಯೂ ಸಹ ಗಂಗರ ಕಾಲದ ಶಿವಲಿಂಗ ಮತ್ತಿತರ ಅವಶೇಷಗಳು ದೊರೆತಿವೆ [೧]. ಆದ್ದರಿಂದ ರಾಜಘಟ್ಟದಲ್ಲಿ ಪ್ರಸ್ತುತ ದೊರೆತಿರುವ ಪ್ರಾಚೀನ ನೆಲೆಯು ಗಂಗರ ಕಾಲದ ನೆಲೆಯೆಂದು ತೋರುತ್ತದೆ. ಈ ಬಗ್ಗೆ ವಿದ್ವಾಂಸರು ಮತ್ತಷ್ಟು ಹೆಚ್ಚಿನ ಬೆಳಕು ಚೆಲ್ಲುವರೆಂದು ಆಶಿಸೋಣವೇ?

[೧] ಸಂಯುಕ್ತ ಕರ್ನಾಟಕ ದಿನಪತ್ರಿಕೆ , ಸಾಸಲು ಜೆ. ವಿಶ್ವನಾಥ್, ಕನ್ನಡ ಪ್ರಭ, ೧೭-೧೧-೧೯೯೫

ಎರಡು ಅಪ್ರಕಟಿತ ಸ್ವರವಚನಗಳು

- (ಸಂ) ಎಸ್. ಶಿವಣ್ಣ

ಏಕೋತ್ತರದ ಚೆನ್ನವೀರೇಶ್ವರ ಸ್ವರವಚನದ ಕರ್ತೃ ಅಜ್ಞಾತ. ಈ ಅಂಕಿತದಲ್ಲಿನ ವ್ಯಕ್ತಿಯ ಉಲ್ಲೇಖ ಸಂಪಾದನೆ ಪರ್ವತೇಶ್ವರನ (೧೬೯೮) ಚತುರಾಚಾರ್ಯ ಪುರಾಣ (ಸಂ. ಎನ್. ಬಸವಾರಾಧ್ಯ, ಮೈಸೂರು, ೧೯೮೫, ೧೬-೮-೪೪) ದಲ್ಲಿದೆ. ಹೀಗಾಗಿ ಈ ಅಜ್ಞಾತ ಕೃತಿಕಾರನ ಕಾಲ ಸು. ೧೭೦೦.

'ಶಿವನಾಮ ಸ್ತೋತ್ರ'ದ ಕರ್ತೃ ಬೆರಟೂರಪತಿ ವೃಷಭೇಷ ಅಂಕಿತದ ಬೆರಟೂರ ಕರಿಬಸವ . ಈತನ ಕಾಲ ಸು. ೧೭೫೦.

ಈತನ ಇತರ ರಚನೆಗಳು ಇಂತಿವೆ

೧. ಗಣಾಷ್ಟಕ

೨. ಚಿತ್ರಶೇಖರ ಸೋಮಶೇಖರ ಚೌಪದನ

೪. ಪಾದಾಷ್ಟಕ

೪. ಪಾರಿಜಾತದ ಪದ

ಈತನ ೬ ಸ್ವರವಚನಗಳು ಸ್ವರ ವಚನ ಸಂಪುಟ ೨ (ಸಂ. ಎಸ್. ಶಿವಣ್ಣ, ಮೈಸೂರು ೧೯೯೫, ಪು. ೧೪೬ -೧೫೦) ರಲ್ಲಿ ಪ್ರಕಟವಾಗಿವೆ.

ಏಳು ಗುರುಕರದಿಷ್ಟಲಿಂಗ ಮಾರುತಿ ಏಳು
ಏಳು ಏಳೇಳಿಂದ್ರಿಯಂಗಳಾಣ್ಮನೆ ಏಳು
ಏಳು ಜನ್ಮದ ದೋಷಗಳ ಪರಿದು ಸುಖವಿತ್ತ
ಏಳು ಶಕ್ತಿಗಳರಸನೆ ||ಪಲ್ಲವಿ ||

ಹೊತ್ತು ಹುಟ್ಟದ ಮುನ್ನ ಲತ್ತು ಜಾವದೊಳೆದ್ದು
ಸ್ವಸ್ಥ ಪದ್ಮಾಸನದಿ ಕುಳಿತಿರ್ದು ಬಳಿಕತಾಂ
ಚಿತ್ತಜಾರಿಯ ನೆನದು ಹಸ್ತಕಮಲಗಳ ನೆರಡನೊತ್ತಿ
ಮಥನ ಮಾಡುವ
ನೆತ್ತಿ ಪಾದದಿ (ತ)ಡಹಿ ಲೋಮಾದಿ ಲೋಮದಿಂ

ಮತ್ತೆ ಶಿವಮಂತ್ರಮಂ ಜಿಹ್ವೆಯೊಳು ಸ್ಮರಿಸುತ್ತ
ಉತ್ತನಂಗೈದೈದು ಲಿಂಗಮುಖಮಂ ನೋಡೆ ಮೃತ್ಯುಭಯ ನಾಶವಹುದು-೧

ಅಲ್ಲಿಂದ ನಡೆತಂದು ಸುರಗಿ ಶಾವಂತಿಗೆಯು
ಮಲ್ಲಿಗೆಯು ಜಾಜಿ ಸಂಪಿಗೆ ಪಚ್ಚೆ ಅದ್ನಗಂಚಿ
ಸಲ್ಲಲಿತಮಾದ ಕರವೀರ ಮರುಗವು ದವನ ಗೋರಟೆ ಮಾವು ತುಂಬೆ ಗರಿಕೆ
ಮೊಲ್ಲೆಯುಂ ಮುಡಿವಾಳ ದಾಸ್ವಾಳ ಕೇತಗೆಯು
ಬಿಲ್ವಪತ್ರೆಯು ಮಂಚಪತ್ರೆ ದರ್ಭೆಯ ಪತ್ರೆ
ಮೇಲ್ಪತರ ನೀರ್ಗುಂಡಿಪತ್ರೆ ಕಕ್ಕೆಯ ಪತ್ರೆಯೆಲ್ಲರೊಳು ಎಡೆಮಾಡೀ - ೨

ಮಡುವಿನಗ್ಫಣಿಯ ಮಿಗೆ ಸಡಗರದಿ ಮೊಗೆತಂದು
ಗಡಿಗೆಯೊಳಿಟ್ಟು ಮತ್ತಗ್ನಿಯಂ ಪುಟಮಾಡಿ
ಬಿಡದೆ ಕಟ ಕಂಠ ಸರ್ವಾಂಗ ಸ್ನಾನವ ಮಾಡಿ ಮಡಿಹೊದಕೆ ಹೊದೆದುಕೊಳುತ
ಕಡು ಚೆಲುವಿನಿಂದ ಗುಡಿ ತೋರಣಂಗಳ ಕಟ್ಟಿ
ದೃಢದಿಂದ ನಿಂದು ಪೂಜೆ ಸಮ್ಮಾರ್ಜನೆಯು ಮಾಡಿ
ಎಡವಿಡದೆ ಚಿತ್ರದಿಂ ರಂಗವಾಲಿಯ ರಚಿಸಿ ಬಳಿಕ (೨) - ೩

ಪದುಳದಿಂ ರತುನಗಂಬಳಿಯ ಗದ್ದುಗೆಯಿಕ್ಕಿ
ಯದರಿಂದ ತಟ್ಟೆ ಬಚ್ಚಲು ಸಿಂಬಿ ಪಾಸಲೆ (ಯ) (ನು)
ವದಳನಿಂ ಬೆಳಗಿ ಪೇ್ರಮತು ತೊಳತಂದು ಉಪಕರಣಗ (ನು) ಮಡಗಿಕೊಳುತ
ಸದಮಲದ ಪಾ*(ದು)*ದಕ+ ಮಂತ್ರಭಸ್ಮೋದಕ ತ್ರಿ
ವಿಧೋದಕವನಿವಕ್ಕೆ ತುಂಬಿ ತಾ ಮುದದಿಂದ
ಬಂದು ಗದ್ದುಗೆಯ ಮೇಲೆ ಸ್ವಸ್ಥ ದಾಸನದಿ ಕುಳಿತು ಕೊಂಡು
ಚಿತ್ತೆಂಬ ಚಿದ್ಭಸಿತಮಂ ವೇಣುಮುದ್ರೆಯಿಂ
ದೆತ್ತಿ ತನ್ನ ಹಸ್ತದಿ ಮಡಗಿ ಜಲಮಿಶ್ರ

---

* ೨ ರ ದಿಂದ ; ೧ ದೋ ೧ +ವು, + ವು ಮಂಬ

ವಿತ್ತು ಪುಷ್ಪವಧರಿಸಿ ಬಲದೊಡೆಯ ಮೇಲೆ ಕೈಮುಚ್ಚಿ ಪನ್ನೊಂದು ವೇಳೆ
ಮತ್ತೆ ಮಂತ್ರಿಸಿಸ್ಥಾನಧಾರಣೋ ದ್ಧೂಳನದಿಂ
ಬತ್ತೀಸ ಷೋಡಶಸ್ಥಾನ ಲಲಾಟ ತತ್ತ
ಸ್ಥಾನವ ತಿಳಿದು ತ್ರೈಪುಂಡ್ರಮಂ ಬಿಡದೆ ನಿತ್ಯದೊಳು ಧರಿಸುವಲ್ಲಿ -೫

ನೆತ್ತಿಯೊಳು ಮೂರು ಶಿಖೆಯೊಳಗೊಂದು ಸಿರದಿ ಮೂ
ವತ್ತಾರು ಗಳದಿ ಮೂವತ್ತೆರಡು ಉರದಲ್ಲಿ
ಪ್ಪತ್ತು ಮುಂಗೈದೋಳನವನೀ ದ್ವಾದಶವು ಕರ್ನದಲಿ ಯುಗಳ
ಮತ್ತಲ್ಲಿ ಐವತ್ತು ನಾಲ್ಕು ಯಿಮ್ಮಡಿಯಾಗಿ
ಸಪ್ತವಿಂಶತಿಯ ಸಾಲ್ಕಡಿ ಜಪವುಯುಪವೀತ
ಚಿತ್ತದೊಳಗರಿದು ಶ್ರೀರುದ್ರಾಕ್ಷಿಗಳನಲ್ಲಿ ಬಿತ್ತರದಿ ಧರಿಸಿ ಕೊಳುತಿಪ್ಪ -೬

ಒಂದೆಯಗ್ಫಣೆಯೊಂದೆ ಕಳಮದಕ್ಷತೆಯೊಂದೆ
ಒಂದೆಪುಷ್ಪವು ಮತ್ತದೊಂದೆ ಧೂಪಾರತಿಯು
ಒಂದೆ ದೀಪವು ಒಂದೇ ನೈವೇದ್ಯ ತಾಂಬೂಲ ಷೋಡಶೋಪಚಾರಗಳದು
ಕುಂದದೇಕೋತ್ತರದ ಚೆನ್ನವೀರೇಶ್ವರನೆ
ಹಿಂದೆ ಹೇಳಿದ ಪೂಜೆ ಕ್ರಮದಿಂದ ನಾನೀಗ
ಸಂದಳಿದು ಶಿವಲಿಂಗ ಪೂಜೆಗೆಡೆ ಮಾಡೆಂದು ವಂದಿಸಿದೆ ನೀಳಭವನೆ -೭

ಬೆರಟೂರ ಕರಿಬಸವನ ಶಿವನಾಮ ಸ್ತೋತ್ರ

ನಾಮಭಜೆ ಹರ ನಾಮ ಭಜೆ ಶಿವ
ನಾಮ ಭಜೆ ಗುರು ನಾಮ ಭಜೆ || ಪಲ್ಲವಿ ||
ಅಕ್ಷಯ ಪಾತ್ರ ಮಹೋಕ್ಷವಹನ ಜಗ
ದ್ರಕ್ಷ ಶಿಕ್ಷವರ ನಾಮಭಜೆ
ದಕ್ಷಕೃತಯಾಗಶಿಕ್ಷ ನುತಗುಣ
ಮೋಕ್ಷಯಿದಾಯಕ ನಾಮಭಜೆ -೧ -

ಮಂಡಿತ ಮೇರುಕೋದಂಡ ವಹನ ಸುಖ
ದಂಡಿತ ದಾನವ ನಾಮಭಜೆ
ರುಂಡಮಾಲ ಕೋದಂಡ ಕನಕಗಿರಿ
ಶ್ಚಂಡಿ ಯೋಗಿವರ ನಾಮ ಭಜೆ
ಅಂಬಾ ಮನೋಹರ ಕಂಬುಗ್ರೀವ ಶಿವ
ಅಂಬುಜಟಾಧರ ನಾಮಭಜೆ
ಅಂಬರಕೇಶ ದಿಗಂಬರ ಪೂರಿತ
ಲಂಬೋದರ ನಾಮಭಜೆ
ಗಾಪ್ರ ಭಸಿತಧರ ಸ್ತೋತ್ರ ಫಣಿವರ
ನೇತ್ರ ಸಂಜೀವನ ನಾಮ ಭಜೆ
ಸೂತ್ರ ಸಂಜೀವನೆ ಧಾತ್ರಪರಾಮಂ
ಕ್ಷೇತ್ರಪಾಲಿಪ ವರ ನಾಮಭಜೆ - ೪

ಧಾಮ ನಿಧಿವರ ಸೋಮ ಕಳಾಧರ
ಭೀಮ ಪರುಷಖಂಡ ನಾಮಭಜೆ
ಕಮ ನಿರ್ದೂಮ ಶ್ರೀರಾಮ ನುತಪದ
ಸಾಮಗಾನ ಲೋಲ ನಾಮಭಜೆ-೫

ಪುಂಗವ ಮುನಿ ಸಾರಂಗಧರ ಶಿವ
ಲಂಗಕರೋದ್ಭವ ನಾಮಭಜೆ
ಭಂಗದ್ವೈತ್ಕರಮಳಾಂಗ ಹೇಮವತಿ
ತುಂಗ ಪಾಂಡುರಂಗ ನಾಮಭಜೆ -೬
ತೋಯಜನಭನ ನೇತ್ರ ಪದಾಂಕಿತ
ರಾಯಧರ್ಮಸಖ ನಾಮಭಜೆ
ಜೀವ ಸುಖಾನಂದಾಲಯ ಮೃತ್ಯುಂಜಯ
ಮಾಯಾಕೋಳಾಹಳ ನಾಮಭಜೆ -೭

ಪಂಚವದನ ದಶಪಂಚಲೋಚನ
ಪಂಚ ಪಂಚ ಶಿವ ನಾಮ ಭಜೆ
ಸಂಚಿತಕರ್ಮ ಜೀವನಾತ್ಮನಾ ಪರ
ಪಂಚತತ್ತ್ವ ಪರನಾಮಭಜೆ - ೮

ಜ್ವಾಲಾಮಾಲಪ್ರಭಾವ ತಟಿತ್ಕೋಟಿ
ಕಳೇವರ ಶೋಭಿತ ನಾಮಭಜೆ
ನಳಿನಾಪವಂತರಾಳದಿ ಬೆಳಗುವ
ನೀಲಕಂಠ ದಿವ್ಯ ನಾಮಭಜೆ -೯

ಅತ್ಯತಿಷ್ಠದಶಾಂಗುಲ ಮೀರಿ ತೋರುವ
ಸತ್ಯ ಸ್ವಯಂ ಜ್ಯೋತಿ ನಾಮಭಜೆ
ಸತ್ತುಚಿತ್ತಾನಂದ ನಿತ್ಯ ಪರಿಪೂರ್ಣನೆ
ಅತೆಂತ - ವ- (?) ಶಿವನಾಮ ಭಜೆ - ೧೦

ಶಿವಮನ್ಮಹಾದೇವ ಹರಮನ್ಮಹಾದೇವ ಗು
ರುಮನ್ಮಹಾದೇವ ನಾಮಭಜೆ
ಶಿವದೀಕ್ಷ ಹರದೀಕ್ಷ ಗುರು ಮೋಕ್ಷವರನೆಂದು
ಶಿವನೇ ಕೋಭಾವನ ನಾಮಭಜೆ - ೧೧

ನಗರೋದಧಿಕನೆಂದು ನಗರೋದಧಿಕನೆಂದು
ಶಿವನೇಕೋದೇವನ ನಾಮಭಜೆ
ಭೋಗಿಕಂಕಣ ಭರ್ಗಭಕ್ತಿ ವತ್ಸಲ ಶಂಭು
ರಾಗರಹಿತ ಶಿವ ನಾಮಭಜೆ - ೧೨

ನಿಗಮತ-ರಗ ನಿರಂಗ ಶೂಲಪಾಣಿ
ಭಗವ(ಂ)ತನ ರುದ್ರನ ನಾಮಭಜೆ
ಅಗಣಿತ ದಂಡಾಭರಣ ಸನ್ಮೋಹಿತ
ಖಗಕೋಟಿತೇಜ ನಾಮಭಜೆ - ೧೩

ಕಾಲಮಕಾಲ ದಕ್ಷಾಧ್ವರ ತ್ರಿಪುರಹರ
ನಾಮದೇಸಿಕ ಶಿವ ನಾಮಭಜೆ
ಭಸ್ಮ ಭವಾಂತರ ಸೊನ್ನೆಚಿವರ್ತಿತ
ಶಿವ ಯತಿ ಮಂಗಲ ನಾಮಭಜೆ - ೧೪

ಈಶ ಸರ್ವೇಶ ಮಹೇಶ ಮೃಡನೀಶ
ದೇಶ ಪ್ರಾಣೇಶನ ನಾಮಭಜೆ
ದೇಶಿಕ ಬೆರಟೂರಪತಿ ವೃಷಭೇಶನ
ಶೇಷಾಮೃತ ಶಿವ ನಾಮಭಜೆ

ಆಕರ (೮) ೧೩೯೧ (೪೭ ಹಿಂ. ಗೌಂ.)- ೧೫

ಬಿಸಿಲುಗುದುರೆ

- ಹೊ.ನ. ನೀಲಕಂಠೇಗೌಡ

ಇಪ್ಪತ್ತ ಮೂರು ವಸಂತಗಳಲಿ
ಉದುರದೆ, ಉಳಿದಿದ್ದೆ
ಕನಸುಗಳ ಗಾಳಿ ಧೂಳಿಗೆ ತೂರಿ
' ಸಹರಾ ' ನೆಲದಲ್ಲಿಯ
ಪುಟ್ಟ ಪುರ್ಲೆಯ ತೆರ
ಬರಡಾಗಿ ಬಯಕೆ
ಹಿಂಗಿತ್ತು

ಎಲ್ಲಿತ್ತೋ?
ಬಸಿರಾದದ್ದು, ಎದುರುಹಾದು
ಹೋದದ್ದು ಹೊರಟೇ ಬಿಟ್ಟಿತು
ಉತ್ತಿ, ಬಿತ್ತಿದ ತೆರದಿ, ನೆನೆದು
ಮೊಳಕೆ, ಮತ್ತೆ ಸೋನೆ
ಇಣುಕಿ ಅಂಕುರ
ಪಲ್ಲವಚಯ ಮೂಡಿದಾಗ
ನಿದ್ದೆ ಬಾರದ ಕಣ್ಣಬಿಂಬದೊಳಗೆ
ಅಂಗಾಂಗ ಪೂರ ರೇಖೆ
ರೇಖೆಗಳಿಂದ ಚಿತ್ರ ಕೆತ್ತಿದ ಚಿತ್ತ

ಅವಳೆದೆಯ ಗೂಡೊಳಗೆ ನಾ
ಗುಡಿಕಟ್ಟಿ ಪೂಜಾರಿಯಂತೆ
ಕುಣಿದೆ
ನೀಲಿಜಗಲಿಯ ಮೇಲೆ

ಮಲಗಿದವಳೆದೆಗೆ
ಚಿತ್ತ ಹತ್ತುವಾಗ ಎಡವಿ
ಮತ್ತೆ ಮುನ್ನುಗ್ಗಿದಾಗ
ನೆಲ ತಬ್ಬಿದ
ಮುಂಗಾರು ಬಿದ್ದ ನೆಲದಲೆಲ್ಲಾ
ಮೈಗಂಟಿದ ಮಣ್ಣು, ಬಯಕೆ
ಬಸಿರಾದ ಉಸಿರು
ಪಾತವಾದಾಗ ಚಿತ್ತ ಅತ್ತಿಯ ಹಣ್ಣು
ಬಿಸಿಲುಗುದುರೆಯ ಏರಲು
ವಯಸು ಕತ್ತರಿಸಬೇಕಿದೆ
ಮನಸು

*

" ಗೋವಿನ ಹಾಡಿನ ಮೂಲ " ?

ಧರಣಿ ಮಂಡಲ ಮಧ್ಯದೊಳಗೆ.... "ಗೋವಿನ ಕಥೆ" (ಪುಣ್ಯ ಕೋಟಿ ಹಸುವಿನ ಕಥೆ) ಕನ್ನಡ ನಾಡಿನಲ್ಲಿ ಜನಜನಿತವಾಗಿರುವ ಸಂಗತಿ ಸರ್ವವೇದ್ಯ. ಅದೊಂದು ಜನಪದ ಗೀತೆ ಎನ್ನುವವರು ಕೆಲವರಾದರೆ, ಅನಾಮಿಕ ಕವಿಯೊಬ್ಬನ ಕೃತಿ ಎಂದು ಹೇಳುವವರು ಹಲವರಿದ್ದಾರೆ. ಇದರ ಮೂಲ ಕಾವ್ಯವೊಂದಿರಬೇಕು ಎನ್ನುವ ಊಹೆಯೂ ವಿದ್ವಾಂಸರ ಮಾತುಕತೆಗಳು. ಇಂದಿಗೂ ಈ ಸಮಸ್ಯೆ ಬಗೆಹರಿಯದೇ ಇರುವುದು ಖಚಿತವಾಗಿದೆ.

ಇದುವರೆವಿಗೆ ಹಾಡಿನ ಬಗ್ಗೆ, ಅದರ ಮೂಲದ ಬಗ್ಗೆ ನಡೆದಿರುವ ವಿಚಾರ ಧಾರೆಗಳನ್ನು ಹೀಗೆ ಸಂಗ್ರಹಿಸಬಹುದು. ಗೋವಿನ ಹಾಡಿನ ಬಗ್ಗೆ ಕನ್ನಡ ವಿಶ್ವಕೋಶದ ೬ನೇ ಸಂಪುಟದಲ್ಲಿ ನಿರುಪಿಸಲಾಗಿರುವ ಕೆಲವು ಅಂಶಗಳನ್ನು ಈಗ ನೋಡಬಹುದು : - "ಗೋವಿನ ಹಾಡಿನಲ್ಲಿ ಒಟ್ಟು ೧೩೭ ಪದ್ಯವಿದ್ದು, ಅದರಲ್ಲಿ ೧೧೪ ಪದ್ಯಗಳು ಮಾತ್ರ ಮೂಲ ಪದ್ಯಗಳಾಗಿ, ಉಳಿದವು ಪ್ರಕ್ಷಿಪ್ತ ಎಂಬುದು ವಿದ್ವಾಂಸರ ಮತ. ಈ ಹಾಡಿನ ಕವಿಯಾಗಲಿ, ಕಾಲವಾಗಲಿ, ತಿಳಿದು ಬಂದಿಲ್ಲವೆಂದೂ ೧೮೦೦ ನೇ ಇಸವಿಗಿಂತ ಹಿಂದೆ ಇದು ಹುಟ್ಟಿಲ್ಲವೆಂದೂ ತಿಳಿದು ಬರುತ್ತದೆ. ಹಾಡಿನ ಅಂತ್ಯದಲ್ಲಿ ಮದ್ದೂರಿನ ನರಸಿಂಹ ದೇವರನ್ನು ಸ್ಮರಿಸಿರುವ ವಿಷಯುವೊಂದು ವ್ಯಕ್ತವಾಗುವುದೆಂದು ಹೇಳಲಾಗಿದೆ. ಅಂಶಗಣಕ್ಕೆ ಹೊಂದಿಬರುವ ಈ ಪದ್ಯಗಳು ಜಾನಪದವಾಗಿರದೆ, ಏಕಕವಿಕೃತವಾದುದು ಎಂಬ ಹೊಸ ಅಭಿಪ್ರಾಯವೊಂದು ವ್ಯಕ್ತವಾಗುತ್ತದೆ." ಅಲ್ಲದೆ, ಈ ಪದ್ಯಗಳಲ್ಲಿ ಅರಣ್ಯ ವರ್ಣನೆ, ಗೊಲ್ಲನ ವರ್ಣನೆ, ಹಸುವಿನ ಹೆಸರಿನ ವರ್ಣನೆ, ಹುಲಿಯ ಆರ್ಭಟ, ಹುಲಿ - ಹಸು - ದೊಡ್ಡಿ ಬಳಗ ಇತರ ಇಡುವೆ ನಡೆದ ಸಂಭಾಷಣೆ, ಹಸುವಿನ ತ್ಯಾಗ, ಹುಲಿಯ ಸಾವು - ಹೀಗೆ ಕಾವ್ಯದ ವ್ಯಾಪಕತೆಯನ್ನು ವಿಶ್ವಕೋಶದಲ್ಲಿ ವಿಶದಪಡಿಸಲಾಗಿದೆ. ಈ ಹಾಡಿನ ಸಂದೇಶ "ಸತ್ಯ ಪ್ರತಿಪಾದನೆ" ಎಂಬ ಅಂಶವೂ ವ್ಯಕ್ತವಾಗಿದೆ.

ಈ ಕತೆ ಪ್ರಾಚೀನವಾದುದೆಂದೂ "ಸಂಸ್ಕೃತ ಇತಿಹಾಸ ಸಮುಚ್ಚಯ" ಎಂಬ ಪುರಾಣ ಕಥಾ ಕೋಶದಲ್ಲಿ ಇದು "ಬಹು ಲೋಪಾಖ್ಯಾನ" ಎಂಬುದಾಗಿ ಕಂಡು ಬರುವುದೆಂದೂ ಪೇಳಲಾಗಿದೆ. ಇಲ್ಲಿ ಹಸುವಿನ ಹೆಸರು "ಬಹುಲಾ" ಎಂದೂ ; ಹುಲಿಯ

ಹೆಸರು "ಕಾಮರೂಪಿ" (ಅಸತ್ ಶಕ್ತಿಗೆ ಉಚಿತವಾದ ಹೆಸರು)ಎಂದು ಕರೆಯಲಾಗಿದೆ. ಈ ಕತೆಯನ್ನು ಭೀಷ್ಮನು ಯುಧಿಷ್ಠಿರನಿಗೆ ಮೊದ ಮೊದಲು ಹೇಳಿದಂತೆಯೂ ತಿಳಿದು ಬರುತ್ತದೆ.

ಉತ್ತರ ಕರ್ನಾಟಕದಲ್ಲಿ "ಆಕಳ ಹಾಡು" ಎಂದು ಶುದ್ಧ ಜನಪದ ಗೀತೆ ಸಿಕ್ಕಿದ್ದು, ಅಲ್ಲಿ ಹಸುವಿನ ಹೆಸರು "ಬವಲಿ" ಎಂದಾಗಿದ್ದು, ಇದು "ಬಹುಲಾ" ಎಂಬುದರ ಅಪಭ್ರಂಶ ವಾಗಿರಬಹುದೆಂದೂ, ಊಹಿಸಲಾಗಿದೆ. ಆಕಳ ಹಾಡಿನಲ್ಲಿ ಸತ್ಯ ನಿಷ್ಠೆಗಿಂತ ಮಾತೃವಾತ್ಸಲ್ಯವನ್ನು ಎತ್ತಿ ತೋರಿಸುತ್ತದೆ, ಎನ್ನಲಾಗಿದೆ.

– (ಕನ್ನಡ ವಿಶ್ವಕೋಶ: ೬ನೇ ಸಂಪುಟ)

೧೯೩೦ರಲ್ಲಿ ೨೩ನೇ ಮುದ್ರಣವನ್ನು ಕಂಡಿರುವ ಎಂ.ಎಸ್. ಪುಟ್ಟಣ್ಣನವರು ರಚಿಸಿದ ಕನ್ನಡ ಒಂದನೇ ಪುಸ್ತಕದಲ್ಲಿ ಸೇರಿಸಿರುವ ಗೋವಿನ ಕಥೆ ಕಾವ್ಯದಲ್ಲಿ ಪರಿಷ್ಕೃತಗೊಂಡ ೨೮ ಪದ್ಯಗಳು ಕಂಡು ಬರುತ್ತವೆ. ಇವೆಲ್ಲವೂ, ಹೆಚ್ಚು ಕಡಿಮೆ ಅಂಶ ಗಣ ಪರಿವೃತ್ತಿಯಲ್ಲಿ ಇರುತ್ತವೆ ಎಂದು ಹೇಳಲಾಗಿದೆ.

೧೯೬೧ ರಲ್ಲಿ ಪ್ರಕಟವಾಗಿರುವ ಸಚಿತ್ರ ಗೋವಿನ ಕಥೆ - ಒಂದು ಕೃತಿ ಒಟ್ಟು ೧೩೫ ಪದ್ಯಗಳಿರುವ ಈ ಕೃತಿಯಿಂದ (ಮೊದಲ ಮುದ್ರಣ ಕನ್ನಡ ಒಂದನೆ ಪುಸ್ತಕಕ್ಕೆ ಹಿಂದೆ ಇರಬಹುದು) ಎಂ.ಎಸ್. ಪುಟ್ಟಣ್ಣನವರು ೨೮ ಪದ್ಯಗಳನ್ನು ಆರಿಸಿ, ಪರಿಷ್ಕರಿಸಿರುವಂತೆ ಕಾಣಬರುವುದರಿಂದ, ಈ ಕೃತಿ ತುಂಬಾ ಹಳೆಯದೆಂದು ಹೇಳಲವಕಾಶವಿದೆ. ಆದರೆ ಇದರ ಕವಿ ಯಾರೆಂದು ಹೇಳಲವಕಾಶವಿಲ್ಲ, ಎನ್ನಬಹುದು. ಈ ಕೃತಿ ತುಂಬಾ ವಿಸ್ತಾರವಾದದ್ದು. ಅರಣ್ಯ ವರ್ಣನೆಗೆ ೧೮ ಪದ್ಯ; ಗೊಲ್ಲನ ವೇಷ, ಭೂಷಣ, ಅಲಂಕಾರ ವರ್ಣಣೆಗೆ ೨೫ ರಿಂದ ೩೦ನೆ ಪದ್ಯದವರೆಗೆ; ಹಸುಗಳನ್ನು ಹೆಸರಿಸಿ ಕರೆಯುವ ಧಾಟಿಗೆ ೩೨ ರಿಂದ ೩೯ ನೇ ಪದ್ಯದವರೆಗೆ ; ಗೋವುಗಳ ದಿನನಿತ್ಯ ವಿಧಿಗೆ ೪೦ ರಿಂದ ೪೭ನೇ ಪದ್ಯದವರೆಗೆ ; ಹುಲಿಯ ಗರ್ಜನೆ, ಪುಣ್ಯ ಕೋಟಿಯೊಡನೆ ಸಂದರ್ಶನ, ೪೮ ರಿಂದ ೬೪ನೇ ಪದ್ಯದವರೆಗೆ; ಸತ್ಯ ದರ್ಶನ, ಪ್ರಮಾಣ ವಚನ, ದೇವತೆಗಳ ಸಾಕ್ಷಿಮುಂತಾದವಕ್ಕೆ ೬೫ ರಿಂದ ೭೫ನೇ ಪದ್ಯದವರೆಗೆ; ಗೋವಿನ ಅಂಗಾಂಗಗಳಲ್ಲಿ ನೆಲೆಸಿರುವ ದೇವತೆಗಳ ಮಹಿಮೆಗೆ ೭೪ ರಿಂದ ೮೦ ರವರೆಗೆ ; ಸಹ ಗೋವುಗಳೊಡನೆ ನಡೆಸಿದ ಚರ್ಚೆಗೆ, ೮೫ ರಿಂದ ೧೦೬ನೇ ಪದ್ಯದವರೆಗೆ; ತೀರ್ಥಸ್ನಾನ, ಹಸುವಿನ ತ್ಯಾಗ, ಹುಲಿಯ ಪ್ರಾಣಾರ್ಪಣತೆಗೆ ೧೦೭ ರಿಂದ ೧೨೨ ಪದ್ಯದವರೆಗೆ, ಕಥಾ ಮಹಿಮೆ

ಇತ್ಯಾದಿ ೧೨೩ ರಿಂದ ೧೨೮ ನೇ ಪದ್ಯದವರೆಗೆ, ವಿಸ್ತಾರ ಪಡೆಯುತ್ತದೆ. ಕೊನೆಯ ೭ ಪದ್ಯಗಳಲ್ಲಿ, ಸಂಕ್ರಾಂತಿ ಹಬ್ಬ, ಗೋವು ಪೂಜೆ ಸಂಪ್ರದಾಯ ಬೆಳೆದುಬಂದದ್ದು, ಕವಿ ತನ್ನ ಇಷ್ಟ ದೈವವಾದ "ಚೆನ್ನಕೃಷ್ಣನ ಧ್ಯಾನ "(ಕ. ವಿಶ್ವಕೋಶದಲ್ಲಿ ಮದ್ದೂರ ನರಸಿಂಹದೇವರ ಧ್ಯಾನವಿದೆ) ಇವುಗಳ ವಿವರವಿದೆ. ಈ ಕೃತಿಯ ಹಲವು ಪದ್ಯಗಳ ಛಂದಸ್ಸು ಶಿಥಿಲಗೊಂಡಿರುವುದು ಕಾಣಬಂದು, ಇಲ್ಲಿಯೂ ಕವಿಯ ಹೆಸರು ಮರೆಯಾಗಿಯೇ ಉಳಿದು ಬಿಡುವುದು ಒಂದು ರಹಸ್ಯ ಸಂಗತಿ. ಆದರೆ ಚೆನ್ನ ಕೃಷ್ಣನನ್ನು ಗೋವು, ಕವಿ, ಧ್ಯಾನಿಸುವುದರಿಂದ, ಈ ಕೃತಿಯ ಕರ್ತೃ, ಕೃಷ್ಣ ಭಕ್ತ ಎಂಬುದನ್ನು ತೋರಿಸುವುದರಲ್ಲಿ ಅನುಮಾನವೆಂಬುದಿಲ್ಲ.

ಗೋವಿನ ಕಥೆಯ ಬಗ್ಗೆ ಮೌಲ್ಯಗಳು ಕವಿಯೊಬ್ಬನ ಸ್ವಂತ ತಿಳುವಳಿಕೆಗಳಾಗಿರ ಬಹುದೆಂಬ ಸಂಶಯವನ್ನು ಕುರ್ತುಕೋಟಿಯವರು ವ್ಯಕ್ತಪಡಿಸಿರುವ ಮಾತು ಹೀಗಿದೆ - "ಗೋವಿನ ಕಥೆಯಲ್ಲಿಯ ಈ ಪರಿಷ್ಕಾರ (ಎಂ.ಎಸ್.ಪಿ.ಯವರ ಪರಿಷ್ಕಾರ ಕುರಿತು) ಯಾವ ಅಭಿಜಾತ ಕಾವ್ಯಕ್ಕೂ ಕಡಿಮೆಯಿಲ್ಲ. ಆದರೆ ಈ ಹಾಡನ್ನು ಬರೆದ ಕವಿ ಈ ಮೌಲ್ಯಗಳ ತಿಳುವಳಿಕೆಯನ್ನು ಸ್ವಪ್ರಜ್ಞೆಯಿಂದ ಪಡೆದಿರಬಹುದೇ ಎಂಬ ಸಂಶಯ ಬಾದಿಸಬಹುದು, ಹಾಗೇ ಇರಲಿಕ್ಕೂ ಇಲ್ಲ, ಜಾನಪದ ಕಾವ್ಯ ಮೂರ್ತವಾದ ಅನುಭವ ವನ್ನು ಇದ್ದಕ್ಕಿದ್ದ ಹಾಗೆಯೇ ಸ್ವೀಕರಿಸುತ್ತದೆ".

–ಸಂಸ್ಕೃತಿ ಸ್ಪಂದನ (೧೯೮೬)

ಪುತಿನ ಅವರು ತಮ್ಮ ಹಸು ಪುಣ್ಯಕೋಟಿ ಮತ್ತು ಹುಲಿ ಆರ್ಭಟ ಲೇಖನದಲ್ಲಿ "ಇದು ಕನ್ನಡದ ಒಂದು ಜಾನಪದ ಕಥನ ಗೀತೆ, ಕವನವನ್ನು ಬರೆದವರು ಯಾರೋ ಅದು ನಮಗೆ ಗೊತ್ತಿಲ್ಲ. ಮದ್ದೂರಿನ ನರಸಿಂಹನ ಅಂಕಿತವಾಗಿರುವುದರಿಂದ ಕವನ ಕಟ್ಟಿದವನು ಆ ಊರಿನ ಸುತ್ತ ಮುತ್ತ ಇದ್ದಿರಬಹುದು " ಎಂದು ಅಭಿಪ್ರಾಯ ಪಡುತ್ತಾರೆ.

ಪ್ರೊ. ಡಿ.ಎಲ್.ಎನ್ ರವರು ಹೀಗೆ ನಿರ್ಧರಿಸುತ್ತಾರೆ - ೧೮೦೦ ಕ್ಕಿಂತ ಹಿಂದೆ ಪ್ರಸ್ತುತ ಕವನ ರೂಪವನ್ನು ಪಡೆದಿರಲಾರದು. ಇತಿಹಾಸ ಸಮುಚ್ಚಯ ಎಂಬ ಸಂಸ್ಕೃತ ಗ್ರಂಥದ ೩ನೇ ಅಧ್ಯಾಯ ಬಹುಳೋಪಖ್ಯಾನ ಎಂಬುದು ಈ ಕಥೆಗೆ ಆಧಾರ ವಾಗಿರಬಹುದು. ಇಲ್ಲಿ ಗೋವಿನ ಹೆಸರು"ಬಹುಳಾ "ಹುಲಿಯ ಹೆಸರು "ಕಾಮರೂಪೀ". ಯಮುನಾ ನದಿ ದಡದ ರೋಹಣ ಎಂಬ ಬೆಟ್ಟದಲ್ಲಿ ಕಾಮರೂಪೀ ಹುಲಿ ತನ್ನ ಕಾಮ ಕಾರ್ಯಕ್ಕೆ ಪಶ್ಚಾತ್ತಾಪ ಪಟ್ಟು ತಪಸ್ಸಿಗೆ ತೊಡಗುತ್ತದೆ. ಅನಂತರ ಸಾಯುತ್ತದೆ. ಈ

ಹೊಸ ವಿಚಾರಗಳನ್ನು ಇವರು ಪ್ರಕಟ ಪಡಿಸುತ್ತಾರೆ.

ಇತ್ತೀಚೆಗೆ ೧೯೬೩ರಲ್ಲಿ ಗೀತಾಂಜಲಿ ಪ್ರಕಾಶನದವರು ಪ್ರಕಟಿಸಿರುವ ಜನಪದ ಗೀತೆಗಳು ಎಂಬ ಪುಟ್ಟ ಪುಸ್ತಕದಲ್ಲಿರುವ ಎಪ್ಪತ್ತೆರಡು ಸಾಲುಗಳಲ್ಲಿ ಸಂಗ್ರಹಿಸಿರುವ, ಗೋವಿನ ಹಾಡು ಒಂದು ಅಪೂರ್ಣ ಹಾಡಾಗಿದೆ. ಆದರೆ ಕೆಲವು ಒಂದು ಸಾಲಿಗೂ ಮತ್ತೊಂದು ಸಾಲಿಗೂ ಹೊಂದಾಣಿಕೆಯಾಗದೆ ಸರಿ ಅರ್ಥ ವ್ಯಕ್ತವಾಗುವುದಿಲ್ಲ.

ಧರಣಿ ಮಂಡಲ ಮಧ್ಯದೊಳಗೆ ।ಇರುವ ಕಾಳಿಂಗ ನಿಮ್ಮ ಗೊಲ್ಲ ।ಗೋವುಗಳೆಲ್ಲ ಮಂದವಾಕಿ । ಹಾಲುವನ್ನು ಕರೆದುಕೊಂಡುಹೀಗೆ ಆರಂಭವಾಗುವ ಈ ಪುಟ್ಟ ಹಾಡು ಎಂ.ಎಸ್.ಪಿ. ಯವರ ಪರಿಷ್ಕೃತ ಕಾವ್ಯವನ್ನು ನೆನಪು ಮಾಡಿದರೂ, ಮುಂದಿನ ಸಾಲುಗಳಲ್ಲಿ ಹೊಸ ವಿಚಾರ ಎದ್ದು ಕಾಣುತ್ತದೆ. ಹೆದರು ಓಡುವ ಗೋವನ್ನು "ಕುಂಟೆ ಪುಸಲೆ", "ಪುಣ್ಯಕೋಟಿ"; ಎಂದು ಹೆಸರಿಸಿ ಕೂಗಿ ಹುಲಿ ಅದನ್ನು ತಡೆದು ನಿಲ್ಲಿಸುವುದು; "ತಬ್ಬಲಿ ಹುಲಿರಾಯ ನೀನು" ಎಂದು ಗೋವು ಹುಲಿಯನ್ನು ವ್ಯಂಗ್ಯದಿಂದ ನುಡಿಸುವುದು, ಹುಲಿ ತನ್ನನ್ನು ತಿನ್ನುವುದರಿಂದ "ಇಂದ್ರ ಲೋಕವೇ ಹಾಳಲೆ" ಎಂದು ಹುಲಿಯ ಪಾಪ ಕೃತ್ಯವನ್ನು ಖಂಡಿಸುವುದು, ಕೊನೆಗೆ "ಹಾಲು ತಂದು ಅನ್ನ ಮಾಡಿ, ಹಾಲಿನೊಳಗೆ ಬಾಸೆ ಮಾಡಿ "- ಹಸು ಮನೆಗೆ ಬರುವುದು, ಒಂದು ಅಪರೂಪ ಸಂಗತಿ. ತನ್ನ ಬಳಿಗೆ ಬಂದ ಹಸುವನ್ನು ತಿನ್ನದ ಹುಲಿ "ಗಗನಕೆಗರಿ ನೆಲಕೆ ಬಿದ್ದು ಗೋವು ಪಾದದ ಮೇಲೆ ಬಿದ್ದು" ಎಂಬಲ್ಲಿಗೆ ಕಾವ್ಯ ನಿಲ್ಲುತ್ತದೆ. ಮುಂದಿನ ಎರಡು ಸಾಲುಗಳಲ್ಲಿ ಈ ಹಾಡು ಮುಗಿಯ ಬಹುದು ಎಂಬ ಊಹೆಗೆ ಅವಕಾಶ ಮಾಡಿ ಕೊಡುತ್ತದೆ. ಗ್ರಾಮ್ಯ ಪದಗಳು ಯಥೇಚ್ಛವಾಗಿರುವ ಈ ಹಾಡು ಪ್ರಚಲಿತವಾಗಿರುವ ಹಳೆಯ ಕಥೆಯನ್ನೇ ಅನುಸರಿಸಿ ಕಟ್ಟಿದ ಜನಪದ ಹಾಡೆಂಬ ಅನಿಸಿಕೆಯೂ ಸಾಧ್ಯವಾಗುತ್ತದೆ. ಇಲ್ಲಿಯೂ ಈ ಕಾವ್ಯ ಯಾರದೆಂಬುದು ತಿಳಿಯಬರುವುದಿಲ್ಲ.

ಇಷ್ಟಾದರೂ ಚಿದಂಬರ ರಹಸ್ಯವಾಗಿಯೇ ಉಳಿಯುವ ಎರಡು ಅಂಶಗಳು ಇಲ್ಲಿ ಗಮನಾರ್ಹ. ಗೋವಿನ ಹಾಡಿನ ರಚನೆಯಲ್ಲಿ ಕವಿಯ ಹೆಸರೇ ಇಲ್ಲದಿರುವುದು ಒಂದಾದರೆ, ಈ ಕಥೆಯ ಮೂಲ ತಿಳಿಯದಿರುವುದು ಮತ್ತೊಂದು. ಆದರೆ ಈಗಾಗಲೇ ಪ್ರಾಚೀನ ಸಂಸ್ಕೃತ ಇತಿಹಾಸ ಸಮುಚ್ಚಯ ಎಂಬ ಪುರಾಣ ಕಥಾ ಕೋಶದಲ್ಲಿ ಬರುವ "ಬಹುಳೋಪಖ್ಯಾನ" ಎಂಬ ಭಾಗವೇ ಇದರ ಮೂಲ ಎಂದು ಹೇಳಲಾಗದ್ದರೂ, ಅದು ಸಮಗ್ರವಾಗಿ ಎಲ್ಲಿಯೂ ಪ್ರಕಟವಾಗಿಲ್ಲ ಎಂಬುದು ಇದರ ಬಗ್ಗೆ ವಿಚಾರ

ಮಾಡಿರುವ ವಿದ್ವಾಂಸರ ದೃಷ್ಟಿಯಲ್ಲಿ ವ್ಯಕ್ತವಾಗದೇ ಇಲ್ಲ.

ಈಗ, ಮತ್ತೊಂದು ಪ್ರಾಚೀನ ಕೃತಿ "ಶ್ರೀ ಪದ್ಮ ಮಹಾಪುರಾಣ" ಶ್ರೀ ವೇದ ವ್ಯಾಸ ಕೃತ ಸಂಸ್ಕೃತ ಕಾವ್ಯವಾಗಿರುತ್ತದೆ. ೧೮ನೇ ಅಧ್ಯಾಯದಲ್ಲಿ ವಿವರಿಸಲಾಗಿರುವ ಗೋವಿನ ಕಥೆ ಪ್ರಾಚೀನ ಕಥೆ ಎನಿಸುತ್ತದೆ. ಈಗಾಗಲೇ ಬಹುಳೋಪಖ್ಯಾನವನ್ನು ಭೀಷ್ಮನು ಯುಧಿಷ್ಠರನಿಗೆ ಹೇಳಿದ ಕಥೆ ಎಂಬ ಅಭಿಪ್ರಾಯವಿರುವಂತೆ, ಈ ಪುರಾಣದ ಕಥೆಯನ್ನು ಪುಲಸ್ತ್ಯ ಮುನಿಯು ಭೀಷ್ಮನಿಗೆ ಹೇಳಿದಂತೆ ತಿಳಿಯಲಾಗಿದೆ.

ಬ್ರಹ್ಮನ ಅಪ್ಪಣೆಯ ಮೇರೆಗೆ ಪುಲಸ್ತ್ಯ ಮುನಿಯು, ತಪಸ್ಸಿನಲ್ಲಿ ತಲ್ಲೀನನಾಗಿದ್ದ ಭೀಷ್ಮನನ್ನು ಎಚ್ಚರಿಸಿ ಅವನ ಬೇಡಿಕೆಯಂತೆ ಈ ಸಮಗ್ರ ಪುರಾಣವನ್ನು ಅವನಿಗೆ ತಿಳಿಸುತ್ತಾನೆ. ೧೮ನೇ ಅಧ್ಯಾಯದಲ್ಲಿ ಬರುವ "ನಂದಾ ಮಹಿಮೆ" ಎಂಬ ಕಥೆಯು ಹೀಗೆ ಆರಂಭವಾಗುತ್ತದೆ. ತೀರ್ಥಗಳಲ್ಲಿ ಸರ್ವಶ್ರೇಷ್ಠ ಸರಸ್ವತಿ ನದಿಯ ಮಹಿಮೆಯ ವರ್ಣನೆ ಮುಗಿಯುತ್ತಿದ್ದಂತೆಯೇ, ಇದರ ಒಂದು ಶಾಖೆಯಾದ ನಂದಾ ನದಿಯ ಪರಿಚಯ ಮಾಡಿ ಕೊಡುವ ಸಂದರ್ಭದಿಂದ ಈ ಕಥೆ ಆರಂಭವಾಗುತ್ತದೆ. ಒಟ್ಟು ೨೧೨ ಶ್ಲೋಕಗಳಲ್ಲಿ ವ್ಯಾಪಕವಾಗಿರುವ ಈ ಕಥೆಯ ಸ್ಥೂಲ ಪರಿಚಯವನ್ನು ಮಾಡಬಹುದು.

ಶಾಪ ಪ್ರದಾನ - ವಿಮೋಚನೆ

ಬೇಟೆಗಾಗಿ ಹೋಗಿದ್ದ ಪ್ರಭಂಜನನೆಂಬ ರಾಜನು, ಅರಣ್ಯದಲ್ಲಿ ತನ್ನ ಮರಿಗೆ ಹಾಲುಡಿಸುತ್ತಿದ್ದ ಹೆಣ್ಣು ಜಿಂಕೆಯ ಮೇಲೆ ಬಾಣ ಪ್ರಯೋಗ ಮಾಡುತ್ತಾನೆ. ನಿರಪರಾಧಿಯಾದ ಏಟು ತಿಂದ ಜಿಂಕೆ ರಾಜನಿಗೆ ಹೀಗೆ ಶಾಪ ಕೊಡುತ್ತದೆ.

ತಸ್ಮಾತ್ತ್ವಮಪಿ ದುರ್ಬುದ್ಧೇ ಕ್ರವ್ಯಾದತ್ಯಮವಾಪ್ಸ್ಯಸಿ
ವನೇಽಸ್ಮಿನ್ಕಂಟ ಕಾಕೀರ್ಣೇ ವ್ಯಾಘ್ರರೂಪಂ ತ್ವಮಾಪ್ನುಹಿ ||

ಯಾರಿಗೂ ತೊಂದರೆ ಕೊಡದೆ ಬಾಳುತ್ತಿದ್ದ ತನ್ನ ಮೇಲೆ ಬಾಣ ಪ್ರಯೋಗ ಮಾಡಿದುದರಿಂದ ಮಾಂಸಾಹಾರಿಯಾದ ಹುಲಿಯ ರೂಪ ತಾಳಿ ಅಲೆದಾಡುವಂತೆ ಪ್ರಭಂಜನನಿಗೆ ಶಾಪ ಪ್ರಾಪ್ತವಾಗುತ್ತದೆ. ಅಜ್ಞಾನದಿಂದ ಬಾಣ ಪ್ರಯೋಗ ಮಾಡಿದ ರಾಜನು ತನ್ನ ಕೃತ್ಯಕ್ಕಾಗಿ ಪಶ್ಚಾತ್ತಾಪ ಪಟ್ಟು ಶಾಪ ವಿಮೋಚನಾ ಮಾರ್ಗವನ್ನು ಬೇಡುತ್ತಾನೆ. "ಒಂದು ಶತಮಾನ ಕಳೆದ ನಂತರ, ನೀನು ಎದುರಾಗುವ "ನಂದಾ" ಎಂಬ ಹಸುವಿನೊಡನೆ, ಸಂಭಾಷಣೆ ಮಾಡುವ ಸನ್ನಿವೇಶದಲ್ಲಿ ಶಾಪ ವಿಮೋಚನೆಯಾಗುತ್ತದೆ" ಈ ಶಾಪಗ್ರಸ್ತನಾದ ರಾಜನು ಮರುಗಳಿಗೆಯಲ್ಲಿ ಕ್ರೂರ ವ್ಯಾಘ್ರನ ಘೋರ

ರೂಪ ಧರಿಸುತ್ತಾನೆ. ಅರಣ್ಯದಲ್ಲಿ ಸಂಚರಿಸುವ ಪ್ರಾಣಿಗಳನ್ನು ತಿಂದು ಕಾಲ ನೂಕಲಾರಂಭಿಸಿದ ಹುಲಿಗೆ ಪೂರ್ವ ಜನ್ಮದ ಸ್ಮರಣೆಯಿಂದ ನೋವು ಬಾಧಿಸುತ್ತಿರುತ್ತದೆ. ಆದರೂ ಹುಲಿಯ ಜಾತಿಗೆ ಪ್ರಾಣಿ ಹಿಂಸೆ ಸಹಜವಾದುದು. ಬದುಕಲು ಮಾಂಸಬೇಕು. ಮಾಂಸದ ಆಸೆಯಿಂದಲೇ ವ್ಯಾಘ್ರ ರೂಪ ಬಂದಿತು. ಮಾಡುವುದಾದರೂ ಏನು? " ಹೀಗೆ ಯೋಚಿಸಿದ ಹುಲಿ, "ಪ್ರಾಣಿ ಹಿಂಸೆಯಿಂದಲೇ ಬದುಕಬೇಕಾದುದು ಅನಿವಾರ್ಯ" ಎಂದುಕೊಳ್ಳುತ್ತದೆ. ಮಾನವರಲ್ಲಿ ಅನುಕಂಪವಿದ್ದರೂ, ತನ್ನನ್ನೇ ಬೇಟೆಯಾಡಲು ಬರುವವರನ್ನು ಕೊಲ್ಲಲೇಬೇಕಾದ ಪ್ರಸಂಗವೂ ಬರುತ್ತದೆ. ಹುಲಿಯ ಜನ್ಮ ಕಳೆಯುವ ವರೆಗೂ ಹಿಂಸೆಯೇ ತನ್ನ ಬದುಕಿನ ಮಾರ್ಗ ಎಂದು ನಂಬಿ, ಹುಲಿಯ ಸಹಜ ಜೀವನವನ್ನು ಅವಲಂಬಿಸಿ ಶಾಪ ವಿಮೋಚನಾ ದಿನಗಳನ್ನು ಕಾಯುತ್ತಾ ಕಾಲ ತಳ್ಳುತ್ತದೆ.

"ನಂದಾ" - ಆಕಳು

ಖರ್ಜೂರೀ ವನ ಪ್ರದೇಶದಲ್ಲಿ ಹುಲಿಗೆ ನೂರು ವರುಷಗಳು ಕಳೆದು ಹೋಗುತ್ತದೆ. ಆ ಸಮಯದಲ್ಲಿ ಗೋಪಾಲರ ಗುಂಪೊಂದು ಪಸುಗಳ ಹಿಂಡಿನೊಡನೆ ಹುಲ್ಲು, ನೀರನ್ನು ಅರಸುತ್ತಾ ಬೆಟ್ಟದ ಬಯಲಿಗೆ ಬರುತ್ತದೆ. ದಟ್ಟ ಅರಣ್ಯಪ್ರಾಂತ್ಯವೆಲ್ಲಾ ಹಸು - ಕರುಗಳ "ಅಂಬಾ, ಅಂಬಾ" ಎಂಬ ಕೂಗಿನಿಂದ ತುಂಬಿ ಹೋಗುತ್ತದೆ. ಹಸಿರು ಕಂಡೆಡೆಗಳೆಲ್ಲಾ ಅವು ನಿರ್ಭಯವಾಗಿ ಅಲೆಯಲಾರಂಭಿಸುತ್ತವೆ. ಈ ಹಸುಗಳ ಗುಂಪಿನಲ್ಲಿ ಸೇರಿದ್ದ "ನಂದಾ" ಎಂಬುದು ಪ್ರಮುಖ ಹಸು. ಹಂಸ ವರ್ಣದ ಬಿಳುಪು, ಉದ್ದನೆ ಕೊರಳು ಕೊಗೆಚ್ಚಲು, ಮೃದು ಚರ್ಮ, ಸುಂದರ ಗಂಗೆ ತೊಗಲು, ನೀಲಕಂಠ, ಮಧುರಸ್ವರ, ದಷ್ಟಪುಷ್ಟ ಶರೀರ - ಇದು ನಂದಾಳ ಪರಿಚಯ. ಇವಳು ಮುಂದೆ ಹೊರಟರೆ ಗೋವುಗಳ ಸಾಲು ಸಾಲು ; ಸಂಜೆವೇಳಗೆ ಹುಲ್ಲು ಮೇಯ್ದು, ಧರ್ಮಾತ್ಮ "ನಂದಾ" ಎಂಬ ಗೋಪಾಲನ ಮನೆಗೆ ಎಲ್ಲ ದನಗಳು ಹಿಂದಿರುಗುತ್ತಿದ್ದವು. ಇದು ದಿನ ನಿತ್ಯದ ಆಚರಣೆಯಾಗಿತ್ತು.

ಹೆಬ್ಬುಲಿ - ನಂದಾರ ಭೇಟಿ

ರೋರಿತೋ ನಾಮ ತತ್ರಾನ್ಯ: ರ್ಪತಃ ಸರಿತಸ್ತಟೇ
ಅನೇಕ ಕಂದರದರೀ ಗುಹಾಶತ ನಿವೇಶಿತಃ

ಸರಸ್ವತೀ ನದಿಯ ದಂಡೆಯಲ್ಲಿ ಒಂದು ಪರ್ವತ "ರೋಹಿತ". ಅನೇಕ ದರೀ, ಕಂದರಗಳ ನೂರಾರು ಗುಹೆಗಳಿಂದ ತುಂಬಿದ ಪರ್ವತ. ಅದರಿಂದ ಈಶಾನ್ಯಕ್ಕೆ ಒಂದು

ಬೃಹದಾರಣ್ಯ. ಸದಾ ಶಾಮಲ ವರ್ಣದಿಂದ ಶೋಭಿಸುವ ಹುಲ್ಲುಗಾವಲು ಅದು. ಹುಲಿ, ಸಿಂಹ ಮೊದಲಾದ ಅನೇಕಾನೇಕ ದುಷ್ಟಮೃಗಗಳ ಆವಾಸ ಸ್ಥಾನವೂ ಆಗಿತ್ತು. ಗಿಡ ಮರ ಬಳ್ಳಿಗಳಿಂದ ಆವೃತವಾದ ಈ ಪ್ರದೇಶ ರುದ್ರಭೀಷಣ ಸುಂದರ ಅರಣ್ಯವೆನಿಸಿತ್ತು. ಇಂತಹ ರೌದ್ರ ಗಂಭೀರ ಅರಣ್ಯದಲ್ಲಿ ಚೂಪಾದ ಆಯುಧದಂತಹ ಉಗುರು, ಕೋರೆಹಲ್ಲುಗಳು; ಕಿಡಿ ಕಾರುವ ಕಣ್ಣು; ದೊಡ್ಡ ಗುಹೆಯಂತೆ ತೆರೆದ ಬಾಯಿ; ಕಾರ್ಗಾಲದ ಮೇಘ ಗರ್ಜನೆಯಂತಹ ಗಂಭೀರ ಧ್ವನಿವುಳ್ಳ ಹೆಬ್ಬುಲಿಯೇ ಪರ್ವತಾಕಾರವಾಗಿ ಭಯಂಕರವಾಗಿ ಕಾಣುತ್ತಿತ್ತು. ಒಂದು ದಿನ, ಮೈಗೆ ನಡುಕ ತರುವ ಈ ಅರಣ್ಯದಲ್ಲಿ ಮೇವಿನ ಆಸೆಯಿಂದ ದೂರ ದೂರ ನಡೆದು ಬಂದ ನಂದಾ ದಾರಿ ತಪ್ಪಿ ಹೆಬ್ಬುಲಿಯ ಎದುರು ನಿಂತಾಗ, ಬೆಚ್ಚಿ ಬೆದರಿ ಓಡಲಾರಂಭಿಸಿತು. ಆಗ ಹೆಬ್ಬುಲಿ ಹೇಳಿತು :- ಧೇನುವೇ , ಓಡಬೇಡ ನಿಲ್ಲು, ನಿಲ್ಲು, ನಡುಗುವ ಕಾರಣವಿಲ್ಲ. ಅ ಪ್ರಯತ್ನವಾಗಿ, ನೀನೇ ನನಗೆ ಆಹಾರವಾಗಿ ಬಂದಿದ್ದೀಯೆ. ಇದು ದೈವ ಕೃಪೆ. ಕಠಿಣ ಕರ್ಕಶವಾದ ಹುಲಿಯ ಮಾತಿನಿಂದ ನಂದಿಗೆ ಭಯದಿಂದ ನವಿರೇಳಿತು. " ಶುಭ್ರರೂಪಾನ್ವಿತ ಬಾಲ ಸುತ"ನನ್ನು ನೆನೆಯಿತು. ಪುತ್ರ ವಾತ್ಸಲ್ಯ, ಪುತ್ರ ಶೋಕದಿಂದ ಬೆಂದು, ಕಣ್ಣಿನಲ್ಲಿ ನೀರು ತುಂಬಿ ತುಳುಕಿತು. ಕೊರಳು ಗದ್ಗದಿಸಿತು. ಪುತ್ರ ದರ್ಶನ ಸಿಗಲಾರದೆಂದು ಕುದಿಯಿತು. ರೋಧಿಸುವ ಹಸುವನ್ನು ಕಂಡು ಹುಲಿ ಹೇಳಿತು.

ದೈವಾನ್ಮಮೋಪಯಾತಾಸಿ ಭಕ್ಷಸ್ತ್ವಂ ಮೇಯದೃಚ್ಛಯಾ
ರುದತ್ಯಾ ವಾಹಸತ್ಯಾವಾನಾದ್ಯ ತೇ ಜೀವನಂ ಭವೇತ್ ||

"ನನ್ನ ಆಹಾರಕ್ಕಾಗಿಯೇ ದೈವ ನಿನ್ನನ್ನು ನನ್ನ ಬಳಿ ಕಳುಹಿಸಿದೆ. ಅಳುವುದರಿಂದ ನಗುವುದರಿಂದ ಪ್ರಯೋಜನವಿಲ್ಲ. ನೀನು ಇನ್ನು ಬದುಕಲಾರೆ. ತಮಗೆ ವಿದಿತವಾದ ಆಹಾರವನ್ನು ತಿನ್ನುವುದು ಲೋಕದ ಪ್ರಾಣಿಗಳ ಧರ್ಮ. ಹೀಗಿರುವಾಗ ನಿನ್ನ ಅಳುವಿನ ಅರ್ಥ ತಿಳಿಯದೆ ಕುತೂಹಲವಾಗಿರುತ್ತದೆ. ಹೇಳು, ಅಳುವ ಕಾರಣವೇನು? "

ಹುಲಿಯ ಪ್ರಶ್ನೆಗೆ ಹಸು ಹೇಳಿತು :- ಸಾವಿಗಾಗಿ ನಾನು ಚಿಂತಿಸುತ್ತಿಲ್ಲ. ಹುಟ್ಟಿದವರಿಗೆ ಮರಣ ಖಂಡಿತ. ಎಲ್ಲವೂ ಪರಮಾತ್ಮನ ಅಧೀನ ಎಂದ ಮೇಲೆ ಸಾವಿಗೆ ಹೆದರಿ ಅಳುತ್ತಿಲ್ಲ. ಆದರೆ ನಾನು ಪ್ರೇಮ ಬಂಧಿತಳಾಗಿ ಅಳುತ್ತಿದ್ದೇನೆ. ಎಲೈ ಹುಲಿ ರಾಜ, ನನ್ನ ಸಂತಾಪವನ್ನು ಕೇಳು, ನನಗೆ ಒಬ್ಬ ಚೊಚ್ಚಲು ಗಂಡು ಮಗನಿದ್ದಾನೆ. ಇನ್ನೂ ಚಿಕ್ಕವನು, ಮೊಲೆ ಹಾಲಿಲ್ಲದೆ ಹುಲ್ಲಿನ ವಾಸನೆಯೂ ಅವನಿಗೆ ತಿಳಿಯದು.

ಗೋಪಾಕನ ಮನೆಯಲ್ಲಿ ಹಸಿವಿನಿಂದ ಬಳಲುವ ಅವನಿಗೆ ಭವಿಷ್ಯವೇನಿರುತ್ತದೆ? ಆದ್ದರಿಂದ ನಾನು ಹೋಗಿ ಸುತನಿಗೆ ಮೊಲೆಯೂಡಿಸಿ, ಪುತ್ರ ಸ್ನೇಹದಿಂದ ನೆತ್ತಿ ಮೂಸಿ ಮೈದಡವಿ ಮುದ್ದಾಡಲು ಚಡಪಡಿಸುತ್ತಿದ್ದೇನೆ. ಆದ್ದರಿಂದ, ನಾನು ಹೋಗಲೇಬೇಕು.

ಸುಖೀನಾಮರ್ಪಯಿತ್ವಾ ತು ಸಂದಿಶ್ಯ ಚ ಹಿತಾಹಿತಂ।

ಪುನಃ ಪ್ರತ್ಯಾಗಮಿಷ್ಯಾಮಿ ಯಥೇಷ್ಟಂ ಭಕ್ಷ್ಯಯಿಷ್ಯಸಿ ॥

ನನ್ನ ಮಗುವಿಗೆ ಹಿತ - ಅಹಿತಗಳನ್ನು ತಿಳಿಸಿ, ನನ್ನ ಸಖಿಯರ ಕೈಗೆ ಅವನನ್ನು ಒಪ್ಪಿಸಿ ಬರುತ್ತೇನೆ. ನಂತರ ನನ್ನನ್ನು ಯಥೇಷ್ಟವಾಗಿ ಭಕ್ಷಿಸು.

ಆಗ ವ್ಯಾಘ್ರ ಹೇಳಿತು :-

"ಕಿಂತೇ ಪುತ್ರೇಣ ಕರ್ತವ್ಯಂ ಮರಣಂಕಿನ ಬುಧ್ಯಸೇ "

ಸಾಯಲೆಂದೇ ನೀನು ಇರುವಾಗ ಮಗನಿಂದ ಆಗಬೇಕಾದುದೇನು? ನನ್ನನ್ನು ಕಂಡ ಕ್ಷಣದಲ್ಲಿ ಪ್ರಾಣಗಳೆಲ್ಲ ಹೆದರಿ ಬೆದರಿ ಕಂಪಿಸುತ್ತವೆ. ಆದರೆ ನೀನು ಪುತ್ರಾ, ಪುತ್ರಾ ಎಂದು ಆಕ್ರಂದನ ಮಾಡುತ್ತಿರುವೆ.

"ನ ಪುತ ನ ತಪೋ ದಾನಂ ನಮಾತಾನ ಪಿತಾ ಸುಹೃತ್

ಶಕ್ನುವಂತಿ ಪರಿತ್ರಾತುಂ ನ ಕಾಲೇ ನಾಭಿ ಪೀಡಿತಂ "

ಸಾವಿನ ಹಿಡಿತದಲ್ಲಿ ಸಿಕ್ಕಿದವರನ್ನು ಮಕ್ಕಳು, ತಪಸ್ಸು, ದಾನ, ತಂದೆ, ತಾಯಿ ಕೊನೆಗೆ ಗೆಳೆಯರು ಯಾರೂ ರಕ್ಷಿಸಲಾರರು. ಆದ್ದರಿಂದ ಮಗನಿಗಾಗಿ ಅಳುವುದು ವ್ಯರ್ಥ. ಅಯ್ಯು, ಗೋಕುಲಕ್ಕೆ ಹೋಗಿ ಬರುವೆನೆನ್ನುತ್ತೀಯೆ, ಧೇನುವೇ, ಗೋಪೀ ಜನ ಸಮೂಹದಿಂದ ತುಂಬಿರುವ, ಎಳೆಗರುಗಳಿಂದ ಭೂಷಣವಾಗಿರುವ, ದೇವತೆಗಳಿಂದಲೂ ಪೂಜ್ಯನೀಯವಾದ, ದೇವಲೋಕಕ್ಕೆ ಅಲಂಕಾರ ಪ್ರಿಯವಾದ, ಸ್ವರ್ಗ ಸಮಾನವಾದ ಗೋಕುಲ ಅದು ! ಪವಿತ್ರದಲ್ಲಿ ಪವಿತ್ರ ; ಮಂಗಳ ದಲ್ಲಿ ಮಂಗಳ; ಸರ್ವ ತೀರ್ಥಗಳಲ್ಲಿ ಖ್ಯಾತಿ ವೆತ್ತ ತೀರ್ಥ; ಭೂಲೋಕದ ಸ್ವರ್ಗದಂತಿರುವ ಗೋಕುಲದಲ್ಲಿ, ಗೋಪಿಯರ ಮೊಸರು ಕಡೆಯುವ ಶಬ್ದ, ಎಳೆಗರುಗಳ ಮಧುರ ಧ್ವನಿ, ಗೋವುಗಳ ಹೂಂಕಾರನಾದ ಗಳಿಂದ ತುಂಬಿರುವ ಗೋಕುಲವೇ ಲಕ್ಷ್ಮೀನಿವಾಸ! ತಾಯಂದಿರಿಗಾಗಿ ಆರ್ತನಾದ ಮಾಡುವ ಎಳೆಕರುಗಳು, ದನಗಳನ್ನು ಸಲಹುವ ಗೋಪಾಲಕರು, ಗೀತ ನೃತ್ಯ ಆಲಾಪ ಗಳಿಂದ ನಲಿಯುವ ಗೋಕುಲವು ಶೋಭಿಸುವ ಕಮಲ ಸರೋವರ! ಈ ಸಕಲ ಸಂಪದ್ಭರಿತ ರಮ್ಯ ಗೋಕುಲವನ್ನು ಬಿಟ್ಟು ಹಿಂದಿರುಗಿ ಹೇಗೆ ಬರುತ್ತೀಯೆ? ಎಳೆ

ಕಂದನ ಎದೆ ಬಿರಿಯುವ ಆರ್ತನಾದವನ್ನು ಕೇಳಿಸಿಕೊಂಡೂ ಸಹ ಸಾಯಲು ನೀನು ಬರುತ್ತೀಯಾ?" ಎಂದ ಹುಲಿಯು "ನನ್ನ ಪಂಚಭೂತ ಶರೀರ ನಿನ್ನ ರಕ್ತವನ್ನು ಹೀರಲು ಕಾತರಿಸುತ್ತಿದೆ" ಎನ್ನುತ್ತಾ ಆರ್ಭಟಿಸಿ ಎದುರಿಗೆ ನಿಲ್ಲುತ್ತದೆ.

ಪ್ರಮಾಣ ವಚನ ಸ್ವೀಕಾರ

ನಂದಾ ಹೇಳಿತು : - "ನನಗಿರುವುದು ಚೊಚ್ಚಲು ಕರು ವೊಂದೆ,

ಅಹಂ ಪ್ರಥಮ ವತ್ಸಾ ತು ಮೃಗೇಂದ್ರ ಶೃಣು ಮೇ ವಚಃ।

ದೃಷ್ಟ್ವಾ ಸಖೀ ಸುತಂ ಬಾಲಂ ಗೋಪಾಂಶ್ಚ ಪ್ರತಿಪಾಲಕಾನ್ "

"ಮೊದಲು ಆ ಮಗುವನ್ನೂ, ನನ್ನ ಗೋಪಾಲಕ, ನನ್ನ ಜೊತೆಗಾತಿಯರನ್ನೂ ನೋಡಿ ಮಾತಾಡಿಸಿ ಬರುತ್ತೇನೆ. ಹಿಂದಿರುಗಿ ಬಾರದಿದ್ದರೆ ಬ್ರಹ್ಮಹತ್ಯೆ, ಮಾತಾಪಿತೃವಧೆಯಿಂದ ಬರುವ ಪಾಪಕ್ಕೆ ಗುರಿಯಾಗುತ್ತೇನೆ. ಹಾಗೂ, ಬೇಟೆಗಾರರಿಗೆ ಮ್ಲೇಂಚರಿಗೆ, ವಿಷವಿಡುವವರಿಗೆ, ಗೋಹತ್ಯೆ ಕಾರರಿಗೆ, ಮುದಿ ಅಥವಾ ರೋಗಿ ಎತ್ತುಗಳನ್ನು ಗಾಡಿಗೆ ಹೂಡುವವರಿಗೆ, ಮನೆಗೆ ಬಂದ ಮಿತ್ರನನ್ನು ಬರಿಗೈಲಿ ಕಳುಹಿಸುವ ವರಿಗೆ, ಬರುವ ಪಾಪ ನನಗೆ ಬರಲಿ" ಎಂದು ಹೇಳುತ್ತದೆ.

ಆಗ ಹುಲಿ ಹೇಳಿತು :

"ಸಂಜಾತ ಪ್ರತ್ಯಯೋಸ್ಮಾಕಂ ಶಪಥೈಸ್ತವ ಧೇನುಕೇ

ಕದಾಜಿನ್ಮನ್ಯಸೇಗತ್ವಾ ಮೂಢೋ ಸೌ ವಂಚಿತೋ ಮಯಾ "

"ಧೇನುವೇ ನಿನ್ನ ಪ್ರತಿಜ್ಞೆಯಿಂದ ನನಗೆ ವಿಶ್ವಾಸ ಮೂಡಿತು. ನೀನು ಹೋಗಬಹುದು, ಆದರೆ ಮೂರ್ಖ ಹುಲಿಯನ್ನು ವಂಚಿಸಿದೆ ಎಂದುಕೊಳ್ಳಬೇಡ. ಆದರೂ ನೆನಪಿರಲಿ, ಮದುವೆಯ ಸಂದರ್ಭದಲ್ಲಿ, ಗೋವುಗಳ ಬಿಡುಗಡೆಯ ಸಂದರ್ಭದಲ್ಲಿ, ಪ್ರಾಣಕ್ಕೆ ಗಂಡಾಂತರ ಬಂದ ಸಮಯದಲ್ಲಿ ವಚನ ಭ್ರಷ್ಟ ರಾಗಬಹುದೆಂದು ಹೇಳಲಾಗಿದೆ. ಆದರೆ ನಿನಗೆ ಇದು ಸಂದರ್ಭವಲ್ಲ! ಮೂರ್ಖ ಪಂಡಿತರು ಆಗಮಗಳನ್ನೇ ತಮಗೆ ಅನುಕೂಲವಾಗುವಂತೆ ತಿರುಗಿಸಿ ಬಿಡುವರು. ಹಾಗೂ ಹಾಲು ತೀರಿದ ಮೇಲೆ ಕರುವೇ ತಾಯಿಯಿಂದ ದೂರ ಸರಿಯುತ್ತದೆ. ಋಷಿ, ದೇವ, ಅಸುರ, ನರರು ತಮ್ಮ ಇಷ್ಟಾರ್ಥಸಿದ್ಧಿಗಾಗಿ ಮನ ಬಂದಂತೆ ಪ್ರತಿಜ್ಞೆ ಮಾಡುವುದೂ ಉಂಟು. ಅದನ್ನು ಮುರಿದರೆ, ಯಮಧರ್ಮ ನಿಯಂತ್ರಿಸುತ್ತಾನೆ. ಆದ್ದರಿಂದ ನೀನೇ ಮಾಡಿರುವ ಶಪಥವನ್ನು ಮುರಿದರೆ ಪಾಪಕ್ಕೆ ಗುರಿಯಾಗುತ್ತೀಯೆ. ಮುಂದಿನ ಕಾರ್ಯವನ್ನು

ನಿನಗೇ ಬಿಟ್ಟಿದ್ದೇನೆ". ಈ ಮಾತಿಗೆ ನಂದಾ ಹೇಳಿತು. "ಸಾಧು ಹುಲಿಯೇ, ನಿನ್ನನ್ನು ವಂಚಿಸಿ ಬದುಕಲು ಯಾರಿಗೆ ಸಾಧ್ಯ. "ಆತ್ಮೈವ ವಂಚಿತಸ್ತೇನ ಯಃ ಪರಂ ವಂಚಯಿಷ್ಯತಿ." ಬೇರೊಬ್ಬರನ್ನು ವಂಚಿಸುವವನು ತನ್ನನ್ನೇ ವಂಚಿಸಿಕೊಂಡಂತೆ ಆಗುತ್ತದೆ".

ಹುಲಿ ಹೇಳಿತು : "ಧೇನುಕೇ ಗಚ್ಛ ಪಶ್ಯಂತ್ವಂ ಪುತ್ರಕಂ ಪುತ್ರವತ್ಸಲೇ
ಪಾಯಯಿತ್ವಾ ಸ್ತನಂ ವತ್ಸಮವಲಿಹ್ಯ ಚ ಮೂರ್ಧನಿ" ||

ಧೇನುಕಾ, ಪುತ್ರ ವತ್ಸಲೆಯಾದ ನೀನು ಪುತ್ರನನ್ನು ಕಂಡು, ಮುದ್ದಾಡಿ, ಸ್ತನ್ಯಪಾನ ಮಾಡಿಸು. ನಿನ್ನ ತಾಯಿ, ಒಡಹುಟ್ಟಿದವರನ್ನು ನೋಡು, ಗೆಳತಿಯರು ಹಾಗೂ ಬಂಧು ಬಾಂಧವರನ್ನು ಕಂಡು ಮಾತಾಡು. ಮತ್ತೆ ಶೀಘ್ರವಾಗಿ ಹಿಂದಿರುಗು ನಿನ್ನ "ಶಪಥ ಸತ್ಯವಾಗಲಿ "ಎಂದು ಧ್ಯೇಯ ನಿನ್ನದಾಗಿರಲಿ, ನೀನು ಶೀಘ್ರವಾಗಿ ಹೊರಡು ! ಎಂದು ಹುಲಿ ಹಸುವನ್ನು ಬೀಳ್ಕೊಟ್ಟಿತು.

ಗೋಕುಲದ ಅಂತ್ಯ ಭೇಟಿ

ಪುಲಸ್ತ್ಯ ಹೇಳಿದ : ಹೀಗೆ ನಂದಾ ಹಸು ಅಶ್ರುಪೂರ್ಣ ಮುಖಿಯಾಗಿ, ದೀನಳಾಗಿ ಅಂಬಾ ಎಂದು ಅರಚುತ್ತಾ ಶೋಕ ಸಾಗರದಲ್ಲಿ ಮುಳುಗಿ ಮುಂದೆ ಮುಂದೆ ನಡೆಯಿತು. ಮೊಸಳೆಯ ಬಾಯಿಗೆ ಸಿಕ್ಕಿದ ಆನೆ ಬಿಡಿಸಿಕೊಳ್ಳಲು ಅಶಕ್ತವಾದಂತೆ , ಅಸಹಾಯಕ ಸ್ಥಿತಿಯಲ್ಲಿದ್ದ ನಂದಾ ಮತ್ತೆ ಮತ್ತೆ ವಿಲಾಪಿಸುತ್ತಾ ನಡೆಯುವಾಗ, ಇಂದ್ರಾ ನದಿಯ ದಡದಲ್ಲೇ ತನ್ನ ಕರುವಿನ ಮಧುರ ದನಿಯನ್ನು ಕೇಳಿಸಿಕೊಳ್ಳುತ್ತದೆ. ಎಂದಿನಂತಿಲ್ಲದ ತನ್ನ ತಾಯಿಯಲ್ಲಿ ಆನಂದವನ್ನು ಕಾಣದೆ ಕರುವಿಗೆ ಸಂದೇಹ ಬರುತ್ತದೆ. ದುಃಖದ ಕಾರಣ ತಿಳಿಸಲು ಶಕ್ತಿ ಹೀನಳಾಗಿರುವಳೆಂದು ಕಾರಣ ಕೇಳಿದ ಕರುವಿಗೆ ಹೇಳಿ, ಮೊದಲು ಹಾಲು ಕುಡಿಯಲು ನಂದಾ ಒತ್ತಾಯಿಸುತ್ತಾಳೆ. ಆದರೂ ಒತ್ತರಿಸಿ ಬಂದ ದುಃಖದಲ್ಲಿ ಇಬ್ಬರ ಭೇಟಿಗೆ ಇಂದೇ ಕೊನೆಯ ದಿನವೆಂದೂ, ಇದೇ ಕೊನೆಯ ಸ್ತನ್ಯಪಾನವೆಂದು ಹಸಿದ ಹೆಬ್ಬುಲಿಗೆ ವಚನವಿತ್ತು ಬಂದಿರುವುದರಿಂದ, ಹಿಂದಿರುಗಿ ತನ್ನ ದೇಹವನ್ನೇ ಅದಕ್ಕೆ ಉಣಬಡಿಸಬೇಕಾಗಿರುವುದೆಂದೂ ಹೇಳಿಕೊಳ್ಳುತ್ತಾಳೆ.

ತಾಯಿಯೇ ದೈವ

ಕರುವೂ ತಾಯಿಯ ಜೊತೆಗೆ ಹೊರಡಲು ಸಿದ್ಧವಾಗುತ್ತದೆ. ಮನೆಯಲ್ಲಿ ಬದುಕಿರುವುದಕ್ಕಿಂತ ತನ್ನ ತಾಯಿಯೊಡನೆ ಸಾಯುವುದೇ ಮೇಲು. ತನ್ನನ್ನು ಏಕಾಕಿಯಾಗಿ ಬಾಳಲು ಬಿಡುವ ಹುಲಿಯೇ ತನ್ನನ್ನೂ ಕೊಲ್ಲಲಿ ಎಂದು ಹೇಳಿ ತಾನೇ ಹುಲಿಗೆ

ಆಹಾರವಾಗುವುದಾಗಿ ನಿರ್ಧರಿಸುತ್ತದೆ. ತಾಯಿ ಕೊಟ್ಟ ವಚನವನ್ನು ತಾನೇ ಮಗನಾಗಿ ಸಲ್ಲಿಸಲು ಮುಂದಾಗುತ್ತದೆ.

"ಅನಾಥಸ್ಯ ಚ ಮೇ ನಿತ್ಯಂ ಕೋಹಿ ನಾಥೋ ಭವಿಷ್ಯತಿ

ನಾಸ್ತಿ ಮಾತೃಸಮೋ ಬಂಧುರ್ಬಾಲಾನಾಂ ಕ್ಷೀರಪಾಯಿನಾಂ"

ಅನಾಥನಾಗಿ ಬದುಕಲಾರೆ. ನನಗೆ ದಿಕ್ಕುಯಾರು? ಹಾಲೂಡಿಸುವವರಾರು? ಹಾಲು ಕುಡಿಸುವ ತಾಯಿಗೆ ಸಮನಾದ ಬಂಧು ಬಾಲಕರಿಗೆ ಬೇರೊಬ್ಬರಿಲ್ಲ.

"ನಾಸ್ತಿ ಮಾತೃಸಮೋ ನಾಥೋ ನಾಸ್ತಿ ಮಾತೃಸಮಾಗತಿ

ನಾಸ್ತಿ ಮಾತೃಸಮಃ ಸ್ನೇಹಃ ನಾಸ್ತಿ ಮಾತೃ ಸಮಂ ಸುಖಂ "

ತಾಯಿಗೆ ಸಮನಾದ ನಾಥರಿಲ್ಲ; ತಾಯಿಗೆ ಸಮನಾದ ಮಾರ್ಗದರ್ಶಕರಿಲ್ಲ; ತಾಯಿಗೆ ಸಮನಾದ ವಾತ್ಸಲ್ಯವೂ ಇಲ್ಲ, ಸುಖವೂ ಬೇರೊಂದಿಲ್ಲ. ಇಹಪರದಲ್ಲಿ ತಾಯಿಗೆ ಸಮನಾದ ದೇವರೇ ಇಲ್ಲ. ತಾಯಿಯೇ ಬ್ರಹ್ಮ ಸೃಷ್ಟಿಸಿದ ಧರ್ಮ. ಈ ಮಾತೃ ಸೇವಾ ಧರ್ಮದ ಆಚರಣೆಯೇ ಮಕ್ಕಳಿಗೆ ಪರಮಗತಿ ಎಂದು ಕರುವು ಅಂಗಲಾಚುತ್ತದೆ.

ನಂದಾ ಸಮಾಧಾನ ಮಾಡಿತು : -

ಚಿಕ್ಕ ಮಕ್ಕಳು ಸಾಯುವುದು ತರವಲ್ಲ, ಮಗೂ, ತಾಯಿಯ ಮಾತನ್ನು ನಡೆಸಿಕೊಡುವುದು ಮಕ್ಕಳ ಮೊದಲ ಕರ್ತವ್ಯ. ಸೇವೆ ಮಾಡುವುದು ನಂತರದ ಕೆಲಸ. ಇದೇ ನನ್ನ ಕೊನೆಯ ಸಂದೇಶ. ಮಗೂ, ಕಾಡು, ನದಿ, ಕೆರೆ ಇವುಗಳ ನಡುವೆ ಓಡಾಡುವಾಗ ಪ್ರಮಾದವಾಗುವಂತೆ ನಡೆಯಬೇಡ. ತಪ್ಪು ಮಾಡಿದವರಿಗೆ ವಿನಾಶ ಖಂಡಿತ. ಅತಿಯಾಸೆಯಿಂದ ದುರ್ಗಮವಾದ ಸ್ಥಳಗಳಿಗೆ ಹುಲ್ಲು ತಿನ್ನಲು ಹೋಗಬೇಡ. ದುರಾಸೆಯಿಂದ ಸಮುದ್ರದಲ್ಲಿ ಆಳಕ್ಕೆ ಮುಳುಗುವುದು, ಕಾಡಿನ ಇಕ್ಕಟ್ಟಿನ ಪ್ರದೇಶಗಳಿಗೆ ಪ್ರವೇಶಿಸುವುದು ಮಾನವರು ಮಾಡುವ ತಪ್ಪು ಕಾರ್ಯ. ಅತೀ ಲೋಭ, ಅತೀ ಪ್ರಮಾದ, ಅತೀ ವಿಶ್ವಾಸ – ಈ ಮೂರರಿಂದ ಜಗತ್ತಿಗೇ ಸರ್ವನಾಶ. ಕ್ರೂರಪ್ರಾಣಿಗಳಿಂದ, ಕಳ್ಳ ಕಾಕರಿಂದ ದೂರವಿದ್ದು ಆತ್ಮ ರಕ್ಷಣೆಗೆ ಪ್ರಯತ್ನಿಸು. ಉಗುರುಳ್ಳ ಪ್ರಾಣಿಗಳನ್ನು ನಂಬಬಾರದು ಹಾಗೆಯೇ ಕೊಂಬುವುಳ್ಳವೂ ಸಹ. ಶಸ್ತ್ರಧಾರಣೆ ಮಾಡಿದವರನ್ನೂ, ಹೆಣ್ಣು ಸೇವಕರನ್ನು ನಂಬಬಾರದು. ಅವಿಶ್ವಾಸವಿಡುವವನಲ್ಲಿ ವಿಶ್ವಾಸವಿಡಬಾರದು. ವಿಶ್ವಾಸ ವಿಡುವವನಲ್ಲಿ ಅತೀ ವಿಶ್ವಾಸವಿಡಬಾರದು. ವಿಶ್ವಾಸದಿಂದ ಹುಟ್ಟಿದ ಭಯ

ಬುಡಕ್ಕೆ ಮೂಲವಾಗುತ್ತದೆ. ಕೊನೆಗೆ ತನ್ನ ದೇಹವನ್ನು ನಂಬುವುದೂ ಕಷ್ಟ. ಬಾಲಕನಲ್ಲಿ, ಭೀತನಾದವನಲ್ಲಿ, ಪ್ರಮತ್ತನಾದವನಲ್ಲಿ ವಿಶ್ವಾಸಬೇಡ. ರಾಜರು ಆಳುಗಳ ಕಣ್ಣ ದೃಷ್ಟಿಯಿಂದ ಲೋಕವನ್ನು ಅರಿಯುವಂತೆ, ಗೋವುಗಳು ವಾಸನೆಯಿಂದ ಪರಿಸರವನ್ನು ಅರಿಯಬೇಕು. ಪಥಿಕನು ನೆರಳನ್ನು ಆಶ್ರಯಿಸಿ ಮುಂದೆ ನಡೆಯುತ್ತಾನೆ. ನೀನೂ ಪ್ರಾಣಿಗಳನ್ನು ಸೇರಿಕೊಂಡೇ ನಡೆಯುವುದನ್ನು ಕಲಿ. ಮಗು, ಜಗತ್ತು ನಿತ್ಯವಲ್ಲ. ಅದಕ್ಕಾಗಿ ಶೋಕಿಸುವುದು ಬೇಡ. ನನ್ನ ಮಾತನ್ನು ಪಾಲಿಸು" - ಹೀಗೆ ಹೇಳಿದ ನಂದಾ ಕರುವಿನ ನೆತ್ತಿಯನ್ನು ಆಘ್ರಾಣಿಸಿ, ತಲೆ, ಮೈಯನ್ನು ನೆಕ್ಕಿ, ಸರ್ಪದಂತೆ ಬಿಸಿ ಉಸಿರನ್ನು ಬಿಡುತ್ತಾ, ಮತ್ತೆ ಮತ್ತೆ ಶೋಕದಲ್ಲಿ ಮೈ ಮರೆಯುತ್ತಾಳೆ. ಪುತ್ರ ಹೀನವಾದ ಜಗತ್ತು ಅವಳಿಗೆ ಶೂನ್ಯಪ್ರಾಯವಾಗುತ್ತದೆ. ಕೊನೆಯದಾಗಿ, ಮಗನಿಗೆ ಈ ಮಾತುಗಳನ್ನೂ ತಿಳಿಸುತ್ತಾಳೆ. "ಸ್ನೇಹ, ಸುಖ, ಪ್ರೀತಿ ಯಾವುದೂ ಮಗನಿಗೆ ಸಮನಾದುದಲ್ಲ, ಮಗನಿಂದ ದೊರೆಯುವ ಮೋಕ್ಷ ಯಾವುದರಿಂದಲೂ ದೊರೆಯುವುದಿಲ್ಲ. ಮಗುವೆ ನಿನ್ನನ್ನೂ, ಮಾತೆ, ಗೆಳೆಯ, ಗೆಳತಿಯರನ್ನು ಈ ಗೋಕುಲವನ್ನು ಕಾಣಲು ಸಾಧ್ಯವಾದದ್ದು, ನಾನಿತ್ತ ಸತ್ಯವಚನದಿಂದ ಮಾತ್ರ. ಆದ್ದರಿಂದ, ಮತ್ತೆ ನಾನಲ್ಲಿಗೆ ಹೋಗಬೇಕಾಗಿದೆ. ಎಂದು ಹೇಳಿ ನಂದಾ, ತನ್ನ ಮಗುವನ್ನು ಜೊತೆಯವರ ಮಡಲಿಗೆ ಹಾಕುತ್ತಾಳೆ. ತಾಯೆ ನಾನು ಮಾಡಿರಬಹುದಾದ ತಪ್ಪುಗಳನ್ನು ಕ್ಷಮಿಸು. ನನ್ನ ಮಗನೇ ಇನ್ನು ನಿಮ್ಮೆಲ್ಲರ ಮಗ. ಇನ್ನು ನಾನು ಬರುತ್ತೇನೆ. ನಿಮ್ಮೆಲ್ಲರನ್ನು ನೋಡಲೆಂದೇ ಬಂದವಳು ನಾನು ಮಗನನ್ನು ಕಂಡೆ, ಮುದ್ದಾಡಿದೆ. ನಿಮ್ಮೆಲ್ಲರನ್ನು ನೋಡಿದೆ. ನಾನು ಬೆಳೆದ ಗೋಕುಲವನ್ನು ಕಂಡೆ.

"ವಿಪುಲೇ, ಚಂಪಕೇ, ದಾಮೇ, ಭದ್ರೇ, ಸುರಭಿ, ಮಾಲಿನಿ,
ವಸುಧಾರೇ, ಪ್ರಿಯೇ, ನಂದೇ, ಮಹಾನಂದೇ, ಘಟಸ್ರವೇ "

ಗೆಳತಿಯನ್ನು ಹೆಸರಿಸಿ ಕೂಗಿ ಕರೆದು ಅವರನ್ನೆಲ್ಲ ವಂದಿಸುತ್ತಾಳೆ ನಂದಾ. ಅರಿತೋ ಅರಿಯದೆಯೋ ನಾನು ಅಪ್ರಿಯವಾಗಿ ನಡೆದು ಕೊಂಡಿದ್ದರೆ ವಿಶಾಲ ಮನಸ್ಸಿನ ಗೋಮಾತೆಯರೇ, ಕ್ಷಮಿಸಿರಿ" ಎಂದು ಬೇಡುತ್ತಾಳೆ. ತಾವೆಲ್ಲಾ ನನ್ನ ಬಾಲಕನನ್ನು ಕ್ಷಮಿಸಿರಿ. ಅವನಿಗೆ ಶುಭ ಕೋರಿರಿ. ತಾಯಿಯಿಲ್ಲದೆ ಅನಾಥನಾದ , ದೀನನಾದ ಮಾತೃ ಶೋಕಾಗ್ನಿ ಸಂತಪ್ತನಾದ ನನ್ನ ಪುತ್ರನನ್ನು ರಕ್ಷಿಸಿರಿ. ನೀವೇ ಅವನಿಗೆ ತಾಯಂದಿರು, ನನ್ನ ಸಹೋದರಯರಾದ ನೀವು ನನ್ನ ಪುತ್ರನನ್ನು ಕಾಪಾಡಿರಿ. ಇನ್ನು ನಾನು ಹೋಗುತ್ತೇನೆ. ಸತ್ಯವಚನದಂತೆ ಹುಲಿಗೆ ಆಹಾರವಾಗುತ್ತೇನೆ.

ಸತ್ಯ ಪ್ರತಿಪಾದನೆ

ಗೆಳತಿಯರು ಹೇಳಿದರು, ನಂದಿನಿಯೇ "ಸತ್ಯ ವಾಕ್ಯವನ್ನು ಉಳಿಸಿಕೊಳ್ಳುವ ಕಾತುರದಲ್ಲಿ ಭಯಂಕರ ನೋವು ತಂದುಕೊಂಡೆ. ಸತ್ಯ ನುಡಿಯಿಂದಲೇ ವಂಚಿಸಿ ಮಹಾ ಭಯಕಾರಿ ಪ್ರಾಣಿಗಳಿಂದ ಆತ್ಮ ರಕ್ಷಣೆ ಪಡೆಯಬೇಕು. ಪ್ರಾಣ ತ್ಯಾಗ ಮಾಡುವ ಸಂದರ್ಭದಲ್ಲಿ ಪ್ರಮಾಣ ವಚನ ಮೀರಬಹುದೆಂದು, ಅದು ಪಾತಕವೆಲ್ಲವೆಂದು ಋಷಿವಾಕ್ಯವೇ ಇದೆ. ಪ್ರಾಣ ಉಳಿಸಲು ಸುಳ್ಳು ಹೇಳಬಹುದು".

ನಂದಾ ಹೇಳಿದಳು "ನಿಜ. ಋಷಿ ವಾಕ್ಯವನ್ನು ಸ್ವಾರ್ಥಕ್ಕೆ ಉಳಿಸಿಕೊಳ್ಳಬಾರದು. ತನ್ನ ಪ್ರಾಣ ರಕ್ಷಣೆಗಾಗಿ ಯಾರೇ ಆಗಲಿ ಅನೃತವನ್ನಾಡಬಾರದು. ಗರ್ಭದಲ್ಲಿದ್ದಾಗಲೂ ಪ್ರಾಣ ಏಕಾಕಿ ; ಮರಣ ಕಾಲದಲ್ಲೂ ಏಕಾಕಿ; ಸುಖ ದುಃಖಗಳನ್ನನುಭವಿಸುವಾಗಲೂ ಆತನೊಬ್ಬನೇ ತಾನೇ ? "

ಮತ್ತೆ ಹೀಗೆ ಮುಂದುವರೆಸಿದ ನಂದಾ

"ಸತ್ಯೇ ಪ್ರತಿಷ್ಠತಾ ಲೋಕಾಧರ್ಮಃ ಸತ್ಯೇ ಪ್ರತಿಷ್ಠಿತಃ
ಉದಧಿಃ ಸತ್ಯ ವಾಕ್ಯೇನ ಮರ್ಯಾದಾಂ ನ ವಿಲಂಘತೇ"

"ಸತ್ಯದ ಮೇಲೆ ಲೋಕ ನಿಂತಿರುತ್ತದೆ. ಸತ್ಯದ ಮೇಲೆ ಧರ್ಮ ನಿಂತಿರುತ್ತದೆ. ಸಾಗರವು ಸಹ ಸತ್ಯ ಧರ್ಮಕ್ಕಾಗಿ ಎಲ್ಲೆ ಮೀರುವುದಿಲ್ಲ. ವಿಷ್ಣುವಿಗೆ ಪೃಥ್ವಿಯನ್ನು ದಾನ ಮಾಡಿ, ಪಾತಾಳದಲ್ಲಿ ನೆಲಸಿದ ಬಲಿಯು ಮೋಸಕ್ಕೆ ಬಲಿಯಾದರೂ ಸತ್ಯವನ್ನು ಬಿಡಲಿಲ್ಲ. ಅಗಸ್ತ್ಯರ ಮಾತನ್ನು ಉಳಿಸಲು ವಿಂಧ್ಯ ಪರ್ವತವೂ ಕೂಡ ಬೆಳೆಯದೇ ನಿಂತಿತು. ಧರ್ಮ, ಮೋಕ್ಷಗಳೆಲ್ಲ ಸತ್ಯದ ಮೇಲೆಯೇ ನಿಂತಿದೆ. ಸತ್ಯವನ್ನುಕಳೆದು ಕೊಂಡಂದು ಮಾನವ ಸರ್ವನಾಶವಾಗುತ್ತಾನೆ. ಸತ್ಯವೆಂಬ ತೀರ್ಥದಲ್ಲಿ ಸ್ನಾನ ಮಾಡಿದವನು ಶಾಪ ವಿಮುಕ್ತನಾಗಿ ಪರಮ ಗತಿ ಪಡೆಯುತ್ತಾನೆ. ಸಾವಿರ ಅಶ್ವಮೇಧ ಕ್ಕಿಂತ ಸತ್ಯಪರಿಪಾಲನೆಯೇ ಅತಿ ಶ್ರೇಷ್ಠ." ಅಗ ಸಖಿಯರು ಹೇಳಿದರು, "ನಂದಿನಿಯೇ ಪರಮಸತ್ಯಕ್ಕಾಗಿ ಪ್ರಾಣ ತ್ಯಾಗ ಮಾಡುವ ನೀನು ಸುರಾಸುರರಿಂದ ನಮಸ್ಕಾರಯೋಗ್ಯ ಳಾದವಳು. ನೀನು ಧರ್ಮ ದುರಂಧರೆ. ಸತ್ಯ ನಿಷ್ಠೆಯಿಂದ ತ್ರಿಲೋಕದ ವಸ್ತುಗಳನ್ನು ಪಡೆಯುವುದು ಸುಲಭ. ನಿನ್ನ ಸತ್ಯನಿಷ್ಠೆಯೇ ನಿನ್ನ ಮಗನನ್ನು ನಿನ್ನಿಂದ ಅಗಲಿಸಲಾರದು ಎಂಬ ನಂಬಿಕೆ ನಮಗಿದೆ. ಹೋಗಿ ಬಾ ನಂದಾ " ಪುಲಸ್ತ್ಯ ಹೇಳಿದ, ಹೀಗೆ ಗೋಕುಲವನ್ನು ತ್ರಿಪ್ರದಕ್ಷಣೆ ಮಾಡಿ ಗಿಡ ಮರ ಬಳ್ಳಿಗಳ ಸ್ಪರ್ಶಮಾಡಿ, ವಂದಿಸಿ, ಅಷ್ಟದಿಕ್ಪಾಲಕರನ್ನು

ಸ್ಮರಿಸುತ್ತಾ ತನ್ನ ಮಗುವನ್ನು ರಕ್ಷಿಸಲು ವನ ದೇವಿಯರನ್ನು ಪ್ರಾರ್ಥಿಸುತ್ತಾ ವನಸ್ಪತಿಗಳನ್ನು ಕುರಿತು,

"ಚಂಪಕಾಶೋಕ ಪುನ್ನಾಗಃ ಸರಳಾರ್ಜುನ ಕಿಂಶುಕಾಃ
ಶೃಣ್ವಂತು ಪಾದಪಾಃ ಸರ್ವೇಸಂದೇಶಂ ಮಮ ವಿಪ್ಲವಂ"

ಎಂದು ಹೆಸರಿಸಿ, ನನ್ನ ಮಗು ಏಕಾಕಿಯಾಗಿ ವನದಲ್ಲಿ ಸಂಚರಿಸುವಾಗ ರಕ್ಷಣೆ ಕೊಡಲು ಅವುಗಳಿಗೆ ಒಪ್ಪಿಸುತ್ತಾಳೆ. - ಹೀಗೆ ಬೀಳ್ಕೊಂಡು ಗೋಕುಲದಿಂದ ಹೊರಟ ಕ್ಷಣದಲ್ಲಿ "ಮಗುವಿನ ದರ್ಶನ ಇನ್ನು ಇಲ್ಲವಲ್ಲ" ಎಂಬುದನ್ನು ನೆನೆದುಕೊಂಡ ನಂದೆಯ ಎದೆಗೆ ಕಿಚ್ಚು ಇಟ್ಟಂತಾಗುತ್ತದೆ.

ಶರೀರ ಸಮರ್ಪಣೆ

ಕೊಟ್ಟ ಮಾತಿನಂತೆ ನಂದಾ ಹಿಂತಿರುಗಿ ಹುಲಿಯ ಮುಂದೆ ನಿಲ್ಲುತ್ತಾಳೆ. ಅರಳಿದ ಮುಖ ಚೂಪು ಹಲ್ಲುಗಳ ವ್ಯಾಘ್ರ ಅವಳ ಮುಂದೆ ಮುಖಾಮುಖಿಯಾಗುತ್ತದೆ. ಈ ಸಮಯಕ್ಕೆ ಬಾಲವನ್ನೆತ್ತಿ ವೇಗವಾಗಿ ಧಾವಿಸಿ ಬಂದ ನಂದಾಳ ಕರು ಹುಲಿಯ ಎದುರು ನಿಲ್ಲುತ್ತದೆ. ತನ್ನ ಮುಂದೆ ನಿಂತ ತನ್ನ ಕರುವನ್ನು ಮೃತ್ಯುವಿನಂತೆ ನಿಂತ ವ್ಯಾಘ್ರನನ್ನು ಕಂಡ ನಂದಾ ಹೇಳಿತು,

"ಭೋಭೋ ಮೃಗೇಂದ್ರಾಗತಾಹಂ , ಸತ್ಯ ಧರ್ಮ ವ್ರತೇ ಸ್ಥಿತಾ
ಕುರುಂ ತೃಪ್ತಿಂ ಯಥಾ ಕಾಮಂ ಮಮಮಾಂಸೇನ ಸಾಂಪ್ರತಂ ||"

"ಧರ್ಮ ಮಾತೆಯಾದ ನಾನು ನನ್ನ ಮಾತಿನಂತೆ ಬಂದಿದ್ದೇನೆ. ಮೃಗರಾಜಾ, ನನ್ನ ಮಾಂಸವನ್ನು ತಿಂದು ತೃಪ್ತಿ ಪಡು". ಮುಂದುವರೆದ ನಂದಾ ಹೇಳಿತು.

"ತೃಪ್ಯಂತು ಪಂಚ ಭೂತಾನಿ ಪಬತ್ವ ಶೋಣಿತಂ ಮದು
ಮೃತಾಯಾಂ ಮಯಿ ಚ ವ್ಯಾಘ್ರ ಭಕ್ಷಸ್ಯೇಮಂ ಸುಪುತ್ರಕಂ "

"ನಿನ್ನ ದೇಹದ ಪಂಚಭೂತಗಳು ನನ್ನ ರಕ್ತದಿಂದ ತೃಪ್ತಿ ಹೊಂದಲಿ, ಬಳಿಕ ನನ್ನ ಕಂದನನ್ನು ತಿಂದು ಸಂತಸಪಡು" ಹುಲಿ ಹೇಳಿತು,

"ಸ್ವಾಗತಂ ತವ ಕಲ್ಯಾಣಿ ಧೇನುಕೇ ಸತ್ಯವಾದಿ ನಿ
ನಹಿ ಸತ್ಯವತಾಂ ಕಿಂಚಿದಶುಭಂ ಭವತಿ ಕ್ವಚಿತ್ "

"ಸತ್ಯವಾದಿನಿ ಕಲ್ಯಾಣಿ ಧೇನುವೇ ನಿನಗೆ ಸ್ವಾಗತ. ಸತ್ಯವಂತರಿಗೆ ಅಮಂಗಳವಾಗಲಾರದು. ನೀನು ಮರಳಿ ಬರುವುದಾಗಿ ಮಾತು ಕೊಟ್ಟಿದ್ದೆ. ನಿಜ. ಆದರೆ ನನಗೆ ನಂಬಿಕೆ

ಇರಲಿಲ್ಲ. ಈಗ ನನಗೆ ಕೌತುಕವಾಗಿದೆ. ನೀನು ಹಿಂದಿರುಗಿದುದು ಹೇಗೆ ? ಧೇನುವೇ ನಿನ್ನ ಸತ್ಯ ಪರೀಕ್ಷೆಗಾಗಿಯೇ ನಿನ್ನನ್ನು "ಹೋಗು" ಎಂದು ಹೇಳಿದೆ ನನ್ನ ಬಳಿ ಬಂದವರಾರೂ ಜೀವಂತವಾಗಿರುವುದು ಸಾಧ್ಯವಾಗಿರಲಿಲ್ಲ. ನನ್ನ ಸತ್ಯಾನ್ವೇಷಣಾ ಕಾರ್ಯ ಮುಗಿಯಿತು. ಈಗ ನಾನು ನಿನ್ನನ್ನು ಮುಕ್ತಳನ್ನಾಗಿ ಮಾಡಿದ್ದೇನೆ. ಧೇನುವೇ, ನೀನು ನನ್ನ ಸಹೋದರಿ ನಿನ್ನ ಮಗ ನನ್ನ ಸಹೋದರಿಯ ಮಗ. ಪಾಪ ಕರ್ಮಿಯಾದ ನನಗೆ ನೀನು ಉಪದೇಶ ನೀಡಿದಂತಾಗಿದೆ".

"ಸತ್ಯೇ ಪ್ರತಿಷ್ಠಿತಾ ಲೋಕಾಃ ಧರ್ಮಸತ್ಯೇ ಪ್ರತಿಷ್ಠಿತಃ
ಸತ್ಯೇನ ಗೌಃ ಕ್ಷೀರಧಾರಾಂ ಪ್ರಮುಂಚತಿ ಹವಿಪ್ರಿಯಾಂ॥"

"ಸತ್ಯದ ಮೇಲೆ ಜಗತ್ತು ನಿಂತಿದೆ. ಸತ್ಯದ ಮೇಲೆ ಧರ್ಮವು ನಿಂತಿದೆ. ಸತ್ಯದಿಂದಲೇ ನಿನ್ನ ಹಾಲು ಹವಿಸ್ಸಿಗೆ ಯೋಗ್ಯವಾಗಿರುತ್ತದೆ. ನಿನ್ನ ಕ್ಷೀರವನ್ನು ಪಾನ ಮಾಡಿದ ಯಾರೇ ಆಗಲಿ ಧನ್ಯರು." - ಹೀಗೆ ಹೇಳಿ ವಿಸ್ಮಯ ಭಾವದಲ್ಲಿ ಹುಲಿ ತನ್ನೊಳಗೆ ಚಿಂತನೆ ಮಾಡತೊಡಗಿತು. "ನನ್ನ ಮುಂದೆ ದೇವತೆಗಳೇ ಸತ್ಯದ ಕನ್ನಡಿಯನ್ನು ಹಿಡಿದಿದ್ದಾರೆ. ಸತ್ಯದ ಹಾದಿಯನ್ನು ತೋರಿಸಿದ್ದರಿಂದ ನನ್ನ ಜೀವಿತವೇ ಜಿಗುಪ್ಸೆ ಯಾಯಿತು. ನನ್ನ ಕ್ರೂರತನದಿಂದ ನಾನು ಕೊಂದು ತಿಂದ ಪ್ರಾಣಿಗಳ ಲೆಕ್ಕ ಈ ವರೆಗೆ ಸಾವಿರಕ್ಕೂ ಮಿಗಿಲಾಗಿರಬಹುದು. ನನ್ನ ಮುಂದಿನ ಗತಿಯೇನು? ನಾನು ಪಾಪಿ. ದುರಾಚಾರಿ. ನೃಶಂಸ, ಜೀವಘಾತಕ , ನನಗೆ ಯಾವ ಲೋಕ ಕಾದಿದೆಯೋ? ಹಲವು ತೀರ್ಥದಲ್ಲಿ ಮಿಂದು, ಹಲುವು ಯಾತ್ರೆ ಕೈಗೊಂಡು, ಪಾಪವನ್ನು ತೊಳೆದು ಗಿರಿಯ ಮೇಲೇರಿ ಕೆಳಗೆ ಬೀಳುತ್ತೇನೆ. ಇಲ್ಲವೇ, ಬೆಂಕಿಗೆ ಆಹುತಿಯಾಗುತ್ತೇನೆ". ಹೀಗೆ ಚಿಂತಿಸಿದ ವ್ಯಾಘ್ರ ನಂದಳನ್ನು ಕುರಿತು, "ಧೇನುಕೇ, ಪಾಪ ಪರಿಹಾರಕ್ಕೆ ಬೇಕಾದ ಶ್ರೇಷ್ಠ ತಪಸ್ಸು ಯಾವುದು ಎಂದು ಕೇಳುತ್ತದೆ.

ನಂದಾ ಹೇಳಿತು -" ತಪಃಕೃತೇ ಪ್ರಶಂಸಂತಿ ತ್ರೇತಾಯಾಂಜ್ಞಾನ ಕರ್ಮಚ
ದ್ವಾಪರೇ ಯಜ್ಞಮೇ ಭಾಹುರ್ಪಾನ ಮೇಕಂ ಕೃತಯುಗೇ"

ಕೃತಯುಗದಲ್ಲಿ" ತಪಸ್ಸು," ತ್ರೇತಾಯುಗದಲ್ಲಿ "ಜ್ಞಾನ"ಕರ್ಮ, ದ್ವಾಪರದಲ್ಲಿ "ಯಜ್ಞ" ಶ್ರೇಷ್ಠ ಮತ್ತು ಕಲಿಯುಗದಲ್ಲಿ "ದಾನ" ಶ್ರೇಷ್ಠವೆಂದು ಹೇಳುತ್ತಾರೆ. ಚರಾಚರ ಪ್ರಾಣಿಗಳಲ್ಲಿ ಅದರಲ್ಲೂ ದಾನಗಳಲ್ಲಿ ಶ್ರೇಷ್ಠವಾದುದು "ಅಭಯ"ದಾನ.

"ನಾಸ್ತ್ಯ ಹಿಂಸಾಸಮಂ ದಾನಂ ನಾಸ್ತ್ಯ ಹಿಂಸಾಸಮಂತಪಃ

ಯಥಾ ಹಸ್ತಿಪದೇವಹ್ಯನ್ಯತ್ಪದಂ ಸರ್ವ ತ್ರಲೀಯತೇ"

"ಅಹಿಂಸೆಗೆ ಸಮನಾದ ದಾನವಾಗಲೀ, ತಪಸ್ಸಾಗಲೀ ಇಲ್ಲ. ಆನೆಯ ಹೆಜ್ಜೆಯೊಳಗೆ ಯಾರ ಹೆಜ್ಜೆಯಾದರೂ ಅಡಗಿ ಹೋಗುವಂತೆ ಅಹಿಂಸೆಯಲ್ಲಿ ಸರ್ವವೂ ಅಡಗಿರುತ್ತದೆ. ವ್ಯಾಘ್ರ ಶ್ರೇಷ್ಠನೇ, ನೀನು ಮೋಕ್ಷಪಡೆದು ದುಃಖವನ್ನು ದೂರಮಾಡಿಕೋ. ಇದೇ ನಿನಗೆ ಶ್ರೇಯಸ್ಸು"

ಜನ್ಮಸ್ಮೃತಿ ಶಾಪವಿಮೋಚನೆ

"ಪ್ರಭಂಜನ ಎಂಬ ಹೆಸರು ಪಡೆದು, ಹಿಂದಿನ ಜನ್ಮದಲ್ಲಿ ಹರಿಣಿಯೊಂದನ್ನು ಕೊಂದಿದ್ದಕ್ಕಾಗಿ, ಶಾಪ ಬಂದ ಬಗೆಯನ್ನೇ ನಾನು ಮರೆತಿದ್ದೆ. ದುಷ್ಟ ಪ್ರಾಣಿಯಾಗಿ ಹಿಂಸಾಕಾರ್ಯದಲ್ಲಿ ನಿರತನಾದ್ದರಿಂದ ಜನ್ಮ ಸ್ಮೃತಿಯೇ ಹಾರಟು ಹೋಗಿತ್ತು. ಗೋವಿನ ಸಂದರ್ಶನದಿಂದ ಪೂರ್ವಜನ್ಮಸ್ಮರಣೆಯಾಗಿ ಸದ್ಗತಿ ಪಡೆಯುವ ಸಮಯ ಒದಗಿ ಬರುತ್ತಿದೆ. ಹೀಗೇ ಮುಂದುವರೆದ ಹುಲಿ

"ಕಿಂತೇಭಿದಾನಂ ಕಲ್ಯಾಣಿ ಭ್ರೂಹಿಮೇ ತಚ್ಛ ಸೋಭಸಂ"

"ಕಲ್ಯಾಣಿಯೇ, ಧರ್ಮವನ್ನು ನೆಲೆಗೊಳಿಸಿದ ನಿನ್ನ ಶುಭ ಅಭಿದಾನವೇನೆಂದು ತಿಳಿಯಲು ಕುತೂಹಲ ವಾಗುತ್ತಿದೆ ಎಂದು ಹೇಳಿತು.

ಪ್ರಾಚೀನ ಈಜಿಪ್ಟಿನ ಮೂರ್ತಿ ಶಿಲ್ಪ

ಡಾ. ಎಸ್. ಎಸ್. ಶಿವರುದ್ರಸ್ವಾಮಿ

- ೧ -

ದೇವತಾರಾಧನೆಯಲ್ಲಿ ಈಜಿಪ್ಟರು ಅತಿಯಾದ ಆಸಕ್ತಿಯನ್ನೂ, ನಂಬಿಕೆಯನ್ನೂ ಇಟ್ಟುಕೊಂಡಿದ್ದರು - ಎಂದು ಜಗತ್ತಿನ ಪ್ರಥಮ ಇತಿಹಾಸಕಾರನೆಂಬ ಖ್ಯಾತಿಗೆ ಈಡಾಗಿರುವ ಹೆರೊಡಟಸ್ ನು ಹೇಳುತ್ತಾನೆ. ಇದು ರಾಷ್ಟ್ರೀಯ ಅಂಶವಾಗಿದ್ದರೂ, ಅಲ್ಲಿನ ಪ್ರತಿಯೊಂದು ನಗರದಲ್ಲೂ ವಿಭಿನ್ನ ಅಭಿವ್ಯಕ್ತನೆಯನ್ನು ಪಡೆದುಕೊಂಡಿತ್ತು. ಒಂದೊಂದು ಪಂಗಡಕ್ಕೂ ಒಬ್ಬೊಬ್ಬ ದೇವರು ಇರುತ್ತಿದ್ದ. ಹೆಚ್ಚು ಜನಪ್ರಿಯವಾದ ಔಸಿರಿಸ್ ನಂತಹ ದೇವಗಣಗಳು ವಿಭಜನೆ ಹೊಂದಿದ ಅಂಶ ಪುರಾತನ ಕಾಲದ ದೈವತ್ವದ ಬೆಳವಣಿಗೆಯನ್ನು ಗಮನಿಸಿದರೆ ಅರಿವಾಗುತ್ತದೆ. ಇವೆಲ್ಲದರ ಫಲವಾಗಿ - ಅನೇಕ ಅರಸುಮನೆತನಗಳ ಮತ್ತು ಪಂಗಡಗಳ ಸಂಪರ್ಕದಿಂದ - ಬಹು ದೇವತಾರಾಧನೆ ಜಾರಿಗೆ ಬಂದಿತು. ಪುರಾಣ ಮತ್ತು ಪುರಾಣ ಸಾಹಿತ್ಯಗಳು ರೂಪಗೊಂಡ ಮೇಲೆ ವಿವಿಧ ಮೂಲಗಳಿಂದ ಬಂದ ದೇವತೆಗಳಲ್ಲಿ ಒಂದು ಗೂಡುವಿಕೆ ಉಂಟಾಯಿತು. ಸಾಮಾನ್ಯವಾಗಿ ಈಜಿಪ್ಟರು ಮಹಾನ್ ದೇವರಿಗೆ ಭಕ್ತಿಯನ್ನು ಸೂಚಿಸುತ್ತಿದ್ದರು. ಇಲ್ಲಿ ಮಹಾನ್ ದೇವರೆಂದರೆ ತನ್ನೂರಿನ ಅಥವಾ ತನ್ನ ನಗರದ ದೇವರೆಂದೇ ಅರ್ಥ. ಈ ದೇವತೆಗಳು ಶಕ್ತಿಯುತರಾಗಿದ್ದರೇ ಹೊರತು ಸರ್ವವ್ಯಾಪಿಯಾಗಿರಲಿಲ್ಲ. ಭೂಮಿಯ ಮೇಲೆ ನಡೆಯುವ ಘಟನೆಗಳನ್ನು ಅವರು ಅರಿಯಬೇಕಿತ್ತು. ಇಲ್ಲವೇ ಅವರಿಗೆ ತಿಳಿಸಬೇಕಿತ್ತು. ಅವರು ಅಮರರಲ್ಲ; ಪುರಾಣಗಳ ಪ್ರಕಾರ ಅವರೂ ಕೂಡ ನೋವು, ಮುಪ್ಪು, ಮತ್ತು ಸಾವನ್ನು ಅನುಭವಿಸಲೇ ಬೇಕು. ಈ ದೇವರನ್ನು ಅತಿಮಾನುಷ ಅಥವಾ ಮಾನವಾತೀತರಾಗಿ ಚಿತ್ರಿಸುತ್ತಿರಲಿಲ್ಲ. ಸಾಮಾನ್ಯ ಮನುಷ್ಯರಂತೆ ಅಥವಾ ಪ್ರಾಣಿಗಳಂತೆ ಅಥವಾ ಮನುಷ್ಯ ದೇಹ ಮತ್ತು ಪ್ರಾಣಿಗಳ ಮುಖವನ್ನು ಹೊಂದಿರುವಂತೆ ರೂಪಿಸಲಾಗುತ್ತಿತ್ತು. ದೀರ್ಘಕಾಲ ಬಾಳಿದ ಈಜಿಪ್ಟಿನ ನಾಗರಿಕತೆಯಲ್ಲಿ ಹಲವಾರು ಪಂಗಡಗಳು ಮತ್ತು ಜನಾಂಗಗಳು ಸಂಮಿಲನವಾದಾಗ ಅವರ ಧಾರ್ಮಿಕ ವಿಧಿಗಳು ಮತ್ತು ದೈವ ಕಲ್ಪನೆಗಳು ಒಂದು ಗೂಡಿ ಹೊಸ ದೇವರುಗಳು ಉದ್ಭವಿಸಿದವು. ದೇವತೆಗಳ ಸಂಖ್ಯೆ ಬೆಳೆಯುತ್ತಾ ಹೋಯಿತು. ಈಜಿಪ್ಟಿನ ಭಿತ್ತಿಚಿತ್ರಗಳು,

ಉಬ್ಬುಗೆತ್ತನೆಗಳು, ಅಂತ್ಯ ಸಂಸ್ಕಾರದ ಹಾಗೂ ಆರಾಧನಾ ಕೃತಿಗಳಲ್ಲಿ ಅಗಾಧ ಸಂಖ್ಯೆಯ ವಿವಿಧ ರೂಪದ ದೇವರ ಚಿತ್ರಗಳು ಹಾಗೂ ಅವರ ಕಲ್ಪನೆಗಳನ್ನು ನೋಡಬಹುದು. ಅವರ ಮಂತ್ರಕೃತಿಗಳು, ಧಾರ್ಮಿಕ ನಾಟಕಗಳು ಮತ್ತು ಗ್ರಂಥಗಳು ಈ ಮಾತನ್ನು ವಿಶದಗೋಳಿಸುತ್ತವೆ. ಈ ನಾಡಿನ ದೈವ ಕಲ್ಪನೆ ಅತಿ ಸಂಕೀರ್ಣವೂ, ಅತಿ ವೈರುಧ್ಯವೂ ಆಗಿ ದಿಗ್ಭ್ರಮೆಗೊಳಿಸುತ್ತವೆ.

ಪುರಾತನ ಈಜಿಪ್ಟರ ಮೊದಲ ದೈವ ಕಲ್ಪನೆ ಆಫ್ರಿಕಾದ ಬುಡಕಟ್ಟು ಜನರ ನಂಬಿಕೆ - ಆಚರಣೆಗಳನ್ನು ಹೋಲುತ್ತಿತ್ತು. ಅವರ ವಿಧಿ - ನಿಯಮಗಳು, ಅದರಲ್ಲೂ ಅಂತ್ಯ ಸಂಸ್ಕಾರಕ್ಕೆ ಸಂಬಂಧಿಸಿದ ಆಚರಣೆಗಳಿಗೂ ಇಂದಿನ ಮಧ್ಯ ಆಫ್ರಿಕಾದ ಬುಡಕಟ್ಟು ಜನರ ಆಚರಣೆಗಳಿಗೂ ಸಾದೃಶ್ಯವಿದೆ. ಈ ಹಂತದಲ್ಲಿ ಕ್ರಿ.ಪೂ. ೧೦,೦೦೦ ದಿಂದಲೂ ಪ್ರಾಣಿಪೂಜೆ ಸಾಮಾನ್ಯವಾಗಿತ್ತು. ಆದಿ ಕಾಲದ ಈ ಆರಾಧನೆಯ ಪ್ರಭಾವ ರೋಮನ್ನರ ಕಾಲದಲ್ಲೂ ಮುಂದುವರೆದಿತ್ತು. ಮನುಷ್ಯ ಮತ್ತು ಪ್ರಾಣಿಗಳ ಸಂಬಂಧವೇ ಕಾರಣ ವಿರಬಹುದು. ಪ್ರತಿಯೊಂದು ಪಂಗಡವೂ ತನ್ನದೇ ಆದ ಪವಿತ್ರ ಲಕ್ಷಣಗಳು ಅಥವಾ ಪ್ರಾಣಿ ಆಕೃತಿಯನ್ನು ಒಳಗೊಂಡಿತ್ತು. ಆ ಪ್ರಾಣಿಗಳ ಬದುಕನ್ನು ಎಚ್ಚರಿಕೆಯಿಂದ ಕಾಯ್ದಿಡಲಾಗಿತ್ತು. ಅವುಗಳನ್ನು ಆರಾಧಿಸಿ, ನಿಗದಿತ ಕಾಲದಲ್ಲಿ ಬಲಿಕೊಟ್ಟು, ಧಾರ್ಮಿಕ ಆಚರಣೆಯ ನೈವೇದ್ಯವಾಗಿ ಆಯಾ ಪಂಗಡದವರು ಸ್ವೀಕರಿಸುತ್ತಿದ್ದರು. ಹೆರ್ಮೋಪಾಲಿಸ್ ನಲ್ಲಿ ಬಬೂನ್ ಕೋತಿಯನ್ನೂ, ನೈಲ್ ನದಿ ಮುಖಜಭೂಮಿಯಲ್ಲಿ ಸಿಂಹಿಣಿಯನ್ನೂ, ಬೆನಿಹಸನ್ ಹತ್ತಿರವಿರುವ ಬುಬಸ್ಟಿಸ್‌ನಲ್ಲಿ ಬೆಕ್ಕನ್ನು ಪೂಜಿಸ ಲಾಗುತ್ತಿತ್ತು. ವಿವಿಧ ತಳಿಯ ಎತ್ತುಗಳನ್ನು ಅನೇಕ ನಗರಗಳಲ್ಲಿ ಪವಿತ್ರವೆಂದು ಪರಿಗಣಿಸಲಾಗುತ್ತಿತ್ತು. ಮೆಂಫಿಸ್, ಹೆಲಿಯೊಪಾಲಿಸ್, ಹೆರ್ಮಿರಿಸ್, ತೇಬ್ಸ್, ಅಲೆಕ್ಸಾಂಡ್ರಿಯ ಮುಂತಾದ ಸ್ಥಳಗಳಲ್ಲಿ ಎತ್ತನ್ನು ಪೂಜಿಸುತ್ತಿದ್ದರು. ಅತ್‌ಫಿಹದಲ್ಲಿ ಹಸುವನ್ನು ಗೌರವಿಸಲಾಗುತ್ತಿತ್ತು. ಟಗರನ್ನು ಅನೇಕ ಸ್ಥಳಗಳಲ್ಲಿ ಪೂಜಿಸುತ್ತಿದ್ದರು. ಈಜಿಪ್ಟರು ಹಿಪೊಪಾಟಮಸ್, ನರಿ ಮತ್ತು ಮುಂಗುಸಿಗಳನ್ನು ಪವಿತ್ರವೆಂದು ಪರಿಗಣಿಸಿದ್ದುಂಟು. ಪಕ್ಷಿಗಳಲ್ಲಿ ಗಿಡುಗವನ್ನು ಅರಸನ ಆತ್ಮವೆಂದು, ರಣಹದ್ದನ್ನು ಮಾತೃದೇವತೆಯೆಂದು ಜನರು ಭಾವಿಸಿದ್ದರು. ಮೊಸಳೆಯ ಬಗ್ಗೆ ಜನರು ಭಯವನ್ನು ವ್ಯಕ್ತಪಡಿಸುತ್ತಿದ್ದರು. ಸರ್ಪ ರಾಜಚಿಹ್ನೆಯಾಗಿತ್ತು ಹಾಗೂ ಕೃಷಿಯ ದೇವತೆಯೆಂದು ನೈಲ್ ನದಿಯ ಮಧ್ಯಭಾಗದ ಜನರು ತಿಳಿದಿದ್ದರು. ಅವುಗಳನ್ನು ಮನೆಯಲ್ಲಿಟ್ಟು

ಸಾಕಲಾಗುತ್ತಿತ್ತು. ಪ್ಲೇಗ್ ರೋಗವನ್ನು ತರುವ ಇಲಿಗಳನ್ನು ನಾಶಮಾಡುವ ಅನುಕೂಲಕರ ಜಂತುಗಳೆಂದು ಅವುಗಳನ್ನು ಜನರು ತಿಳಿದಿದ್ದರು.

ಅನಂತರದ ಕಾಲದಲ್ಲಿ ಮಾನವ ರೂಪಿ ದೇವರುಗಳ ಆಗಮನವಾಯಿತು. ಪ್ರಾಣಿಗಳ ಶಿರಸ್ಸನ್ನು ಉಳ್ಳ ಈ ದೇವತೆಗಳು ಈಜಿಪ್ಟಿನಲ್ಲಿ ವಿಲಕ್ಷಣವಾದ ಸಂಗತಿಯಾಗಿವೆ. ಪ್ರತಿಯೊಂದು ಊರು, ನಗರ ಮತ್ತು ಪಂಗಡಗಳಲ್ಲಿ ದೇವಾಲಯಗಳಿದ್ದವು. ಇವುಗಳನ್ನು ದೇವದುರ್ಗಗಳೆಂದು ಭಾವಿಸಲಾಗಿತ್ತು. ದೇವರ ಬೇಕು - ಬೇಡಗಳನ್ನು ದೈವಕಿಂಕರರಾದ ಅರ್ಚಕರು ಒದಗಿಸುತ್ತಿದ್ದರು. ಇದಕ್ಕೆ ದೇವರು ಪ್ರತಿಯಾಗಿ ಜನರನ್ನು ರಕ್ಷಿಸುತ್ತಿದ್ದ. ಅವರ ಹೊಲ ಮತ್ತು ಪ್ರಾಣಿ ಮಂದೆಗಳಲ್ಲಿ ಸಮೃದ್ಧತೆಯನ್ನು ನೀಡುತ್ತಿದ್ದ. ದೈವಾರಾಧನೆಯಲ್ಲಿ ಜನರು ವಿಫಲರಾದರೆ, ದೇವರು ಕೋಪಗೊಳ್ಳುತ್ತಿದ್ದ. ಅವನ ಕೋಪ ಪ್ಲೇಗ್, ಕ್ಷಾಮ - ಡಾಮರ ಹಾಗೂ ಅಪಘಾತಗಳಲ್ಲಿ ಪ್ರಕಟವಾಗುತ್ತಿತ್ತು.

ವಿವಿಧ ಪಂಗಡಗಳು ಪೂಜಿಸುತ್ತಿದ್ದ ಮಾನವ ರೂಪಿ ದೇವರುಗಳು ನಾಡಿನಾದ್ಯಂತ ಜನಪ್ರಿಯವಾಯಿತು. ಇವುಗಳೊಂದಿಗೆ ಪ್ರಾಣಿ ದೇವತೆಗಳ ಸಮಾಗಮವೂ ಆಯಿತು. ಆ ಬೆಳವಣಿಗೆಯಿಂದ ಪ್ರಾಣಿಗಳ ಶಿರಸ್ಸುಳ್ಳ ದೇವತೆಗಳು ತಲೆಯೆತ್ತಿದರು. ಇದು ಈಜಿಪ್ಟಿನ ಕೌತುಕಮಯವಾದ ಶಿಲ್ಪ. ಮನುಷ್ಯ ಮತ್ತು ಪ್ರಾಣಿ ರೂಪಗಳನ್ನು ಪಡೆದ ದೇವರುಗಳ ವ್ಯವಸ್ಥೆ ವಿಸ್ಮಯವೆನಿಸಿದರೂ ಅವರ ದೃಷ್ಟಿಯಿಂದ ತರ್ಕಬದ್ಧವಾಗಿತ್ತು. ಇಂದಿನ ಆಫ್ರಿಕಾದ ಕೆಲ ಪಂಗಡಗಳ ಧಾರ್ಮಿಕ ಆಚರಣೆಗಳಲ್ಲಿ ಅಧ್ವರ್ಯು ಪ್ರಾಣಿಗಳ ಮುಖವಾಡ ಧರಿಸಿ, ಆರಾಧಿಸುವ ದೇವತೆಗಳೊಂದಿಗೆ ತನ್ನನ್ನು ಸಮೀಕರಿ ಸುವುದನ್ನು ಕಾಣಬಹುದು. ಹಮ್ಮೊನ್ ದೇವರು ಕುರಿ ತಲೆಯನ್ನೂ, ಹಾತೋರ್ ಮತ್ತು ಐಸಿಸ್ ಹಸುವಿನ ಮುಖವನ್ನೂ, ಸೆಖ್ಮೆತ್ ಅಥವಾ ಷೆಕ್ಮತ್ ಸಿಂಹದ ಮುಖ, ಬಸ್ತೆತ್ ಬೆಕ್ಕಿನ ಮುಖ, ಅನುಬಿಸ್ ನರಿ ಮುಖ, ಸೆಬೆಕ್ ಮೊಸಳೆಯ ಮುಖ, ಹೊರಸ್ ಮತ್ತು ಮೆಂತ್ ಗಿಡುಗನ ಮುಖ, ಟೋತ್ ಕೊಕ್ಕರೆಯ ಮುಖ, ನೆಹೆಬ್ಕ ಸರ್ಪದ ಹೆಡೆಯ ಆಕಾರವನ್ನು ಹೊಂದಿದ್ದರು. ಆಕಾಶ, ಭೂಮಿ ಮತ್ತು ನಿಸರ್ಗವನ್ನು ದೈವೀಕರಿಸಿ ಕ್ರಮವಾಗಿ ನುತ್, ಗೆಬ್ ಮತ್ತು ಷು - ಎಂದು ಕರೆಯಲಾಗುತ್ತಿತ್ತು. ಈ ದೇವತೆಗಳು ಮೇಲೆ ತಿಳಿಸಿದ ದೇವತೆಗಳಿಂದ ಭಿನ್ನವಾಗಿದ್ದರು. ಎಂದೆಂದಿಗೂ ಮುಳುಗದ ಅಥವಾ ಕಣ್ಮರೆಯಾಗದ ನಕ್ಷತ್ರಗಳೊಂದಿಗೆ ಆತ್ಮವನ್ನು

ಸ್ಥಾಯಿಗೊಳಿಸಲು ಹಾಗು ಅಲ್ಲಿ ರಕ್ಷಿಸಿಡಲು ನುತ್ ಸಿಗೆ ಸಲ್ಲಿಸಿದ ಪ್ರಾರ್ಥನೆಗಳು ಪ್ರಾಚೀನತಮವಾದುವು. ಈ ದೇವತೆಗಳನ್ನು ದೇವಾಲಯಗಳಲ್ಲಿ ಎಂದಿಗೂ ಪೂಜಿಸಿರಲಿಲ್ಲ. ಆದರೂ ಇವೇ ಮೊದಲ ಮಾನವ ರೂಪಿ ದೇವರುಗಳೆಂದು ಕಾಣುತ್ತದೆ.

-೨-

ಮಾನವರೂಪಿ ದೇವರಲ್ಲಿ ಪ್ರಮುಖವಾದುದು ಔಸಿರಸ್ ಗಣ. ಈ ದೇವರನ್ನು ಕ್ರಿ.ಪೂ. ಟಿ೦೦೦ ದ ವೇಳೆಗೆ ಆರಾಧಿಸುವುದು ಆರಂಭವಾಯಿತು. ಪ್ರತಿಯೊಬ್ಬ ದೇವನು ಒಂದೊಂದು ಪಂಗಡಕ್ಕೆ ಸೇರಿರುತ್ತಿದ್ದ. ಹೊರಸ್ ಮೊದಲಿಗೆ ಪೂರ್ಣ ಬೆಳವಣಿಗೆಯನ್ನು ಸಾಧಿಸಿದ್ದ ; ಐಸಿಸ್ ಕನ್ಯಾದೇವತೆ ಆಗಿದ್ದಳು. ಮುಂದೆ ಅನೇಕ ಪಂಗಡಗಳು ಒಂದಾದಾಗ ಐಸಿಸ್ ಪಂಗಡ ಹೊರಸ್ ಪಂಗಡವನ್ನು ಸ್ವೀಕರಿಸಿತು. ಆಗ ಹೊಸರ್ ನು ಐಸಿಸ್ ಳ ಮಗನಾದ. ಆ ಪಂಗಡಗಳೊಂದಿಗೆ ಔಸಿರಿಸ್ ಪಂಗಡವು ವಿಲೀನವಾದಾದ, ಅದು ಔಸಿರಿಸ್ ಕುಟುಂಬ - ಎಂದಾಯಿತು. ಈ ಕುಟುಂಬಗಳು ಮೂಡಣ ಮತ್ತು ಪಡುವಣ ತಿಟ್ಟುಗಳಿಂದ ಬಂದಿದ್ದರಿಂದ ಔಸಿರಿಸ್ ದೇವ ಕುಟುಂಬದ ಆರಾಧನೆ ಈಜಿಪ್ಟಿನ ಉದ್ದಗಲಕ್ಕೂ ಹರಡಿತು. ಆ ನಂತರ ಸೆಟ್ ಮತ್ತು ಅವನ ಮಡದಿ ನೆಬ್ಲತ್ ಪೂರ್ವದಿಂದ ಬಂದಿದ್ದರಿಂದ, ನೈಲ್ ನದಿಯ ಪೂರ್ವ ಮುಖಜ ಭೂಮಿಯಲ್ಲಿ ಅವರ ಆರಾಧನೆ ತಕ್ಕಮಟ್ಟಿಗೆ ಬಳೆಯಿತು. ಅವರು ಔಸಿರಿಸ್ ಕುಟುಂಬದೊಂದಿಗೆ ವಿಶ್ವಾಸ ಬೆಳೆದರೂ ಅಲ್ಪ ಸ್ವಲ್ಪ ಹಗೆತನ ಹುಟ್ಟಿಕೊಂಡಿತು.

ಔಸಿರಿಸ್ ದೇವತಾರಾಧನೆ ಆರಂಭದಲ್ಲಿ ನಿಸರ್ಗ ಧರ್ಮವಾಗಿ ತಲೆಯೆತ್ತಿತು. ಕೃಷಿಯ ಬೆಳವಣಿಗೆ ಹಾಗೂ ಬದುಕಿಗೆ ನೆರವಾಗುವ ನೈಲ್ ನದಿಯನ್ನು ಪೂಜಿಸುವ ವ್ಯವಸ್ಥೆಯೇ ಇದು. ಔಸಿರಿಸ್ ನ ಬದುಕು ವಿಸ್ತೃತವಾದ ಕಥಾನಕವನ್ನು ಒಳಗೊಂಡಿದೆ. ಇತಿಹಾಸ ಪ್ರಕಾರ, ಅತಿ ಪೂರ್ವಕಾಲದಲ್ಲಿ ಔಸಿರಿಸ್ ದೇವನು ಜನಹಿತ ಅರಸನಾಗಿದ್ದು ಜನರಿಗೆ ಕೃಷಿ ಮಾಡುವುದನ್ನೂ, ಕಲಾ ವಸ್ತುಗಳನ್ನೂ ನಿರ್ಮಾಣ ಮಾಡುವುದನ್ನು ಕಲಿಸಿದ ಹಾಗೂ ಅವರಿಗೆ ಕಾನೂನು - ಕಟ್ಟಳೆಗಳನ್ನು ನೀಡಿದ. ಕಾಲ ಕಾಲದ ನಂತರ, ಅವನ ತಮ್ಮ ಕ್ರೂರಿಯಾದ ಸೆಟ್ ನು ಅವನನ್ನು ಕೊಲೆ ಮಾಡಿ, ಅವನ ದೇಹವನ್ನು ಛಿದ್ರ - ಛಿದ್ರಗೊಳಿಸಿದ. ಅವನ ಸೋದರಿಯೇ ಆಗಿದ್ದ ಅವನ ಹೆಂಡತಿ ಐಸಿಸ್ ಳು ಛಿದ್ರಗೊಂಡ ತನ್ನ ಗಂಡನ ದೇಹದ ತುಣುಕುಗಳನ್ನು ಒಂದು ಗೂಡಿಸಿದಾಗ , ಪವಾಡ ಸದೃಶರೀತಿಯಲ್ಲಿ ಅವನಲ್ಲಿ ಜೀವ ಮರುಸ್ಥಾಪನೆ ಆಯಿತು. ಜೀವಧಾರಣೆ ಮಾಡಿದ

ಓಸಿರಿಸ್ ನು ರಾಜ್ಯವನ್ನು ತಮ್ಮನಿಂದ ಪಡೆದು ಪ್ರಜಾಹಿತ ಆಡಳಿತವನ್ನು ಮುಂದುವರೆಸಿದ. ಅನಂತರ ಮೇಲು ಲೋಕಕ್ಕೆ ಹೋಗಿ, ಗತಿಸಿದವರ ಪಾಪ - ಪುಣ್ಯಗಳ ತುಲನೆ ಮಾಡುವ ನ್ಯಾಯದೇವತೆಯಾದ . ಅನಂತರ ಹುಟ್ಟಿದ ಅವನ ಮಗ ಹೊರಸ್‌ನು ತನ್ನ ತಂದೆಯ ಸಾವಿಗೆ ಕಾರಣನಾದ ಸೆಟ್‌ನನ್ನು ಕೊಂದು ಹಗೆ ತೀರಿಸಿಕೊಂಡ. ಮೂಲತಃ ಈ ಕಥೆ ನಿಸರ್ಗದ ರಹಸ್ಯವನ್ನು ಒಳಗೊಂಡಂತೆ ಕಾಣಿಸಿದರೂ ನೈಲ್ ನದಿಯ ಏರಿಳಿತವನ್ನು ಸೂಚಿಸುತ್ತದೆ. ಓಸಿರಿಸ್ನ ಸಾವು ಮತ್ತು ಮರು ಜೀವಧಾರಣೆ ನೈಲ್ ನದಿಯು ಚಳಿಗಾಲದಲ್ಲಿ ಸೊರಗುವುದನ್ನು ಹಾಗೂ ವಸಂತಕಾಲದಲ್ಲಿ ಪ್ರವಾಹ ಪಡೆಯುವುದನ್ನು ಸಂಕೇತಿಸುತ್ತದೆ. ಓಸಿರಿಸ್‌ನ ಸಾವು ಮತ್ತು ಪುನಶ್ಚೇತನ ಈಜಿಪ್ಟಿನ ಜನತೆಗೆ ವೈಯಕ್ತಿಕವಾಗಿ ಅಮರತ್ವ ಸಾರುವ ಸಂದೇಶ. ಸಾವನ್ನು ಗೆದ್ದ ಈ ದೇವನನ್ನು ಆರಾಧಿಸುವವರು ಶಾಶ್ವತವಾದ ಬದುಕ್ನು ಪಡೆಯುವವರು - ಎನ್ನುವುದು ಅವರ ವಿಶ್ವಾಸ. ಅಂತಿಮವಾಗಿ ಹೊರಸ್‌ನು ಸೆಟ್ಟನನ್ನು ಜಯಿಸುವುದು ಕೆಡುಕಿನ ಮೇಲೆ ಒಳಿತು ಸಾಧಿಸಿದ ಗೆಲವು ಆಗಿದೆ.

ಓಸಿರಿಸ್ ದೇವನು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿದ್ದಾನೆ. ಅವನು ಪ್ರಧಾನ ದೈವ; ಅವನಿಗೆ ಪ್ರತಿಸ್ಪರ್ಧಿಯೂ ಇರಲಿಲ್ಲ. ಇವನು ಸಸ್ಯ ಸಂಪತ್ತು ಮತ್ತು ಅಭಿವೃದ್ಧಿಗೆ ಅಧಿಪತಿ. ಸತ್ತವರು ಅವನಲ್ಲಿಗೆ ಹೋಗುವರೆಂದು ಈಜಿಪ್ಟರು ನಂಬಿದ್ದರಿಂದ, ಅವನು ಜನರ ಮುಂದಣ ಬದುಕನ್ನು ನಿರ್ಧರಿಸುವವನಾದ. ಸತ್ಕೃತಿಯನ್ನು ಮಾಡಿ ಔನ್ನತ್ಯವನ್ನು ಸಂಪಾದಿಸಿ ಮೇಲಣ ಪುಣ್ಯಲೋಕಕ್ಕೆ ಹೋಗುವವರ ಒಡೆಯ ಅವನು. ಈ ಭಾವನೆ ಮುಂದೆ ರೋಮನ್ನರ ಕಾಲದವರೆಗೂ ಪ್ರಚಲಿತದಲ್ಲಿತ್ತು. ಅವನ ಲೋಕಕ್ಕೆ ಪ್ರವೇಶ ಪಡೆಯುವುದು ಸುಲಭವಲ್ಲ. ಜರನ ಪಾಪ - ಪುಣ್ಯಗಳ ಸಮೀಕ್ಷೆಯನ್ನು ಅಲ್ಲವನು ನಡೆಸಿ, ಅವರ ಕರ್ಮಕ್ಕೆ ಅನುಗುಣವಾಗಿ ಮೇಲಣ ಲೋಕಕ್ಕೆ ಪ್ರವೇಶ ನೀಡುವುದನ್ನು ನಿರ್ಣಯಿಸುತ್ತಿದ್ದ. ಮೊದಲಿಗೆ ಈಜಿಪ್ಟಿನ ದಿವ್ಯ ಅರಸ. ಈ ಅರಸರಲ್ಲೆಲ್ಲ ಧೀಮಂತ, ಶಕ್ತಿವಂತ. ಕೆಳಗಣ ಲೋಕದ ಪ್ರಭುವಾದ ಇವನು ಮೊದಲಿಗೆ ಸ್ವರ್ಗವನ್ನು ಪ್ರವೇಶಿಸಿದನು. ಅಲ್ಲೇ ಒಡೆಯನಾಗಿ ನೆಲೆನಿಂತವನು. ಇವನು ಭೂಮಿ ದೇವ ಗೆಬ್‌ನ ಮಗ .

ಓರಿಸ್‌ನನ್ನು ಪ್ರತಿಮೆಗಳಲ್ಲಿ ಒಂದೆರಡು ಮಾದರಿಗಳಲ್ಲಿ ರೂಪಿಸಲಾಗಿದೆ. ಗಡ್ಡದಾರಿಯಾದ ಇವನನ್ನು ಹಸಿರು ಅಥವಾ ಕಪ್ಪು ಮಾಂಸಖಂಡಗಳಿಂದ ಕೂಡಿದ

ಮಾನವ ಮಮ್ಮಿಯಂತೆ ಚಿತ್ರಿಸಲಾಗಿದೆ. ಅವನು ಕುರಿ ಕಾಯುವವರ ಕೊಕ್ಕೆ ಇರುವ ದಂಡವನ್ನು ಬಲಗೈಲೂ, ಚಾವಟಿಯನ್ನು ಎಡಗೈಲೂ ಹಿಡಿದಿದ್ದಾನೆ. ಆಸ್ಟ್ರಿಚ್ ಪಕ್ಷಿಯ ಉದ್ದವಾದ ಪುಕ್ಕಗಳಿರುವ ಬಿಳಿಯ ಶಂಖುವಿನ ಆಕಾರದ ಕಿರೀಟವನ್ನು ಧರಿಸಿದ್ದಾನೆ. ಎರಡೆಳೆಯ ಕಂಠಹಾರವನ್ನು ಕತ್ತಿನ ಸುತ್ತ ಚಿತ್ರಿಸಲಾಗಿದೆ. ಇನ್ನೊಂದು ಚಿತ್ರಣದಲ್ಲಿ ಕುರ್ಚಿಯ ಮೇಲೆ ಮೈ ತುಂಬ ನಿಲುವಂಗಿ, ಧರಿಸಿದಂತೆ ಅಥವಾ ಮಮ್ಮಿಯಂತೆ ಕುಳಿತಿದ್ದಾನೆ. ಉದ್ದನೆಯ ಗಡ್ಡವಿದೆ. ಪುಕ್ಕಗಳ ಕಿರೀಟವನ್ನು ಧರಿಸಿದ್ದಾನೆ. ರಾಜ ಸಂಕೇತವಾದ ಸರ್ಪದ ಚಿಹ್ನೆಯನ್ನು ಕಿರೀಟದ ಮುಂದೆ ಕಾಣಬಹುದು. ಕೈಲಿ ಕೊಕ್ಕೆ ಇರುವ ದಂಡವಿದೆ.

ಓಸಿರಿಸ್, ಅವನ ಪತ್ನಿ ಹಾಗೂ ಸಹೋದರಿ ಐಸಿಸ್ ಮತ್ತು ಮಗ ಹೋರಸ್‌ರನ್ನು ತ್ರಿಮೂರ್ತಿ ಎಂದು ಕರೆಯುತ್ತಾರೆ. ಇಂತಹ ಹಲವು ತ್ರಿಮೂರ್ತಿಗಳನ್ನು ಈಜಿಪ್ಟಿನ ಹಲವು ದೈವ ಗಣದಲ್ಲಿ ಕಾಣಬಹುದು. ಕೆಲವೊಮ್ಮೆ ಹೋರಸ್ ನ ಬದಲು ಐಸಿಸ್‌ಳ ಸಹೋದರಿ ನೆಬ್ಬ್ತ್‌ಳು ಸೇರಿರುವುದುಂಟು. ಇವಳು ಜನರ ಅಂತ್ಯಸಂಸ್ಕಾರದ ದೇವತೆ. ಮೊದಲಿಗೆ ಐಸಿಸ್‌ಳು ಕನ್ಯಾದೇವತೆಯಾಗಿದ್ದಳು. ಅವಳು ಮೂಲತಃ ಸ್ವತಂತ್ರ ದೇವತೆಯೇ. ಅವಳೊಬ್ಬಳನ್ನೇ ಪೂಜಿಸಿದ್ದುಂಟು. ಇಟಲಿಯಲ್ಲಿ ಆಕೆಗಾಗಿ ದೇವಾಲಯವನ್ನು ಕಟ್ಟಿಸಲಾಗಿತ್ತು. ಕ್ರಿ.ಪೂ. ೬೦೦ ರವರೆಗೂ ಹೋರಸ್ ಶಿಶುವಿನ ಮಾತೆಯಾಗಿ ಅವಳನ್ನು ಚಿತ್ರಿಸುತ್ತಿದ್ದರು. ಅನಂತರ ರೋಮನ್ ಸಾಮ್ರಾಜ್ಯದಲ್ಲಿ ಆಕೆಯನ್ನು ಸುರಕ್ಷತೆಗಾಗಿ ನಾವಿಕರು ಪೂಜಿಸಿದರು. ನಿಸರ್ಗದಲ್ಲಿ ಒಳ್ಳೆಯದನ್ನು ಮಾಡುವ ದೇವತೆಯೂ ಆಗಿದ್ದಳು. ಇವಳು ಹೋರಸ್ ನ ತಾಯಿಯಾದ ಮೇಲೆ ಮಾತ್ರ ದೇವತೆಯಾಗಿ ಪರಿಗಣಿಸಲಾಯಿತು. ಈಕೆ ರಾಜಾಧಿಕಾರದ ದೇವತೆಯೂ ಹೌದು. ಇವಳು ಚಂದ್ರ ದೇವತೆಯಾಗಿ ಸೂರ್ಯದೇವನ ಹೃದಯವನ್ನು ಅಪಹರಿಸಿದಳು. ಇವಳನ್ನು ವಿವಿಧ ಬಗೆಗಳಲ್ಲಿ ರೂಪಿಸಲಾಗಿದೆ. ಆಕೆಯನ್ನು ಹಸುವಿನ ಮುಖ ಮತ್ತು ಕೊಂಬನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಕೊಂಬುಗಳ ಮಧ್ಯ ಸರ್ಪಲಾಂಛನ ವಿರುವ ಚಂದ್ರ ಬಿಂಬವಿದೆ. ಇನ್ನೊಂದು ಶಿಲ್ಪದಲ್ಲಿ ಐಸಿಸ್ ಳು ಗಂಡನ ಹಂತಗಳಿರುವ ಪೀಠದ ಮೇಲೆ ಆಸೀನಳಾಗಿದ್ದಾಳೆ. ಮಾನವ ಮುಖವಿದ್ದು, ಕೊಂಬುಗಳನ್ನು ಮತ್ತು ಚಂದ್ರಬಿಂಬ ವನ್ನು ತೋರಿಸಲಾಗಿದೆ. ಮತ್ತೊಂದು ಶಿಲ್ಪದಲ್ಲಿ ಕೊಂಬು ಮತ್ತು ಚಂದ್ರ ಬಿಂಬದ ಜೊತೆಗೆ ಉದ್ದನೆಯ ಪುಕ್ಕವನ್ನು ಜೋಡಿಸಲಾಗಿದೆ.

ಐಸಿಸ್‌ಳನ್ನು ಮಾತೃದೇವತೆಯಂತೆ ಚಿತ್ರಿಸಿರುವುದೂ ಉಂಟು. ಎತ್ತರದ ಪೀಠದ ಮೇಲೆ ಕುಳಿತಿರುವ ಇವಳ ಪಾದಗಳು ಮಣೆಯ ಮೇಲಿದೆ. ಶಿಶು ಹೋರಸ್ ನಿಗೆ ಹಾಲುಣಿಸುತ್ತಿದ್ದಾಳೆ. ಇಲ್ಲಿ ಹೋರಸ್‌ನನ್ನು ಐಸಿಸ್‌ಳ ಗಣಕ್ಕೆ ಸೇರಿದ್ದನೆಂದು ಸೂಚಿಸಲಾಗಿದೆ. ಅವನು ಬಾಲ ರವಿಯೂ ಆಗಿದ್ದಾನೆ. ಇನ್ನೊಂದು ಶಿಲ್ಪದಲ್ಲಿ ಐಸಿಸ್ ಳನ್ನು ಎರಡು ಉದ್ದವಾದ ರೆಕ್ಕೆಗಳನ್ನು ಕೈಗೆ ಅಂಟಿದಂತೆ ಚಿತ್ರಿಸಲಾಗಿದೆ. ಈ ರೆಕ್ಕೆ ಗಳಿಂದಲೇ ಅವಳು ಜಗತ್ತಿಗೆ ಬೆಳಕನ್ನೂ, ಗಾಳಿಯನ್ನೂ ಕೊಡುತ್ತಿದಾಳೆಂದು ಈಜಿಪ್ಟರ ನಂಬಿಕೆ.

ಔಸಿರಿಸ್ ದೇವಗಣದ ಮತ್ತೊಬ್ಬ ಪ್ರಧಾನ ದೈವ ಹೋರಸ್. ಇವನು ಅನೇಕ ಆಕಾರ ಮತ್ತು ಭಾವಗಳನ್ನು ಪಡೆದಿದ್ದಾನೆ. ಮ ೂಲತಃ ಪ್ರತ್ಯೇಕ ದೇವರಾಗಿದ್ದ ಇವನು ದಕ್ಷಿಣದಲ್ಲಿ ಗಿಡುಗ ದೇವರೊಂದಿಗೂ, ಎಡ್ಫುನಲ್ಲಿ ಸೂರ್ಯನೊಂದಿಗೂ ಮಿಲನ ವಾದನು. ಇವನು ಗಿಡುಗನ ಮುಖವನ್ನು ಹೊಂದಿದ್ದಾನೆ. ಗಿಡುಗ ರಾಜಪಕ್ಷಿ. ಆದ್ದರಿಂದ ಹೋರಸ್‌ನನ್ನು ಈಜಿಪ್ಟನ ರಾಜನೊಂದಿಗೆ ಸಮೀಕರಿಸಲಾಗಿದೆ. ಔಸಿರಿಸ್ ನನ್ನು ಕೊಂದು ಸೆಟ್‌ನನ್ನು ಗೆದ್ದಿದ್ದಕ್ಕಾಗಿ, ಅವನನ್ನು ಪ್ರತಿಕಾರದ ದೇವತೆಯೆಂದು ಪರಿಗಣಿಸಲಾಗಿದೆ. ಇವನನ್ನು ಉದ್ದನೆಯ ಬರ್ಜಿ ಹಿಡಿದು ನಿಂತಿರುವಂತೆ ಚಿತ್ರಸಲಾಗಿದೆ. ಇವನು ಐಸಿಸ್ ಬಣದಲ್ಲಿ ಸೇರ್ಪಡೆಯಾದ ಮೇಲೆ, ಐಸಿಸ ಳ ಮಗನಾದ. ಇವನನ್ನು ರಾಜಶಿಶುವಿನಂತೆ ಹಾಗೂ ಗಿಡುಗನಂತೆ ಅಥವಾ ಗಿಡುಗ ಮುಖವುಳ್ಳ ಮನುಷ್ಯನಂತೆ ಚಿತ್ರಿಸಲಾಗಿದೆ. ಶತೃಗಳ ಮೇಲೆ ವಿಜಯ ಸಾಧಿಸುವವವನು ಹೌದು. ಇವನು ಆಕಾಶ ದೇವ. ಹಾಗೂ ಸೂರ್ಯ ಮತ್ತು ಚಂದ್ರರು ಅವನ ಕಣ್ಣುಗಳು. ಎಡ್ಫುದ ಹೋರಸ್‌ನು ರೆಕ್ಕೆ ಇರುವ ಸೂರ್ಯ ಬಿಂಬವಾಗಿ, ಅನುದಿನವೂ ಸ್ವರ್ಗವನ್ನು ಸುತ್ತುತ್ತಿರುವನು. ಎರಡು ದಿಗಂತಗಳ ಮುಂದೆ ಸೂರ್ಯನೊಂದಿಗೆ ಐಕ್ಯಗೊಳಿಸಲಾಯಿತು. ಶಿಶುವಾದ ಹೋರಸ್ ನು ಅಂಬೆಗಾಲಿಡುತ್ತಿದ್ದಾನೆ. ಇದು ಸೂರ್ಯೋದಯವನ್ನು ಸೂಚಿಸುತ್ತದೆ. ಇವನನ್ನು ಕುರ್ಚಿಯ ಮೇಲೆ ಆರಾಮವಾಗಿ ಆಸೀನವಾಗಿರುವಂತೆ ಚಿತ್ರಿಸಲಾಗಿದೆ. ಕ್ರೈಸ್ಥ ಧರ್ಮದ ಆರಂಭದ ದಿನಗಳಲ್ಲಿ ಅವನು ಕ್ರಿಸ್ತನಂತೆ ದೇವರ ಮಗನಾದ. ಪೆಡಂಭೂತದೊಂದಿಗೆ ಹೋರಾಡಿದ ಸೆಂಟ್ ಜಾರ್ಜ್ ಮತ್ತು ಮೈಖೆಲರಂತೆ ಪರಿವರ್ತನೆ ಹೊಂದಿದ.

ಹೋರಸ್‌ನ ಹಲವು ಮಾದರಿಯ ಕೌತುಕಮಯವಾದ ಆಕೃತಿಗಳನ್ನು

ಕಾಣಬಹುದು. ಒಂದು ಶಿಲ್ಪದಲ್ಲಿ ಚಿಕ್ಕ ಹುಡುಗನಂತೆ ಸಿಂಹಪೀಠದ ಮೇಲೆ ಕುಳಿತಿದ್ದಾನೆ. ತನ್ನ ತಂದೆಯನ್ನು ಕೊಂದ ಸೆಟ್ ನ ವಿರುದ್ಧ ಪ್ರತೀಕಾರದ ಆಯುಧದಂತೆ ಚಿತ್ರಿಸಲಾಗಿದೆ. ಉದ್ದವಾದ ಬರ್ಜಿಯನ್ನು ಎಡಗೈಲಿ ಹಿಡಿದಿದ್ದಾನೆ. ಬಲಗೈಯನ್ನು ತೊಡೆಯ ಮೇಲಿಟ್ಟಿದ್ದಾನೆ. ಅವನ ಒಂದು ಪಾರ್ಶ್ವದಲ್ಲಿ ಅವನ ತಾಯಿ ಐಸಿಸ್ ಮತ್ತೊಂದು ಪಾರ್ಶ್ವದಲ್ಲಿ ಆಕೆಯ ಸೋದರಿ ನೆಬ್ಬತ್ ನಿಂತು ಅವನನ್ನು ರಕ್ಷಿಸುತ್ತಿದ್ದಾರೆ. ನೆಬ್ಬತ್‌ಳು ಕೊಲೆಯಾದ ಒಸಿರಿಸ್ ದೇಹವನ್ನು ಹುಡುಕಲು ಅಕ್ಕನಿಗೆ ಸಹಾಯಮಾಡಿದಳು. ಇವಳು ಸೂರ್ಯಾಸ್ತದ ದೇವತೆ.

ಹೋರಸನನ್ನು ಬಾಲಕನಂತೆ ಚಿತ್ರಿಸಲಾಗಿದೆ. ಇವನು ನಗ್ನನಾಗಿ ನಿಂತಿದ್ದಾನೆ. ಪ್ಯಾಪಿರಸ್ ನಿಂದ ಮಾಡಿದ ಮೂರು ಶಿರಗಳನ್ನು ತನ್ನ ತಲೆಯ ಮೇಲೆ ಧರಿಸಿದ್ದಾನೆ. ಬಲಭಾಗದಲ್ಲಿ ಜಡೆ ಇಳಿಬಿದ್ದಿದೆ. ಬಲಗೈ ತೋರು ಬೆರಳು ತುಟಿಯ ಹತ್ತಿರವಿದೆ. ಮೂರು ಮಾಲೆಯ ಕಂಠಿಹಾರ ಅಥವಾ ಪದಕವಿರುವ ಕಂಠಿಹಾರ ಕತ್ತನ್ನು ಅಲಂಕರಿಸಿದೆ. ಇವನನ್ನು ಹಾರ್ಪೆಕ್ರಾಟ್ ದೇವನಂತೆಯೂ ಚಿತ್ರಿಸಲಾಗಿದೆ. ಇವನೇ ಮುಂದೆ ಗ್ರೀಕರಲ್ಲಿ ಹಾರ್ಪೋಕ್ರೇಟಸ್ ಆದ. ಗ್ರೀಕ್ ಮತ್ತು ರೋಮನ್ ಪುರಾಣಗಳಲ್ಲಿ ಮೌನ ದೇವನಾಗಿದ್ದಾನೆ. ಇನ್ನೊಂದು ಶಿಲ್ಪದಲ್ಲಿ ಇವನು ಗಿಡುಗ ಮುಖಧರಿಸಿ, ನಡೆಯುವ ಭಂಗಿಯಲ್ಲಿ ನಿಂತಿದ್ದಾನೆ. ಇದು ಸೂರ್ಯೋದಯವನ್ನು ಸೂಚಿಸುತ್ತದೆ. ಮತ್ತೊಂದು ಶಿಲ್ಪದಲ್ಲಿ ಬಾಲಕ ಹೋರಸನು ಪದ್ಮಪೀಠದ ಮೇಲೆ ಆಸೀನನಾಗಿದ್ದಾನೆ. ಅವನ ಬಲಗೈ ತೋರು ಬೆರಳು ತುಟಿಯ ಹತ್ತಿರವಿದೆ (ಪ್ರಾಯಃ ಚೀಪುತ್ತಿರಬೇಕು ಇದು ಬಾಲ್ಯಾವಸ್ಥೆಯನ್ನು ಸೂಚಿಸುತ್ತದೆ). ಇದರಲ್ಲಿ ಬೌದ್ಧರ ಪ್ರಭಾವವಿರಬೇಕು (?). ಇದು ಪರ್ಶಿಯನ್ನರ ಮೂಲಕ ರವಾನೆಯಾಗಿರಬಹುದು. ಅರಳಿದ ಕಮಲದ ಮೇಲೆ ಅವನು ಕುಳಿತಿರುವುದು. ಸೂರ್ಯೋದಯದಿಂದ ಕಮಲದ ಹೂ ಅರಳುವುದರಿಂದ ಬೆಳಗಿನ ಸೃಷ್ಟಿಕರ್ತ ಅವನೇ. ಇಂತಹುದ್ದೇ ಅನ್ನೊಂದು ಆಕೃತಿಯಲ್ಲಿ ಸಿಂಹಪೀಠದ ಮೇಲೆ ಕುಳಿತಿರುವ ಬಾಲಕ ಹೋರಸನನ್ನು ಐಸಿಸ್ ಮತ್ತು ನೆಬ್ಬತ್ ರು ರಕ್ಷಿಸುತ್ತಿದ್ದಾರೆ.

–೩–

ನೆಬ್ಬತ್ ಮತ್ತು ಸೆಟ್ ರು ಕೆಂಪು ಕಡಲಿನ ಪ್ರದೇಶದಿಂದ ಬಂದ ದೇವತೆಗಳು. ಈಜಿಪ್ಟಿನ ಇತಿಹಾಸದಲ್ಲಿ ಅವರ ಸ್ಥಾನ ಅಸಂಬದ್ಧವಾದುದು ಮತ್ತು ಅಸ್ಪಷ್ಟವಾದುದು. ಮೊದಲಿಗೆ ಒಸಿರಿಸ್ ಗಣದಲ್ಲಿ ಸೆಟ್‌ನ ಸೇರ್ಪಡೆಯಾಗಿದ್ದರೂ, ಅವನು ಯಾವಾಗಲೂ

ಔಸಿರಿಸ್ ನ ಶತೃವೇ. ಹೊರಸ್ ಮತ್ತು ಸೆಟ್ ರ ಕಾದಾಟ ಜನಾಂಗೀಯ ದ್ವೇಶದ ಇತಿಹಾಸವೇ ಆಗಿದ್ದು, ಅಂತಿಮವಾಗಿ ಸೆಟ್ ಬಣವನ್ನು ಹೊರ ಹಾಕಲಾಯಿತು. ಆದರೂ ಸೆಟ್ ನ ಆರಾಧನೆ ಈಜಿಪ್ಟಿನಲ್ಲಿ ಪುನರಾವರ್ತನೆ ಆಗುತ್ತಲೇ ಇತ್ತು. ಎರಡು, ಆರು, ಹದಿನೈದು, ಹದಿನೆಂಟು ಮತ್ತು ಹತ್ತೊಂಬತ್ತನೇ ರಾಜವಂಶಗಳ ಕಾಲದಲ್ಲಿ ಸೆಟ್ ನನ್ನು ನಿರಂತರವಾಗಿ ಪೂಜಿಸಲಾಯಿತು. ರೋಮನ್ನರ ಕಾಲದಲ್ಲೂ ಅವನನ್ನು ಪೂಜಿಸಿದ್ದುಂಟು. ಬಿರುಗಾಳಿ, ಹಿಂಸೆ, ಕಗ್ಗತ್ತಲು, ಮರುಭೂಮಿ, ಮರುಭೂಮಿಯ ಪ್ರಾಣಿಗಳು, ಸರ್ಪ , ಹಂದಿ, ಹಿಪ್ಪೊಪಾಟಮಸ್ ಮತ್ತು ಮೊಸಳೆಗಳನ್ನು ಪ್ರತಿನಿಧಿಸುವ ದೇವತೆಯೇ ಇವನು. ಮನುಷ್ಯನ ದೇಹ ಮತ್ತು ನರಿ ಅಥವಾ ಬೇಟೆನಾಯಿಯ ಮುಖವನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಉದ್ದವಾದ ಕತ್ತು, ತೆಳ್ಳನೆಯ ಬಾಗಿದ ಮೂತಿ, ಆಯತಾಕಾರದ ಮೇಲೇರಿರುವ ಕಿವಿ ಮತ್ತು ಬಾಲಗಳನ್ನು ಹೊಂದಿರುವಂತೆ ಸೆಟ್ ನನ್ನು ಚಿತ್ರಿಸಲಾಗಿದೆ. ಇವನ ಕ್ರೌರ್ಯ ಗುಣ ಶಕ್ತಿಯುತ ರಕ್ಷಣೆಗೆ ಪೂರಕವೆಂದು ಈಜಿಪ್ಟರು ತಿಳಿದದ್ದರು. ರಾ - ಸೂರ್ಯದೇವ ಹಗಲಿನ ವೇಲೆ ತನ್ನ ದೋಣಿಯಲ್ಲಿ ಕುಳಿತು ಪಯಣಿಸುತ್ತಿರುವಾಗ ಭೀಕರ ಅಪೊಪಿಸ್ ಸರ್ಪದ ದಾಳಿಗೆ ಈಡಾದಾಗ, ಅವನನ್ನು ಸೆಟ್ ನು ರಕ್ಷಿಸುತ್ತಾನೆ. - ಎನ್ನುವುದು ಜನರ ನಂಬಿಕೆಯಾಗಿತ್ತು. ಅವರು ತಮ್ಮ ಯುದ್ಧೋತ್ಸಾಹ ಗುಣವನ್ನು ನೀಡುವ ಶಕ್ತಿ ಇವನಲ್ಲಿದೆಯೆಂದು ತಿಳಿದಿದ್ದರು. ಹೈಕ್ಸೋಸರು ದಾಳಿ ಮಾಡಿದ ಈಜಿಪ್ಟಿನ ನದಿ ಪ್ರದೇಶದಲ್ಲಿ ಇವನ ಆರಾಧನೆ ಅಧಿಕವಾಗಿತ್ತು.

ನೆಬ್ಥಿತ್ ಸೆಟ್ ನಂತೆ ಎಂದಿಗೂ ಔಸಿರಿಸ್‌ನ ವಿರೋಧಿಯಾಗಿರಲಿಲ್ಲ. ಆಕೆ ಐಸಿಸ್‌ಳ ಸೋದರಿಯೆಂದು ಅಂಗೀಕೃತಳಾದವಳು. ಐಸಿಸ್ ಮತ್ತು ನೆಬ್ಥಿತ್ ಜೊತೆ ಜೊತೆಯಾಗಿ, ಔಸಿರಿಸ್ ಕೊಲೆಯಾದಾಗ ಶೋಕಿಸಿದವರು. ಅವರಿಬ್ಬರು ಅವನ ಶವದ ಪಾದ ಮತ್ತು ಶಿರದ ಭಾಗಗಳಲ್ಲಿ ಕುಳಿತಂತೆ ಚಿತ್ರಿಸಲಾಗಿದೆ.

– ೪ –

ಥೇಬ್ಸ್ ಗೆ ಬಂದ ಮಾನವ ರೂಪಿ ದೇವಗಣಗಳಲ್ಲಿ ಸೇರ್ಪಡೆಯಾದವರು ಅಮೋನ್, ಮತ್ ಮತ್ತು ಖೆನ್ಷು ದೇವತೆಗಳು. ಅಮೋನ್ ಪಶ್ಚಿಮದಿಂದ ಬಂದವನು. ಅವನನ್ನು ಓಯಿಸಿಸ್ ಗಳಲ್ಲಿ ಪೂಜಿಸಲಾಗುತ್ತಿತ್ತು. ಇವನು ಥೇಬ್ಸ್ ನಗರದ ಪ್ರಧಾನ ದೈವ. ಸೂರ್ಯ ದೇವನಾದ ಇವನು ಅಮೋನ್ - ರಾ ಎಂದೇ

ಪ್ರಸಿದ್ಧಿ. ಇವನು ಈಜಿಪ್ಟಿನ ರಾಷ್ಟ್ರೀಯ ದೇವತೆಯೂ ಹೌದು. ನಡೆಯುವ ಭಂಗಿಯಲ್ಲಿ ನಿಂತಿರುವ ಇವನು ಸೊಂಟ ವಸ್ತ್ರವನ್ನು, ಕಂಠಾಭರಣವನ್ನು ಧರಿಸಿದ್ದಾನೆ. ಉದ್ದವಾದ ಗಡ್ಡವಿದೆ, ಹಾಗೂ ದುಂಡಾದ ಕಿರೀಟವನ್ನು ಧರಿಸಿದ್ದಾನೆ. ಅದರ ಮೇಲೆ ಎರಡು ಉದ್ದವಾದ ಪುಕ್ಕಗಳನ್ನು ಲಂಬವಾಗಿ ಜೋಡಿಸಲಾಗಿದೆ. ಕೆಲವೊಮ್ಮೆ ಹಂಸ ಮತ್ತು ಟಗರಿನ ರೂಪದಲ್ಲಿ ಕಾಣುವುದುಂಟು. ಕಾರ್ನಾಕ್ ಮತ್ತು ಲಕ್ಸಾರ್‌ಗಳಲ್ಲಿ ಇವನ ಪೂಜೆಗಾಗಿ ಬೃಹತ್ ದೇವಾಲಯಗಳನ್ನು ಕಟ್ಟಲಾಗಿತ್ತು. ಕ್ರಿ.ಪೂ. ೨೧೦೦ ರ ವೇಳೆಗೆ ಅಮೋನ್ - ರಾ ನ ಆರಾಧನೆ ಆರಂಭವಾಯಿತು. ಹೆರ್ಮಪಾಲಿಸ್‌ನಲ್ಲಿ ಅಮೋನ್ ಮತ್ತು ಅವನ ಪತ್ನಿಯನ್ನು ಮತ್ [illegible] ಕರೆಯುತ್ತಿದ್ದರು. ಈಕೆ ಮಾತೃದೇವತೆಯೇ. ಇವಳಿಗೆ ಕಾರ್ನಾಕ್‌ನಲ್ಲಿ ದೇವಾಲಯವನ್ನು ಕಟ್ಟಿ ಪೂಜಿಸಲಾಗುತ್ತಿತ್ತು. ಇವರ ಮಗುವೇ ಖೆನ್ಸು. ಇವನು ಅಲೆಮಾರಿ ಚಂದ್ರ ದೇವ. ಇವರು ಮೂವರೂ ಥೇಬ್ಸ್‌ನ ತ್ರಿಮೂರ್ತಿಗಳು. ಖೆನ್ಸು ಅನಂತರದ ಕಾಲದಲ್ಲಿ ಒಂಬೋಸ್ ನಲ್ಲಿರುವ ಗಿಡುಗ ಮುಖದ ಹೋರಸ್, ಎಡ್ಫೋ ನಲ್ಲಿರುವ ಟೊತ್, ಥೇಬ್ಸ್‌ನಲ್ಲಿರುವ ಪು ನೊಂದಿಗೆ ಸ್ಥಾನಮಾನಗಳನ್ನು ಪಡೆದ.

ಲಿಬಿಯಾದ ದೇವತೆಯಾದ ನೀತ್ ಳು ಯಾವಾಗಲೂ ಪೂರ್ಣವಾಗಿ ಮಾನವ ರೂಪಿಯೇ. ಆರಂಭದ ದಿನಗಳಲ್ಲಿ ಆಕೆಯನ್ನು ಹೆಚ್ಚಾಗಿ ಪೂಜಿಸಿದ್ದುಂಟು. ಅಥೆನೆ ಮತ್ತು ಮಿನರ್ವಳ ಜೊತೆ ಆಕೆಯನ್ನು ಗುರುತಿಸಲಾಗುತ್ತಿದೆ. ಇಪ್ಪತ್ತಾರನೇ ರಾಜವಂಶದ ಕಾಲದಲ್ಲಿ ಹೆಚ್ಚು ಜನಪ್ರಿಯಳಾದಳು. ಅಡ್ಡ ಬಾಣಗಳು ಮತ್ತು ಗುರಾಣಿ ಆಕೆಯ ಆಯುಧಗಳು.

– ೫ –

ನಿಸರ್ಗದ ದೇವತೆಗಳು ಮತ್ತೊಂದು ಮುಖ್ಯವಾದ ದೇವಗಣ. ಈ ದೇವತೆಗಳ ಮೂಲ ಪೂರ್ವಭಾಗವೇ. ಕ್ರಿ. ಪೂ. ೭೦೦೦ ದ ವೇಳೆಗೆ ನಿಸರ್ಗದ ದೇವತೆಗಳ ಆಗಮನವಾಯಿತು. ಇವುಗಳಲ್ಲಿ ಅತ್ಯಂತ ಪ್ರಮುಖರಾದವರು ಸೂರ್ಯ ದೇವತೆಗಳು. ಸೂರ್ಯದೇವತೆಗಳಲ್ಲಿ ಹೆಚ್ಚು ಜನಪ್ರಿಯನಾದವನು ರಾ. ಖೆಪೆರಾ ಬಾಲಸೂರ್ಯ; ಅಟೋನ್ ಅಥವಾ ಲಿಟುಮ್ ಅಸ್ತಮಿಸುವ ಸೂರ್ಯ. ರಾ ಈಜಿಪ್ಟಿನ ಬಹುದೊಡ್ಡ ದೇವರು. ಈಜಿಪ್ಟಿನ ಇತಿಹಾಸ ಪೂರ್ವ ದಿನಗಳಲ್ಲಿ ಇವನ ಆರಾಧನೆ ಆರಂಭವಾಯಿತು. ಇವನು ಸಿರಿಯ ಮೂಲದವನು. ಕೆಳಗಣ ಈಜಿಪ್ಟಿನ ಹೊಲಿಯೋಪಾಲಿಸ್ ಅಥವಾ

ಸೂರ್ಯನಗರ ರಾ ದೇವನ ಪ್ರಮುಖ ಕೇಮದ್ರ. ಮೇಲಣ ಈಜಿಪ್ಟಿನ ಹೀರ ಕೊಂಪಾಲಿಸ್‌ನಲ್ಲಿರುವ ಗಿಡುಗನನ್ನು ಸೂರ್ಯದೇವನೆಂದೇ ಪರಿಗಣಿಸಲಾಗಿದೆ. ಬೆಹುಡೆಟ್ ಎಂಬ ಹೆಸರಿನಲ್ಲಿ ರಾನನ್ನು ರೆಕ್ಕೆಗಳನ್ನು ಪಡೆದ್ರ ಸೂರ್ಯನಂತೆ ಚಿತ್ರಿಸಲಾಗಿದೆ. ಈಜಿಪ್ಟಿನ ಎಲ್ಲ ತೋರಣಗಳ ಮೇಲೂ ಇದೇ ರೀತಿ ರೂಪಿಸಲಾಗಿದೆ. ದೈರ್ ಎಲ್ - ಬಹರಿಯಲ್ಲಿರುವ ರಾಣಿ ಹಟ್ ಷ್ಪೆಸಟ್ ಮತ್ತು ಆಕೆಯ ತಂದೆ ಟೊಟ್ ಮಸ್ ಸಮಾಧಿ ಮಂದಿರದ ಚಿತ್ರ ಶಾಲೆಯಲ್ಲಿ ಹಾರುತ್ತಿರುವ ರೆಕ್ಕೆಗಳಿರುವ ಸೂರ್ಯ ಬಿಂಬದ ಇಕ್ಕೆಡೆಗಳಲ್ಲಿ ಸರ್ಪ ಲಾಂಛನಗಳಿವೆ. ಇಲ್ಲಿ ರಾ ನನ್ನು ಸೃಷ್ಟಿಕರ್ತನಾಗಿ, ಸಂರಕ್ಷಕನಾಗಿ ಮತ್ತು ಲಯಕರ್ತನಾಗಿ ಪರಿಭಾವಿಸಲಾಗಿದೆ. ಕೆಲವೊಮ್ಮೆ ಟಗರಿನ ಕೊಂಬುಗಳು ಅವನಿಗಿರುವುದುಂಟು. ಅವನ ಬಿಡಿಸಿದ ರೆಕ್ಕೆಗಳು ರಕ್ಷಣೆ ಅಥವಾ ಅಭಯವನ್ನು, ಸರ್ಪ ವಿಚಾರಪರತೆ ಮತ್ತು ಲಯವನ್ನು, ಟಗರಿನ ಕೊಂಬುಗಳು ಸೃಷ್ಟಿಯನ್ನು ಸೂಚಿಸುತ್ತವೆ. ಇವನನ್ನು ಗಿಡುಗ ದೇವರೊಂದಿಗೆ ಗುರುತಿಸಿದಾಗ ಅವನು ಮಾನವ ರೂಪ ಮತ್ತು ಗಿಡುಗ ಪಕ್ಷಿಯ ಮುಖವನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಥೇಬ್ಸ್ ನಲ್ಲಿ ಸ್ಥಳೀಯ ದೇವರಾದ ಅಮೋನ್‌ನ್ನು ರಾ ನೊಂದಿಗೆ ಒಂದುಗೂಡಿಸಿ ಪೂಜಿಸಲಾಗಿದೆ. ಇದು ಪ್ರಾರಂಭವಾದದ್ದು ೧೮ನೇ ರಾಜವಂಶದ ಕಾಲದಿಂದ. ಈಜಿಪ್ಟಿನ ಜನಪ್ರಿಯ ದೈವನಾದ ರಾ ಹಲವು ರೂಪುಗಳಲ್ಲಿ ಚಿತ್ರಿತನಾಗಿದ್ದಾನೆ. ಸರಳ ಸೂರ್ಯಬಿಂಬದಂತೆ ಕಮಲದ ಮೇಲೆ ಕುಳಿತಿರುವ ಮಗುವಿನಂತೆ ಪಕ್ಷಿ, ಸಿಂಹ ಮತ್ತು ಬೆಕ್ಕಿನಂತೆ ಚಿತ್ರಿಸಲಾಗಿದೆ. ಇವನು ಆಕಾಶದಲ್ಲಿ ತನ್ನ ದೋಣಿಯಲ್ಲಿ ಕುಳಿತು ಅಧೋ ಲೋಕಕ್ಕೆ ಪಯಣಿಸುವವನು ; ಭೂಮಿಯ ಮೇಲೆ ರಾಜನಾಗಿ ಆಡಳಿತ ನಡೆಸುವವನು ಹಾಗೂ ಫೆರೋವರ ತಂದೆ. ಐದನೇ ರಾಜವಂಶದ ಪ್ರಧಾನ ದೇವ. ರಾಜನನ್ನು ರಾ ನ ಪುತ್ರನೆಂದು ಕರೆಯಲಾಗುತ್ತಿತ್ತು.

ಹದಿನೆಂಟನೆ ರಾಜವಂಶದ ರಾಷ್ಟ್ರೀಯ ದೇವನಾದ ರಾ ನನ್ನು ಕ್ರಿ.ಪೂ. ೧೩೮೦ ರ ವೇಳೆಗೆ ಕ್ರಾಂತಿಕಾರಕವೆನಿಸುವ ರೀತಿಯಲ್ಲಿ ಅವನ ನಿರೂಪಣೆಯಲ್ಲಿ ಸುಧಾರಣೆ ಮಾಡಲಾಯಿತು. ಸಿರಿಯಾದಲ್ಲಿ ಮೂಡಿದ ಚಳುವಳಿಯ ಪರವಾಗಿ ಸೂರ್ಯನನ್ನು ಬದುಕಿನ ಮೂಲ ಆಕರವಾದ ಬೆಳಕು ಮತ್ತು ಚೈತನ್ಯದ ಸ್ವರೂಪವಾದ ಕಿರಣಗಳನ್ನು ಪ್ರವಹಿಸುವ ದೇವರೆಂದು ಪರಿಗಣಿಸಲಾಯಿತು. ಸೂರ್ಯನನ್ನು ಸೌರಚಕ್ರದ ಆಕಾರ ದಲ್ಲಿ ಅಟೋನ್ ಅಥವಾ ಅಟನ್ ನ ಹೆಸರಿನಲ್ಲಿ ಪೂಜಿಸುವ ವ್ಯವಸ್ಥೆಯನ್ನು ಜಾರಿಗೆ

ತಂದವನು ಫೆರೋವಾ, ನಾಲ್ಕನೇ ಅಮೆನ್ ಹೋಟೆಪ್ ಇವನು ತಾನು ನಿರೂಪಿಸಿದ ಧಾರ್ಮಿಕ ಕ್ರಾಂತಿಯ ಬಗ್ಗೆ ಅಂಧಾಭಿಮಾನ ಉಳ್ಳವನು. ಹೆಲ್ಯೋಪಾಲಿಸ್ ನ ಸೂರ್ಯಾಲಯದ ಪ್ರಧಾನ ಧರ್ಮಾಧಿಕಾರಿಯೂ ಆಗಿದ್ದ. ಸೂರ್ಯ ಅಥವಾ ಅಟೋನ್‌ನ ಆರಾಧನೆಯನ್ನು ರಾಷ್ಟ್ರೀಯ ಧರ್ಮವನ್ನಾಗಿ ಘೋಷಿಸಿದ ಇವನು ತನ್ನ ಹೆಸರು ಅಮೆನ್ ಹೋಟೆಪ್ (ಆಮೋನ್ ತೃಪ್ತನಾದ) ನಿಂದ ಅಖೆನಾಟನ್ (ಅಟೋನನ್ ಸಂತೋಷಗೊಳಿಸಿದವು) ಎಂದುಬದಲಾಯಿಸಿದ. ಇದರಿಂದ ಹೊಸ ವಿಷಯಗಳ ಮಹತ್ತರ ಆಸ್ಫೋಟನೆಯೇ ಆಯಿತು. ಅವನ ಬದುಕಿನ ಉದ್ದೇಶ್ಯವೇ ಸತ್ಯವಾಗಿತ್ತು. "ಸತ್ಯದೊಂದಿಗೇ ಬದುಕು" ಎಂಬುದು ಅಖೆನಾಟನ್ ನ ಸುಧಾರಣೆಯ ಉದ್ದೇಶ. ಬದುಕು ಮತ್ತು ಎಲ್ಲಾ ಚೈತನ್ಯವೂ ಸೂರ್ಯ ಕಿರಣಗಳ ಶಕ್ತಿಯನ್ನು ಅವಲಂಬಿಸಿವೆ ಎಂಬ ವೈಜ್ಞಾನಿಕ ಸತ್ಯವನ್ನು ಅವನು ಮನಗಾಣಬಲ್ಲ. ಆದ್ದರಿಂದ ಬದುಕು ಮತ್ತು ಚೈತನ್ಯದ ಚಿಹ್ನೆಯಂತಿರುವ ಸೂರ್ಯ ಕಿರಣಗಳನ್ನು ನೀಡಿರುವ ಹಸ್ತಗಳಿಗೆ ತಲಪುತ್ತಿರುವಂತೆ ಚಿತ್ರಿಸಲಾಗಿದೆ. ಈ ಕ್ರಾಂತಿಯ ತೀವ್ರ ಆಚರಣೆಯ ಫಲವಾಗಿ ಪ್ರಾಚೀನ ದೇವರುಗಳನ್ನು ಬಹಿಷ್ಕರಿಸಿ ಸ್ಥಳಾಂತರಿಸಲಾಯಿತು. ಅಖೆನಟನ್ ನು ಈಜಿಪ್ಟಿನಾದ್ಯಂತ ಅವುಗಳ ಹೆಸರುಗಳನ್ನು ತೆಗೆದು ಹಾಕಿದ, ಇಲ್ಲವೇ ದೇಗುಲಗಳನ್ನು ನಾಶಪಡಿಸಿದ. ತನ್ನ ರಾಜಧಾನಿ ಟೆಲ್ ಅಮರ್ನದಲ್ಲಿ ತನ್ನ ಪ್ರೀತಿಯ ಹೊಸ ದೈವವನ್ನು ಸ್ಥಾಪಿಸಿ, ಅದನ್ನು ಅಟೋನ್‌ನ ವೈಭವ - ಎಂದು ಕರೆದ. ಇದೇ ಅಖೆನಟನ್‌ನ ಸತ್ಯ. ಈ ಕ್ರಾಂತಿಕಾರಕ ಹೊಸ ವ್ಯವಸ್ಥೆಯನ್ನು ಎಲ್ಲರೂ ವಿರೋಧವಿಲ್ಲದೆ ಪಾಲಿಸಬೇಕಾಯಿತು. ಅಂದಿನ ಕಲೆ ಈ ಕ್ರಾಂತಿಕಾರಕ ಸತ್ಯವನ್ನು ಅಭಿವ್ಯಕ್ತಿಸಿತು. ನುರಿತ ಕೈಗಳಲ್ಲಿ ಇದರ ನಿರೂಪಣೆ ನಿಜಕ್ಕೂ ಶಕ್ತಿಯುತವಾಗಿತ್ತು. ನಿಸರ್ಗವನ್ನು ಪ್ರೀತಿಸುವುದು ಮತ್ತು ಸೌಂದರ್ಯವನ್ನು ಅಭಿವ್ಯಕ್ತಿಸುವುದು ಅಖೆನಟನ್‌ನ ಸತ್ಯದ ಘನೋದ್ದೇಶವಾಗಿತ್ತು. ಇದು ಅಂದಿನ ಸಾಹಿತ್ಯದಲ್ಲೂ ಅತ್ಯುತ್ತಮವಾಗಿ ಅರಳಿತು. ಅರಸನ ವೈಯಕ್ತಿಕ ಬದುಕು ಸತ್ಯವೇ ಆಗಿತ್ತು ಹಾಗೂ ಇದನ್ನು ಪ್ರತಿಯೊಂದು ಸನ್ನಿವೇಶದಲ್ಲೂ ತೋರಿಸಲಾಯಿತು. ಮಾನವೀಯತೆಯೇ ಶಾಂತಿ ಮತ್ತು ಸತ್ಯ ಎಂಬುದು ಅಖೆನಟನ್‌ನ ಅನಿಸಿಕೆ. ಸಿರಿಯಾದ ಬಂಡುಕೋರರಿಗೆ ಇದು ಸತ್ಯವೆನಿಸಲಿಲ್ಲ. ಬಲಪ್ರಯೋಗ ಯಾವುದಕ್ಕೂ ಚಿಕಿತ್ಸೆಯಾಗಿರಲಿಲ್ಲ. ಅಖೆನಟನ್ ನ ಸತ್ಯ ಪ್ರತಿಪಾದನೆ ಅನೇಕರಿಗೆ ಅಪ್ರಿಯವಾಯಿತು. ಅವರಿಗೆ ಸತ್ಯ ಮತ್ತು ಸೌಂದರ್ಯ ಅಪರಿಚಿತವಾಗಿಯೇ ಉಳಿದವು. ಅವನು ಕಿರಿಯ

ವಯಸ್ಸಿನಲ್ಲೇ ಗತಿಸಿದ ಇಲ್ಲವೇ ಕೊಲೆಯಾಗಿರಬೇಕು. ಅವನ ನಂತರ ಹೊಸ ಸಂದೇಶವನ್ನು ಪ್ರಸಾರ ಮಾಡುವವರು ಬರಲಿಲ್ಲ. ಮುಂದಿನ ಮೂವತ್ತು ವರ್ಷಗಳ ಒಳಗಾಗಿ ಹಳೆಯ ದೇವತೆಗಳು ವಿಜೃಂಭಿಸಿದರು. ಅಬೆನಟನ್‌ನ ಸುಂದರ ಕನಸು ಮುಗಿದೇ ಹೋಯಿತು. ಅಟೋನ್ ಸೂರ್ಯ ದೇವನ ಆರಾಧನೆ ಅವನ ತಾಯಿಯ ಕಾಲದಲ್ಲೇ ಆರಂಭವಾಗಿತ್ತು ಎನ್ನುವುದನ್ನು ಕಡೆಗಣಿಸುವಂತಿಲ್ಲ; ಆಕೆಯೇ ಪ್ರೇರಣೆ ಅವನಿಗೆ. ಹೆಲಿಯೋಪಾಲಿಸ್‌ನಲ್ಲಿ ನಡೆದ ಸೂರ್ಯಾರಾಧನೆಯಲ್ಲಿ ಈ ಹೆಸರು ಚಾಲ್ತಿಯಲ್ಲಿತ್ತು. ಸತ್ಯದೊಂದಿಗಿನ ಬದುಕು ಮತ್ತು ಪ್ರಸರಣವಾಗುವ ಚೈತನ್ಯ ಇವನ ಕಾಲದ ಕ್ರಾಂತಿಯ ಹಿಂದಿನ ಪ್ರಚೋದಕ ಅಂಶಗಳು.

ಚಂದ್ರನನ್ನು ವ್ಯಕ್ತಿ ರೂಪದಲ್ಲಿ ವಿವಿಧ ರೀತಿಯಲ್ಲಿ ರೂಪಿಸಲಾಗಿತ್ತು. ಕಾಲವನ್ನು ನಿಯಂತ್ರಿಸುವ ಹಾಗೂ ಕಾಲಗಣನೆಯ ದೇವರಾದ ಟೋತ್ ನನ್ನು ಚಂದ್ರನೆಂದು ಗುರುತಿಸಲಾಗಿದೆ. ಇವನು ನಾಗರಿಕತೆಯ ಪೋಷಕ. ಲೇಖನ, ಖಗೋಳ, ವಿಜ್ಞಾನ, ಗಣಿತ, ಕಾನೂನು, ತಂತ್ರಗಳನ್ನು ತಿಳಿಸುವವನು ಹಾಗೂ ರೋಗಗಳಿಗೆ ಚಿಕಿತ್ಸೆ ನೀಡುವವನು. ಮನುಷ್ಯ ದೇಹ ಮತ್ತು ಕೊಕ್ಕರೆ ಮುಖವನ್ನು ಪಡೆದಿದ್ದಾನೆ. ನಾಯಿ ಮುಖವಿರುವ ಬಬೂನ್ ಕೋತಿಯಂತೆಯೂ ಚಿತ್ರಿಸಿರುವುದುಂಟು. ಅಧೋ ಲೋಕದಲ್ಲಿ ಜನರ ಮುಗ್ಧತೆ ಅಥವಾ ಅಪರಾಧವನ್ನು ತೂಗಿ ನೋಡುವವನು. ರಾ ದೇವನ ಲೇಖಕ ಮತ್ತು ಆಡಳಿತಾಧಿಕಾರಿ. ಮೆಂಫಿಯಲ್ಲಿ ಪ್ತಹ ದೇವನ ಮುಖವಾಣಿ. ಇವನನ್ನು ಗ್ರೀಕರ ಹರ್ಮಿಸ್ ನೊಂದಿಗೆ ಗುರುತಿಸಲಾಗಿದೆ. ಅಲೆಮಾರಿಯಾದ ಖೆನ್‌ಷನೂ ಚಂದ್ರನೇ. ಮಾತೃದೇವತೆಯಾದ ಹಾತೋರ್‌ಳೊಂದಿಗೆ ಅವನನ್ನು ಮಿಲನಗೊಳಿಸಲಾಗಿದೆ. ಏಷ್ಯಾದ ಚಂದ್ರದೇವಿಯಾದ ಇಷ್ತರ್ ಅಥವಾ ಅಷ್ತರೋಹ ಅಥವಾ ಅಸ್ತರ್ಕೆಯಿಂದ ಹಾತೋರ್ ಹುಟ್ಟಿಕೊಂಡಿರಬೇಕು. ಓರಿಯನ್ ನಕ್ಷತ್ರವನ್ನು "ಸಹು" – ಎಂದು ಗುರುತಿಸಿ, ನಕ್ಷತ್ರಗಳನ್ನು ಪೂಜಿಸಲಾಯಿತು. ಇವನು ನಡೆಯುವ ಭಂಗಿಯಲ್ಲಿ ಚಿತ್ರಿತವಾಗಿದ್ದಾನೆ. ಸೊಂಟವಸ್ತ್ರ ಮತ್ತು ಎದೆಯ ಮೇಲೆ ಇಳಿ ಬಿದ್ದ ತಲೆ ಕಾಪನ್ನು ಧರಿಸಿದ್ದಾನೆ. ತಲೆಯ ಮೇಲೆ ನಕ್ಷತ್ರದ ಆಕೃತಿ ಇದೆ.

– ೬ –

ಸೆಬೆಕ್ ಜಲದೇವ. ಇವನನ್ನು ಮೊಸಳೆ ಅಥವಾ ಮನುಷ್ಯ ದೇಹಕ್ಕೆ ಮೊಸಳೆ ಮುಖವನ್ನು ಜೋಡಿಸಿದಂತೆ ಚಿತ್ರಿಸಲಾಗಿದೆ. ಅವನ ತಲೆಯ ಮೇಲೆ ಸರ್ಪಲಾಂಛನ

ಮತ್ತು ಎರಡು ಉದ್ದನೆಯ ಪುಕ್ಕಗಳನ್ನು ಲಂಬವಾಗಿ ಅಲಂಕರಿಸಲಾಗಿದೆ. ಇವನ ದೇವಾಲಯ ಫಯುಮ್ ನಲ್ಲಿ ಇತ್ತೆಂದು ಇತಿಹಾಸಕಾರ ಸ್ಟ್ರಾಟೋ ತಿಳಿಸುತ್ತಾನೆ. ಗ್ರೀಕರು ಈ ಸ್ಥಳವನ್ನು ಕ್ರೊಕೊಡೈಲೋ ಪಾಲಿಸ್ ಎಂದು ಕರೆದರು. ಅನಂತರದ ಕಾಲದಲ್ಲಿ ಇಲ್ಲಿ ಮೊಸಳೆಗಳ ಪವಿತ್ರ ಕೊಳವನ್ನು ನಿರ್ಮಿಸಲಾಗಿತ್ತು. ಅನುಬಿಸ್ ಅಧೋ ಲೋಕದ ಪ್ರಮುಖ ದೈವ. ಕೆನೋಪಾಲಿಸ್ ಇವನ ಆರಾಧನೆಯ ಕೇಂದ್ರ; ಗ್ರೀಕ್ ಭಾಷೆಯಲ್ಲಿ "ಶ್ವಾನನಗರ" ಎಂದು ಕರೆಯುತ್ತಾರೆ. ನಾಯಿ ಅಥವಾ ನರಿ ಅವನ ಪವಿತ್ರ ಪ್ರಾಣಿಗಳು. ಇವನನ್ನು ಕುಳಿತಿರುವ ನಾಯಿ ಅಥವಾ ನರಿಯಂತೆ ಚಿತ್ರಿಸಲಾಗಿದೆ. ನರಿ ಮುಖ ಮತ್ತು ಮನುಷ್ಯ ದೇಹವನ್ನು ಪಡೆದಿರುವಂತೆ ಸಾಮಾನ್ಯವಾಗಿ ರೂಪಿಸಲಾಗಿದೆ. ಇವನು ಸೊಂಟಬಟ್ಟೆ, ಕೈಬಳೆ, ತೋಳಬಂದಿ ಮತ್ತು ಕಂಠಾಭರಣವನ್ನು ಧರಿಸಿ, ಎಡಗೈಲಿ ದಂಡವನ್ನು ಹಿಡಿದ್ದಾನೆ. ಇವನು ಅಧೋ ಲೋಕದಲ್ಲಿ ಒಸಿರಿಸ್‌ನ ಸಹಾಯಕ ; ಜನರ ಅಂತ್ಯ ಸಂಸ್ಕಾರದಲ್ಲಿ ವಿಧಿ ವಿಧಾನಗಳನ್ನು ಪೂರೈಸುವ ದೇವ. ನ್ಯಾಯ ತಕ್ಕಡಿಯಿಂದ ಪ್ರತಿಯೊಬ್ಬರ ಹೃದಯವನ್ನು ತೂಗಿ ನೋಡುವ, ಭೂಮಿಯ ಮೇಲೆ ಅವರ ಸತ್ಕೃತಿ ಮತ್ತು ಹೀನ ಕೆಲಸಗಳನ್ನು ಅಳೆಯುವವನು. ಇವನ ಆರಾಧನೆ ಅನಂತರದ ಕಾಲದಲ್ಲಿ ಗ್ರೀಸ್ ಮತ್ತು ರೋಮ್ ಗೂ ಹರಡಿತು. ಅಲ್ಲಿ ಇವನನ್ನು ಹರ್ ಮಿಸ್ ನೊಂದಿಗೆ ಹೋಲಿಸಲಾಗಿದೆ. ನರಿಯ ಸರಳ ಆರಾಧನೆಯಿಂದ ಈ ದೈವ ವ್ಯವಸ್ಥೆ ಜಾರಿಗೆ ಬಂದಂತೆ ಕಂಡು ಬರುತ್ತದೆ.

- ೭ -

ಹಾತೋರ್ ಳು ಗೋ ದೇವತೆ. ದಂಡರ್ಸಾದಲ್ಲಿ ಇವಳ ಆರಾಧನೆ ನಡೆಯುತ್ತಿತ್ತು. ಎಡ್ ಫೋದಲ್ಲಿ ಹೊರಸ್‌ನ ಜೊತೆಯಲ್ಲಿ ಪೂಜಿಸಲಾಗುತ್ತಿತ್ತು. ಟೌರ್ತ್‌ಳು ಹಿಪ್ಪೋಪಾಟಮಸ್ ಮುಖದ ದೇವಿ. ಸೆಟ್ ನ ಪತ್ನಿ ಹಾಗೂ ಶಿಶು ಜನನದ ದೇವತೆ. ಐಸಿಸ್‌ಳ ನೇತ್ರರನ್ನು ಶುಚಿಗೊಳಿಸಿದವಳು. ಸ್ತ್ರೀಯರು ಗರ್ಭಧಾರಣೆಯ ಕಾಲದಲ್ಲಿ ಇವಳನ್ನು ವಿಶೇಷವಾಗಿ ಪೂಜಿಸುತ್ತಿದ್ದರು. ಇವಳ ಪ್ರತಿಮೆಯನ್ನು ಥೇಬ್ಸ್‌ನಲ್ಲಿ ಪತ್ತೆ ಹಚ್ಚಲಾಯಿತು. ಸಿಟೋಕ್ರೈಸ್ ನಲ್ಲಿ ಇವಳ ದೇವಾಲಯವನ್ನು ಕಟ್ಟಲಾಗಿತ್ತು. ಹಾಕೆತ್ ಳೂ ಜನನ ದೇವತೆಯೇ. ಇವಳಿಗೆ ಕಪ್ಪೆಯ ಮುಖವಿದೆ. ಬಸ್ತಳು ಮಾರ್ಜಾಲ ದೇವತೆ ಹಾಗೂ ಪ್ರೇಮ ಕನ್ಯೆ. ನೈಲ್ ನದಿಯ ಮುಖಜಭೂಮಿಯಲ್ಲಿರುವ ಬೂಬಸ್ತಿ ಯಲ್ಲಿ ಇವಳಿಗೆ ದೇಗುಲವನ್ನು ನಿರ್ಮಿಸಲಾಗಿತ್ತು. ನೆಹೆಬ್ಕಳು ಸರ್ಪದೇವತೆ. ಗತಿಸಿದವರಿಗೆ

ಸ್ಥಾನಮಾನಗಳನ್ನು ಒದಗಿಸುವವಳು. ಬುಟೊ ನಗರದಲ್ಲಿ ಈಕೆಯ ಆರಾಧನೆ ಆರಂಭವಾಯಿತು. ಇವಳು ಕೆಳಗಣ ಈಜಿಪ್ಟಿನ ಅಧಿದೇವತೆ. ನೆಖಬೆತ್ ಳು ರಣಹದ್ದಿನ ದೇವತೆ. ಇವಳು ಮೇಲಣ ಈಜಿಪ್ಟಿನ ಅಧಿದೇವತೆ. ಈಜಿಪ್ಟಿನ ಫೆರೋವರು ಈ ಎರಡು ಪ್ರದೇಶಗಳನ್ನು ಒಂದುಗೂಡಿಸಿದ್ದಕ್ಕಾಗಿ ತಮ್ಮ ಹಣೆಯ ಹುಬ್ಬುಗಳ ಮೇಲೆ ಸರ್ಪ ಮತ್ತು ಹದ್ದಿನ ಚಿಹ್ನೆಗಳನ್ನು ಧರಿಸುತ್ತಿದ್ದರು.

- ೮ -

ಅಮೂರ್ತ ಭಾವನೆಗನ್ನು ಪ್ರತಿನಿಧಿಸುವ ಮೂರನೇ ವರ್ಗದ ದೇವತೆಗಳು ಕ್ರಿ.ಪೂ. ೫೮೦೦ ರ ವೇಳೆಗೆ ಈಜಿಪ್ಟನ್ನು ಪ್ರವೇಶಿಸಿದರು. ಇದರಲ್ಲಿ ಸೃಷ್ಟಿಕರ್ತನಾದ ಪ್ತಹ ಪ್ರಮುಖ. ಮೆಂಫಿಯಲ್ಲಿ ಅವನ ಜೊತೆಗೆ ವೃಷಭನಾದ ಅಪಿಸ್‌ನನ್ನು ಪೂಜಿಸುತ್ತಿದ್ದುಂಟು. ಇವನನ್ನು ಔಸಿರಿಸ್ ಮತ್ತು ಯಮದೇವನಾದ ಸೆಕೆರ್ ರೊಂದಿಗೆ ಒಂದುಗೂಡಿಸಲಾಯಿತು. ಇವರನ್ನು ಪ್ತಹ - ಸೆಕೆಕ್ - ಔಸಿರಿಸ್ ಎಂದು ಪೂಜಿಸಲಾಗುತ್ತಿತ್ತು. ಮೆಂಫಿಯಲ್ಲಿ ಪ್ತಹನಿಗೆ ವಿಶೇಷ ಪ್ರಾಮುಖ್ಯ ಸಲ್ಲುತ್ತಿತ್ತು; ಅಪರೂಪವಾಗಿ ಉಳಿದೆಡೆಯಲ್ಲೂ ಆರಾಧಿಸುತ್ತಿದ್ದರು. ಉಳಿದ ದೇವರುಗಳಂತೆ ಅವನ ಆಗಮನವು ಯಾವುದೇ ಪೌರಾಣಿಕ ಕಗ್ಗಗಳಿಂದ ಕೂಡಿಲ್ಲ. ಅವನ ಪ್ರಮುಖ ಅರ್ಚಕ ಕಾರ್ಮಿಕರ ಹಿರಿಯ ನಾಯಕ ಎಂಬ ಮನ್ನಣೆಗೆ ಗುರಿಯಾಗಿದ್ದ. ಇವನನ್ನು ಮಮ್ಮಿಗಳೊಂದಿಗೆ ತೋರಿಸಿರುವುದುಂಟು. ಅವನ ಶಿಲ್ಪದಲ್ಲಿ ಉದ್ದನೆಯ ಗಡ್ಡವಿರುವಂತೆ ಚಿತ್ರಿಸಲಾಗಿದೆ. ಕತ್ತಿನ ಹಿಂದೆ ಕುಚ್ಚುಗಳಿದ್ದು, ಸಮಭಂಗಿಯಲ್ಲಿ ನಿಂತು ಇಳಿಜಾರಾದ ಬಟ್ಟೆಯನ್ನು ಮೈತುಂಬ ಧರಿಸಿದ್ದಾನೆ. ಇದು ಮಮ್ಮಿಯ ರೂಪವಿರಬಹುದು. ಎರಡು ಕೈಗಳಲ್ಲಿ ತ್ರಿಶೂಲದಂತಿರುವ ದಂಡವನ್ನು ಹಿಡಿದಿದ್ದಾನೆ. ಇದು ಶಕ್ತಿ, ಚೈತನ್ಯ, ಜೀವ ಮತ್ತು ಸ್ಥಿರತೆಯ ಸಂಕೇತವಾಗಿದೆ. ಇನ್ನಿಬ್ಬರು ದೇವತೆಗಳು ಮೆಂಫಿಯಲ್ಲಿ ಅವನ ಜೊತೆಗಿದ್ದರು. ಇದು ಮತ್ತೊಂದು ತ್ರಿಮೂರ್ತಿ ವರ್ಗ. ಎರಡನೆಯ ದೈವ ಅವನ ಪತ್ನಿ ಸಖ್ಮೆತ್. ಮೂರನೆಯವನು ಅವನ ಮಗ ನೆರ್ಫೆಟಿಮ್. ಸೆಖ್ಮೆತ್ ಸಿಂಹ ದೇವತೆ ಅವಳನ್ನು ಸಿಂಹದ ಮುಖವಿರುವ ಯುವತಿಯಂತೆ ಚಿತ್ರಿಸಲಾಗಿದೆ. ಇವಳು ಸುಖಾಸೀನಳಾಗಿ ಪೀಠದ ಮೇಲೆ ಕುಳಿತಿದ್ದಾಳೆ. ಇವಳನ್ನು ಬೆಕ್ಕಿನ ಮುಖವನ್ನು ಪಡೆದಿರುವಂತೆ ಚಿತ್ರಿಸಿರುವುದೂ ಉಂಟು. ಸೆಖ್ಮೆತ್ ಸೂರ್ಯ ಚೈತನ್ಯವನ್ನು ಪ್ರತಿನಿಧಿಸುವ ದೇವತೆಯೂ ಹೌದು. ರಾಜಚಿಹ್ನೆಯಾದ ಸರ್ಪಲಾಂಛನವನ್ನು ಸೂರ್ಯ ಬಿಂಬವನ್ನು

ಆಕೆ ತಲೆಯ ಮೇಲೆ ಧರಿಸಿದ್ದಾಳೆ. ನೆಫೆರ್ಟೆಮ್ ಸಸ್ಯ ಮತ್ತು ಬೆಳವಣಿಗೆಯ ದೈವ. ಇವನ ತಲೆಯ ಮೇಲೆ ಅರಳಿದ ದಳಗಳಿಂದ ಕೂಡಿದ ಕಮಲವಿರುವಂತೆ ತೋರಿಸಲಾಗಿದೆ. ಇದು ಬೆಳವಣಿಗೆಯ ಸಂಕೇತ. ನಡೆಯುವ ಭಂಗಿಯಲ್ಲಿರುವ ಇವನು ಬಲಗೈಲಿ ದಂಡವನ್ನು ಹಿಡಿದ್ದಾನೆ. ನೆಫರ್‌ಟಿಮ್‌ನ ಸ್ಥಾನವನ್ನು ಕೆಲವೊಮ್ಮೆ ಇಮ್ ಹೊಟೆಪ್ ಆಕ್ರಮಿಸಿರುವುದುಂಟು. ಇವನು ದೇವ ವೈದ್ಯ. ಇಸ್ಕಿಲ್ ಪಿಯಸ್ ನಂತೆ ಕರುಣನಾಗಿ ಚಿತ್ರಿತವಾಗಿದ್ದಾನೆ. ಮೂರು ಮಾಲೆಯ ಕಂಠಾಭರಣವನ್ನು ಧರಿಸಿದ್ದಾನೆ. ಸುರುಳಿ ಬಿಚ್ಚಿದ ಪ್ಯಾಪಿರಸ್ ಹಸ್ತ ಪ್ರತಿಯ ಅಂಚುಗಳನ್ನು ಎರಡು ಕೈಗಳಲ್ಲಿ ಹಿಡಿದು ಆರಾಮವಾಗಿ ಪೀಠದ ಮೇಲೆ ಇಮ್ ಹೊಟೆಪ್ ನನ್ನು ಕುಳಿತಿರುವಂತೆ ಚಿತ್ರಿಸಲಾಗಿದೆ. ಇವನು ಸೆಖ್ಮೆತ್ ಳ ಮಗನೇ.

ಅಮೂರ್ತ ದೇವತೆಗಳಲ್ಲಿ ಪಿತೃದೇವನಾದ ಮಿನ್ ಮತ್ತು ಮಾತೃದೇವಿಯಾದ ಹಾತೋರ್ ಪ್ರಮುಖರೇ . ಮಾನವ ಕುಲದ ಉತ್ಪತ್ತಿಗೆ ಸಂಬಂಧಿಸಿದಂತೆ ಯಾವುದೇ ಹಿನ್ನೆಲೆಯೂ ಅವರಿಗಿಲ್ಲ. ಅವರು ಕೇವಲ ತಂದೆ ಮತ್ತು ತಾಯ್ತನದ ತತ್ವವಾಗಿದ್ದಾರೆ. ಅವರು ಕೆಂಪು ಕಡಲಿನ ದಕ್ಷಿಣ ಭಾಗದಿಂದ ಈಜಿಪ್ಟಿಗೆ ಬಂದವರು. ಮಿನ್ ಮುಂದೆ ಅಮೋನ್ - ರಾ ದೇವನಲ್ಲಿ ವಿಲೀನವಾದ. ಹಾತೋರ್ ಗ್ರಾಮಗಳಲ್ಲಿ ಸ್ಥಳೀಯ ಮಾತೃದೇವತೆಯಾಗಿ ನಾಡಿನಾದ್ಯಂತ ಪೂಜೆಗೊಳಗಾದಳು. ಇಟಲಿಯಲ್ಲಿ ಇವಳು ಮೊಡೆನ್ನಾ ದೇವತೆಯಾಗಿ ಆರಾಧನೆಗೆ ಸ್ವೀಕೃತಳಾದಳು. ಹಾತೋರ್ ಐಸಿಸ್ ಳೊಂದಿಗೆ ಮಾತೃದೇವತೆಯಾಗಿಯೂ ಸೇರ್ಪಡೆಯಾಗಿದ್ದುಂಟು. ಹಲವು ಅಮೂರ್ತ ಭಾವನೆಗಳಿಗೆ ದೈವತ್ವವನ್ನು ಕಲ್ಪಿಸಲಾಯಿತು. ಮಾತ್ ಸತ್ಯದ ದೇವತೆ. ಸಫೆಖ್ ಅಥವಾ ಸೆಷತ್ ಲಿಪಿಯ ದೇವತೆ. ಆದರೆ ಅವರಿಗಾಗಿ ದೇಗುಲಗಳನ್ನು ಕಟ್ಟಿ ಪೂಜಿಸಲಿಲ್ಲ.

-೬-

ವಿದೇಶದಿಂದ ಬಂದ ಮತ್ತೊಂದು ಬಗೆಯ ದೈವಗಣವನ್ನು ಕಾಣಬಹುದು. ಈ ದೈವಗಳೊಂದಿಗೆ ಅವರ ಆರಾಧಕರು ಬರಲಿಲ್ಲ. ಈ ದೇವತೆಗಳಲ್ಲಿ ಹೆಚ್ಚು ಅಂಗೀಕೃತವಾದ ಸ್ತ್ರೀದೇವತೆ ಬೆಸ್. ಈಕೆ ಚಿರತೆಯ ಚರ್ಮವನ್ನು ಧರಿಸಿದ ಸುಡಾನಿನ ನೃತ್ಯಗಾತಿ ಹಾಗೂ ಗೃಹಾಗತ್ಯ ವಸ್ತುಗಳ ಮತ್ತು ಸಂಭ್ರಮದ ಪ್ರತಿನಿಧಿ. ಸತೇಖ, ಬಾಲ್, ರೆಷ್ಪು, ಅಸ್ತರ್ತೆ, ಕದೇಶ್ ಮುಂತಾದ ಸಿರಿಯ ದೇವತೆಗಳು ಈಜಿಪ್ಟಿನಲ್ಲಿ ಪ್ರವೇಶ ಪಡೆದವು. ಹಿಟ್ಟೈಟ್ ನಿಂದ ಬಂದ ಆಯುಧದೇವತೆಗಳಾದ ಅನೈಟಿಸ್ ಅಥವಾ ಅನಾಹಿತ ಮತ್ತು

ವಾಯುದೇವನಾದ ಓಮ ನಿಜಕ್ಕೂ ಕೌತುಕಪೂರ್ಣವಾದ ವಿಷಯಗಳು.

ಈಜಿಪ್ಟಿನ ಜನಸಮುದಾಯವು ನಿರಂತರ ದಾಳಿಕೋರರ ವಲಸೆಗಳಿಂದ ತುಂಬಿರುವುದರಿಂದ ಧರ್ಮ ಮತ್ತು ಮತಾಚರಣೆಗಳು ಮಿಶ್ರಗೊಂಡಿವೆ. ಹಲವು ಆಫ್ರಿಕಾದ ಮತಭಾವನೆಗಳು ಈಜಿಪ್ಟಿನ ಧಾರ್ಮಿಕ ಬದುಕಿನ ಆಳದಲ್ಲಿ ಜೀವಂತವಾಗಿವೆ. ಅವು ಇಂದಿಗೂ ಮಧ್ಯ ಆಫ್ರಿಕಾದಲ್ಲಿ ಉಳಿದು ಬಂದಿವೆ. ಪೂರ್ವ, ಪಶ್ಚಿಮ ಮತ್ತು ಉತ್ತರದಿಂದ ಬಂದ ಜನಾಂಗಗಳು ತಮ್ಮೊಂದಿಗೆ ಪೌರಾಣಿಕ ವಿಷಯಗಳು, ದೇವತೆಗಳು, ಹಾಗೂ ಅವುಗಳ ಆರಾಧನೆಯನ್ನು ತಂದು ಈಜಿಪ್ಟಿನ ಧರ್ಮ ಮತ್ತು ಮೂರ್ತಿ ಶಿಲ್ಪವನ್ನು ಶ್ರೀಮಂತಗೊಳಿಸಿದರು.

**

ಶ್ರೀಕೃಷ್ಣ ಪಾರಿಜಾತ ಕಾವ್ಯ - ರಂಗಪ್ರಯೋಗ : ವಸ್ತು ವಿವೇಚನೆ

- ಡಾ. ಬಸವರಾಜ ಮಲಶೆಟ್ಟಿ

ಅಪರಾಳ ತಮ್ಮಣ್ಣನ ಶ್ರೀ ಕೃಷ್ಣಪಾರಿಜಾತ ರಚನೆಗೊಂಡುದು ೧೭೫೦ರ ಸುಮಾರಿಗೆ. ಅಂದು ಕೃತಿ ರಚನೆಗೆ ಸಮಕಾಲೀನ ಕನ್ನಡ ಸಾಹಿತ್ಯದ ಪ್ರವೃತ್ತಿ ಪ್ರೇರಣೆ ನೀಡಿದ್ದು ಸಹಜವಾಗಿದೆ. ಅದು ಯಕ್ಷಗಾನ ಕೃತಿಗಳ ಸುಗ್ಗಿಕಾಲ. ಪಾರಂಪರಿಕ ಕಾವ್ಯ ವಸ್ತುವನ್ನು ಹಾಡುಗಬ್ಬಗಳಿಗೆ ಅಳವಡಿಸುವ ಕಾರ್ಯ ಆಗ ಭರದಿಂದ ನಡೆಯಿತು. ಒಂದು ಕಾವ್ಯವನ್ನು ಷಟ್ಪದಿ, ಸಾಂಗತ್ಯ, ತ್ರಿಪದಿ, ಛಂದಸ್ಸಿನಲ್ಲಿ ಪೂರ್ತಿಯಾಗಿ ರಚಿಸುವುದರ ಬದಲಾಗಿ ಹಾಡಲು ಅನುಕೂಲವಾಗುವಂಥ ವಿವಿಧ ಛಂದೋಬಂಧಗಳಲ್ಲಿ ರಚಿಸುವುದು ಆಕರ್ಷಕ ವಿಧಾನವೆನಿಸಿತು. ಇದೇ ಯಕ್ಷಗಾನ ರೂಪ. ಅಪರಾಳ ತಮ್ಮಣ್ಣನು ಸಮಕಾಲೀನ ಸಾಹಿತ್ಯಿಕ ವಾತಾವರಣದಿಂದ ಪ್ರೇರಣೆ ಪಡೆದು ಶ್ರೀಕೃಷ್ಣಪಾರಿಜಾತ ಹಾಡುಗಬ್ಬವನ್ನು ಅಥವಾ ಯಕ್ಷಗಾನ ಕೃತಿಯನ್ನು ರಚಿಸಿದನು. ಅವನ ಸ್ಥಾಯಿಭಾವ ಕೃಷ್ಣ ಭಕ್ತಿ. ಕೃಷ್ಣಭಕ್ತಿಯ ವೈವಿಧ್ಯಮಯವಾದ ನಿರೂಪಣೆಗೆ ಅವನು ಪಾರಿಜಾತ ಕಥೆಯನ್ನು ಬಳಸಿಕೊಂಡನು. ಭಾಗವತ ಹರಿ ವಂಶಗಳಲ್ಲಿ ನಿರೂಪಿತವಾದ ಮತ್ತು ಪ್ರಸನ್ನ ವೆಂಕಟದಾಸರಂಥವರಿಂದ ಈಗಾಗಲೇ ಜನಪ್ರಿಯವಾಗಿದ್ದ ಪಾರಿಜಾತ ಅಪಹರಣ ಕಥೆ ತಮ್ಮಣ್ಣನನ್ನು ಆಕರ್ಷಿಸಿತು. ಭಕ್ತಿ ಶೃಂಗಾರ ಕಲಹ - ಶೌರ್ಯಗಳ ಸಮ್ಮಿಶ್ರಣವಾಗಿರುವ ಈ ಕಥಾ ಭಾಗ ಓದುಗರ ಕೇಳುಗರ ಮನಸೂರೆಗೊಳ್ಳುವುದೆಂಬ ವಿಶ್ವಾಸ ಅವನಲ್ಲಿತ್ತು.

ಪಾರಿಜಾತದ ಕಥೆ ಭಾಗವತ ಮತ್ತು ಹರಿವಂಶಗಳಲ್ಲಿ ಉಲ್ಲೇಖಗೊಂಡಿದೆ. ಪ್ರಾಗ್ಜ್ಯೋತಿಷಪುರದ ಭೌಮಾಸುರ - ನರಕಾಸುರ ಮುರ ಮೊದಲಾದ ರಕ್ಕಸರನ್ನು ಸಂಹರಿಸಿದ ಮೇಲೆ ಕೃಷ್ಣನು ಸತ್ಯಭಾಮೆಯೊಂದಿಗೆ ದೇವಲೋಕಕ್ಕೆ ಹೋಗುತ್ತಾನೆ. ರಕ್ಕಸರು ಪಹರಿಸಿಕೊಂಡಿದ್ದ ದೇವತೆಗಳ ತಾಯಿ ಅದಿತಿಯ ಕರ್ಣಕುಂಡಲಗಳನ್ನು ಒಪ್ಪಿಸುವುದು ಅವನ ಪ್ರಯಾಣದ ಉದ್ದೇಶವಾಗಿತ್ತು. ಹೀಗೆ ಒಪ್ಪಿಸಿ ಬರುವಾಗ ನಂದನವನದಲ್ಲಿದ್ದ ಪಾರಿಜಾತ ವೃಕ್ಷದ ಮೇಲೆ ಸತ್ಯಭಾಮೆಯ ದೃಷ್ಟಿ ಬಿದ್ದಿತು. ಅವಳ ಇಚ್ಛೆ ಈಡೇರಿಸಲು ಕೃಷ್ಣ ಅದನ್ನು ಕಿತ್ತುಕೊಂಡು ದ್ವಾರಕೆಗೆ ತಂದು ನೆಡಲು

ಕಾರ್ಯಪ್ರವೃತ್ತನಾಗುತ್ತಾನೆ. ಕೃಷ್ಣನ ಪ್ರಯತ್ನಕ್ಕೆ ಇಂದ್ರ ತಡೆಯೊಡ್ಡುತ್ತಾನೆ. ಇಬ್ಬರಿಗೂ ಯುದ್ಧ ನಡೆಯುವುದು, ಇಂದ್ರ ಸೋಲುತ್ತಾನೆ. ಕೃಷ್ಣನು ಪಾರಿಜಾತ ವೃಕ್ಷವನ್ನು ತಂದು ಸತ್ಯಭಾಮೆಯ ಅರಮನೆಯ ಅಂಗಳದಲ್ಲಿ ನೆಡುವನು. ಒಟ್ಟಾರೆ ಈ ಕಥಾ ಭಾಗದಲ್ಲಿ ಕೃಷ್ಣನ ಶೌರ್ಯ ಸಾಹಸಗಳೇ ಢಾಳವಾಗಿ ಕಂಡುಬರುತ್ತದೆ.

ಪಾರಿಜಾತ ಕಥೆಯನ್ನು ಅಪರಾಳ ತಮ್ಮಣ್ಣನು ಸಂಯೋಜಿಸಿರುವ ಕ್ರಮ ಬೇರೆ ರೀತಿಯಲ್ಲಿದೆ. ದೈತ್ಯರ ಭಾರ ತಾಳದೆ ಭೂದೇವಿಯು ಧೇನು ರೂಪದಿಂದ ವಿಷ್ಣುವಿನಲ್ಲಿಗೆ ಬಂದು ದೈತ್ಯ ಸಂಹಾರ ಕೈಗೊಳ್ಳಲು ವಿನಂತಿಸಿಕೊಳ್ಳುತ್ತಾಳೆ. ವಿಷ್ಣು ಕೃಷ್ಣಾವತಾರ ಧಾರಣೆ ಮಾಡಿ ಭೂಲೋಕದಲ್ಲಿ ಅವತರಿಸುವನು. ಅವನು ಬೆಳೆದು ದೊಡ್ಡವನಾಗಿ ಕಂಸನನ್ನು ಸಂಹರಿಸಿ ದ್ವಾರಕೆಯಲ್ಲಿ ಅಷ್ಟಮಹಿಷಿಯರೊಂದಿಗೆ ಸುಖ ಸಂತೋಷದಿಂದ ಕಾಲ ಕಳೆಯುತ್ತಿದ್ದಾಗ ನಾರದನು ದೇವಲೋಕದ ಪಾರಿಜಾತ ಪುಷ್ಪ ತಂದು ಕೊಡುತ್ತಾನೆ. ಕೃಷ್ಣ ಅದನ್ನು ರುಕ್ಮಿಣಿಗೆ ಮುಡಿಸಿದನು. ಈ ಸುದ್ದಿಯನ್ನು ನಾರದ ಸತ್ಯಭಾಮೆಗೆ ತಿಳಿಸಿದಾಗ ಅವಳಲ್ಲಿ ಸವತಿ ಮತ್ಸರ ಮತ್ತು ವಿರಹ ಭಾವ ಒಮ್ಮೆಲೇ ಪುಟಿದೇಳುತ್ತವೆ. ಪಾರಿಜಾತ ಕಳಿಸಿಕೊಡಬೇಕೆಂದು ಕೃಷ್ಣನಿಗೆ ಪತ್ರ ಬರೆಯುತ್ತಾಳೆ. ಕೃಷ್ಣನನ್ನು ಕರೆದು ಕೊಂಡು ಬರಲು ದೂತಿಯರನ್ನು ಕಳಿಸುತ್ತಾಳೆ. ಕೃಷ್ಣ ಬರಲೇ ಇಲ್ಲ. ಕೊನೆಗೆ ಸ್ವತಃ ಕೃಷ್ಣನಿದ್ದ ರುಕ್ಮಿಣಿಯ ಅರಮನೆಗೆ ಹೋಗುತ್ತಾಳೆ. ಅಲ್ಲಿ ಅವಳಿಗೆ ಕೃಷ್ಣನ ನಿರಾಕರಣೆಯಿಂದ ಅಪಮಾನವಾಗುತ್ತದೆ. ಸತ್ಯಭಾಮೆ ರುಕ್ಮಿಣಿಯರು ಸಾಮಾನ್ಯ ಸವತಿಯರಂತೆ ಜಗಳವಾಡುತ್ತಾರೆ. ಇಲ್ಲಿ ಸತ್ಯಭಾಮೆಗೆ ಪಾರಿಜಾತ ಪುಷ್ಪಕ್ಕಿಂತ ತನ್ನ ಪ್ರತಿಷ್ಠೆ ಹೆಚ್ಚಿನದಾಗಿ ತೋರುತ್ತದೆ. ಕೃಷ್ಣನಿಗೆ "ನಿನ್ನ ಕಲ್ಲಿನಂಥ ಮನಸ್ಸನ್ನು ಬೆಣ್ಣೆಯಂತೆ ಕರಗಿಸದಿದ್ದರೆ ನಾನು ಸತ್ಯಭಾಮೆಯೇ ಅಲ್ಲ" ಎಂದು ಹೇಳಿ ಪ್ರತಿಜ್ಞೆ ಮಾಡಿ ತನ್ನ ಅರಮನೆಗೆ ಬರುತ್ತಾಳೆ. ಶಕ್ತಿ ಪೂಜೆ ಮಾಡಿ ಭವಾನಿಯಿಂದ ವರ ಪಡೆದುಕೊಂಡಳು. ಇದರ ಪರಿಣಾಮದಿಂದ ಕೃಷ್ಣನ ಮನಸ್ಸು ಸತ್ಯಭಾಮೆ ಕಡೆಗೆ ಹರಿಯಲಾರಂಭಿಸಿತು. ಕೊರವಂಜಿ ವೇಷಧಾರಿಯಾಗಿ ಅವಳ ಅರಮನೆಗೆ ಬಂದು ಅವಳಿಗೆ ಕೃಷ್ಣನ ಸಮಾಗಮದ ಕಣಿ ಹೇಳಿ ಬರುವನು. ನಂತರ ಮೂಲ ರೂಪದಲ್ಲಿಯೇ ಅವಳಲ್ಲಿಗೆ ಹೋಗಿ ಶೃಂಗಾರಮಯ ರಾತ್ರಿ ಕಳೆದು ಅವಳಿಗೆ ನವವಿಧ ಭಕ್ತಿ ತಿಳಿಸುವನು. ಇಷ್ಟೊತ್ತಿಗೆ ಇಂದ್ರನು ಬಂದು ದೈತ್ಯರ ಉಪಟಳದ ಬಗ್ಗೆ ಅರಹುತ್ತಾನೆ. ಸತ್ಯಭಾಮೆ ಯೊಂದಿಗೆ ಕೃಷ್ಣ ಗರುಡ ವಾಹನನಾಗಿ ಹೋಗಿ ನರಕಾಸುರ ಮುರ ಮೊದಲಾದ

ದೈತ್ಯರನ್ನು ಸಂಹರಿಸಿ ಅದಿತಿಯ ಕುಂಡಲಗಳನ್ನು ಕೊಡಲು ದೇವಲೋಕಕ್ಕೆ ಹೋಗುವನು. ಅಲ್ಲಿ ನಂದನವನದಲ್ಲಿರುವ ಪಾರಿಜಾತಕ್ಕೆ ಸತ್ಯಭಾಮೆ ಮೋಹಗೊಳ್ಳುತ್ತಾಳೆ. ಪಾರಿಜಾತ ವೃಕ್ಷ ಕೀಳಲು ಹೋದಾಗ ಇಂದ್ರ ಪ್ರತಿಭಟಿಸುತ್ತಾನೆ. ಸತ್ಯಭಾಮೆಗೂ ಇಂದ್ರನಿಗೂ ಯುದ್ಧ ನಡೆದು ಇಂದ್ರ ಸೋಲುತ್ತಾನೆ. ಅಂತೂ ಪಾರಿಜಾತ ವೃಕ್ಷ ತಂದು ಸತ್ಯಭಾಮೆಯ ಮನೆಯ ಅಂಗಳದಲ್ಲಿ ನೆಡಲಾಯಿತು. ಆದರೆ ಅದರ ಹೂಗಳೆಲ್ಲ ರುಕ್ಮಿಣಿಯ ಅಂಗಳದಲ್ಲಿ ಬಿದ್ದುದನ್ನು ಕಂಡು ಸತ್ಯಭಾಮೆ ಚಿಂತಿಸುತ್ತಾಳೆ. ನಿನ್ನ ಅಹಂಕಾರ ನಾಶವಾಗಬೇಕೆಂದು ಕೃಷ್ಣ ಸೂಚಿಸಿದಾಗ ಒಪ್ಪಿಕೊಂಡು ರುಕ್ಮಿಣಿಯ ಅರಮನೆಗೆ ಹೋಗುವಳು. ರುಕ್ಮಿಣಿ ಸವತಿ ಮತ್ಸರ ಮರೆತು ಪ್ರೀತಿಯಿಂದ ಸತ್ಕರಿಸುವಳು. ಇದಿಷ್ಟು ಅಪರಾಳ ತಮ್ಮಣ್ಣನ ಪಾರಿಜಾತದ ಕಥೆ.

ಭಾಗವತ ಮತ್ತು ಹರಿವಂಶಗಳಲ್ಲಿರುವ ಪಾರಿಜಾತ ಪ್ರಸಂಗಗಳನ್ನು ಸಮನ್ವಯ ಗೊಳಿಸಿರುವ ಅಪರಾಳ ತಮ್ಮಣ್ಣನು ತನ್ನ ಕೃತಿ ಲಕ್ಷಣಯುತವಾದ ಹಾಡು ಗಬ್ಬವಾಗುವಂತೆ ಪ್ರಯತ್ನಿಸಿದ್ದಾನೆ. ಅವನ ಕಥೆ ನೇರವಾಗಿ ಪ್ರಾರಂಭವಾಗುವುದಿಲ್ಲ. ಆರಂಭದ ಒಂಭತ್ತು ನುಡಿಯ ಹಾಡಿನಲ್ಲಿ ಕೃಷ್ಣಾವತಾರದ ಉದ್ದೇಶ ಧೋರಣೆ, ಕೃಷ್ಣ ಜನನ ಬಾಲಲೀಲೆ ಕಂಸನ ವಧೆ ಅಷ್ಟಮಹಿಷಿಯರೊಂದಿಗೆ ವಿಲಾಸ ಇಷ್ಟೆಲ್ಲವನ್ನು ವಿವರಿಸಿ ಕೃಷ್ಣ ಕಥೆಯ ಚೌಕಟ್ಟನ್ನು ನಿರ್ಮಿಸಿದ್ದಾನೆ. ಈ ಭಾಗ ಪಾರಿಜಾತ ಪ್ರಸಂಗದ ಹಿನ್ನೆಲೆಯಲ್ಲಿ ಅನವಶ್ಯಕವಾಗಿದ್ದರೂ ಅನಪೇಕ್ಷಿತವಲ್ಲ. ಅಪರಾಳ ಪಾರಿಜಾತದಲ್ಲಿ ಆರಂಭದಲ್ಲಿಯೇ ಪಾರಿಜಾತ ಪುಷ್ಪ ಪ್ರವೇಶಿಸಿ ಕಥೆಯ ಬೆಳವಣಿಗೆಗೆ ಕಾರಣವಾಗುತ್ತದೆ. ನಾರದನು ದೇವಲೋಕದಿಂದ ಪಾರಿಜಾತ ಪುಷ್ಪತಂದು ಕೃಷ್ಣನಿಗೆ ಕೊಡುವುದು ಅದನ್ನವನು ರುಕ್ಮಿಣಿಗೆ ಮುಡಿಸುವುದು, ಈ ಸುದ್ದಿಯನ್ನು ನಾರದ ಸತ್ಯಭಾಮೆಗೆ ತಿಳಿಸಿ ಜಗಳ ಹಚ್ಚುವುದು ಇದೆಲ್ಲ ಅಪರಾಳ ತಮ್ಮಣ್ಣನ ಸೃಷ್ಟಿ. ಇದರಿಂದ ಪಾರಿಜಾತದ ಪ್ರಾಧಾನ್ಯತೆ ಸ್ಥಾಪಿತವಾಗಿದೆಯಲ್ಲದೆ ಕಥಾಚಲನೆಗೆ ಸಹಜಗತಿ ಪ್ರಾಪ್ತವಾಗಿದೆ.

೧೭೭ ಹಾಡುಗಳ ಅಪರಾಳ ತಮ್ಮಣ್ಣನ ಶ್ರೀ ಕೃಷ್ಣಪಾರಿಜಾತ ಮೂಲತಃ ಒಂದು ಹಾಡುಗಬ್ಬವೆಂಬುದನ್ನು ಮರೆಯಲಾಗದು. ಇಲ್ಲಿ ಕಥಾ ನಿರೂಪಣೆ ಗೌಣವಾಗಿ ವರ್ಣನೆ ಪ್ರಧಾನವಾಗಿದೆ. ಆ ವರ್ಣನೆ ಹೆಚ್ಚಾಗಿ ಕೃಷ್ಣನನ್ನು ಕುರಿತಾದದ್ದು. ಸಂದರ್ಭ ಸಿಕ್ಕಾಗಲೆಲ್ಲ ಕೃಷ್ಣನ ವರ್ಣನೆ. ಅವನ ಅವತಾರಗಳ ಮಹಿಮೆಯನ್ನು ಎಷ್ಟು ವಿಧವಾಗಿ ಹೊಗಳಿದರೂ ಕವಿಗೆ ತೃಪ್ತಿಯಿಲ್ಲ. ನೇರವಾದ ಸ್ತುತಿಯಲ್ಲದೆ ನಿಂದಾಸ್ತುತಿಯ

ಭಾಗಗಳೂ ತುಂಬಾ ಆಕರ್ಷಕವಾಗಿವೆ. ಹಾಡುಗಳು ದೀರ್ಘವಾಗಿರುವುದು ಸಾಮಾನ್ಯ. ಸನ್ನಿವೇಶವನ್ನು ವಿವರ ವಿವರವಾಗಿ ನಿರೂಪಿಸುವುದು ಅಪರಾಳ ತಮ್ಮಣ್ಣನ ವೈಶಿಷ್ಟ್ಯವಾಗಿದೆ. ಹಾಡುಗಳ ಪ್ರಮಾಣದಷ್ಟೇ ಲಯರಹಿತ ಗದ್ಯ ನಿರೂಪಣೆಗಳು (ಇವುಗಳಿಗೆ ಪದ್ಯ, ದ್ವಿಪದ್ಯ, ವಚನ ಎಂದು ಹೆಸರು) ಈ ಕೃತಿಯಲ್ಲಿದೆ. ಈ ಗದ್ಯ ಖಂಡಗಳು ನೀರಸ ಗದ್ಯಭಾಗಗಳಾಗಿರದೆ ಪದ್ಯ ಗಂಧಿ - ಲವಲವಿಕೆಯ ರಚನೆಗಳಾಗಿವೆ. ಅಪರಾಳ ತಮ್ಮಣ್ಣನ ಭಾಷೆ ಶಿಷ್ಟದ ಜಡತನವನ್ನು ನೀಗಿಕೊಂಡು ಆಡುಮಾತಿನ ಶೈಲಿಗೆ ತೀರಾ ಹತ್ತಿರವಾಗಿದೆ. ಅವನು ಪದವರಿತು ಬಳಸಿರುವ ನುಡಿಗಟ್ಟುಗಳು, ಗಾದೆಗಳು ಪದಪುಂಜ ಗಳು ಅಂದಿನ ಭಾಷಾ ಸ್ವರೂಪದ ತಿಳುವಳಿಕೆಗೆ ತುಂಬಾ ಸಹಕಾರಿಯಾಗಿವೆ. ಷಟ್ಪದಿ ಕಾವ್ಯಗಳನ್ನು ಹಾಗೂ ದಾಸ ಸಾಹಿತ್ಯವನ್ನು ಕರತಲಾಮಲಕ ಮಾಡಿಕೊಂಡಿರುವ ಅಪರಾಳ ತಮ್ಮಣ್ಣನ ಭಾಷೆಯಲ್ಲಿ ದೇಸಿಯ ಸೊಗಡು ವಿಜೃಂಭಿಸಿದೆ. ಮಧ್ವ ಸಿದ್ಧಾಂತದ ಬಗ್ಗೆ ಅವನಿಗಿರುವ ಶ್ರದ್ಧೆ - ಆಳವಾದ ಪಾಂಡಿತ್ಯಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಆದರೆ ಅವನ ಪಾಂಡಿತ್ಯ ಎಲ್ಲಿಯೂ ಕಾವ್ಯಗುಣವನ್ನು ನುಂಗಿ ಹಾಕಿಲ್ಲ. ಅಪರಾಳ ತಮ್ಮಣ್ಣ ಒಬ್ಬ ವಾಗ್ಗೇಯಕಾರನೆನ್ನಬಹುದು. ಸಾಹಿತ್ಯ - ಸಂಗೀತ ಎರಡರಲ್ಲಿಯೂ ಅವನು ಪರಿಣತನೆಂಬುದಕ್ಕೆ ಶ್ರೀಕೃಷ್ಣ ಪಾರಿಜಾತ ಸಾಕ್ಷಿಯಾಗಿದೆ. ಪ್ರತಿಯೊಂದು ಹಾಡಿಗೆ ರಾಗ ತಾಳಗಳ ನಿರ್ದೇಶನವಿದೆ. ಹಾಡಿನ ಭಾವಕ್ಕೆ ತಕ್ಕ ರಾಗಗಳನ್ನು ಸೂಚಿಸಲಾಗಿದೆ. ಸ್ವತಃ ಸಂಗೀತಗಾರನಿಗೆ ಮಾತ್ರ ಇಂಥ ರಚನೆಗಳು ಸಾಧ್ಯ. ಅವನು ಬಳಸಿರುವ ರಾಗಗಳಲ್ಲಿ ಕೆಲವು ಅಪರೂಪದ ಅಷ್ಟೊಂದು ಜನಪ್ರಿಯ ವಲ್ಲದ ರಾಗಗಲೂ ಇವೆ. ಇದು ಅವನ ರಾಗಗಳ ಬಗೆಗಿನ ಆಳವಾದ ತಿಳುವಳಿಕೆಯನ್ನು ತಿಳಿಸುತ್ತದೆ. ಕೆಲವು ಹಾಡುಗಳ ಆರಂಭಕ್ಕೆ ಬರುವ ವಚನ /ಗದ್ಯ/ಪದ್ಯ/ ಇವುಗಳಿಗೂ ರಾಗ ನಿರ್ದೇಶನವಿದೆ. ಆದರೆ ತಾಳಗಳನ್ನು ಸೂಚಿಸಿಲ್ಲ. ಅಂದರೆ ಈ ಗದ್ಯಖಂಡಗಳು ಲಯರಹಿತ ಆಲಾಪದೊಂದಿಗೆ ನಿರೂಪಿತವಾಗುವಂಥವು. ಮುಖ್ಯ ಹಾಡಿಗೆ ಇವು ಪೀಠಿಕೆಗಳಿದ್ದಂತಿವೆ. ಇವುಗಳ ನಂತರ ಪ್ರಾರಂಭವಾಗುವ ಹಾಡಿಗೆ ರಾಗ ಮತ್ತು ತಾಳಗಳೆರಡರ ಸೂಚನೆಯಿರುತ್ತದೆ. ಗದ್ಯ ಭಾಗವನ್ನು ಯಾವ ರಾಗದಲ್ಲಿ ನಿರೂಪಿಸ ಲಾಗುವುದೋ ಅದೇ ರಾಗದಲ್ಲಿ ಹಾಡು ಪ್ರಾರಂಭವಾಗುವುದು. ಇಂಥ ಔಚಿತ್ಯದ ಅರಿವು ಅಪರಾಳ ತಮ್ಮಣ್ಣನಿಗಿದೆ.

ಅಪರಾಳ ತಮ್ಮಣ್ಣನಿಗೆ ಕಾವ್ಯದ ಇನ್ನೊಂದು ಪ್ರಮುಖ ವೈಶಿಷ್ಟ್ಯವೆಂದರೆ

ದೇವತಾಪಾತ್ರಗಳ ಮಾನವೀಕರಣ. ಇಲ್ಲಿ ಕೃಷ್ಣ - ರುಕ್ಮಿಣಿ, - ಸತ್ಯಭಾಮೆಯರೆಲ್ಲ ಮಾನವ ಸಹಜ ಕೋಪ - ವಿರಹ - ಶೃಂಗಾರ - ಮತ್ಸರ ಗಳನ್ನೊಳಗೊಂಡಿದ್ದಾರೆ. ಆದ್ದರಿಂದಲೇ ಈ ಕೃತಿ ಜನಸಾಮಾನ್ಯರನ್ನು ಇಷ್ಟು ಪ್ರಮಾಣದಲ್ಲಿ ಆಕರ್ಷಿಸಿದೆ. ಕೊನೆಯಲ್ಲಿ ಸತ್ಯಭಾಮೆಯ ಅಹಂಕಾರ ನಿರ್ಮೂಲನ ಗೊಳ್ಳುವುದು ಮಾನವ ಜೀವನದ ಆದರ್ಶಕ್ಕೆ ಮಾರ್ಗದರ್ಶಿಯಾಗಿದೆ. ಇಲ್ಲಿಯ ಶ್ರೀಕೃಷ್ಣ ಮೇಲ್ನೋಟಕ್ಕೆ ಜಗನ್ನಿಯಾಮಕ ನಾದ ಭಗವಂತನಾಗಿದ್ದರೂ ಅಂತರಂಗದಲ್ಲಿ ಸತ್ಯಭಾಮೆಯ ದೀನಸ್ಥಿತಿಗೆ ಮನಕರಗಿ ಅವಳ ಮಂದಿರಕ್ಕೆ ಹೊರಡುವ ಪ್ರೇಮಮಯಿಯಾಗಿದ್ದಾನೆ. ಕವಿಗೆ ಪ್ರಣಯಕಲಹ - ವಿರಹ ತಾಪ - ಭಗವಂತನ ಕರುಣೆ - ಇವುಗಳ ಚಿತ್ರಣವೇ ಪ್ರಧಾನವಾಗಿರುವುದರಿಂದ ಯುದ್ಧದ ವರ್ಣನೆ ತೀರಾ ಗೌಣವಾಗಿದೆ. ತನಗೆ ಬೇಡಾದ ಇಂಥ ಸಂದರ್ಭಗಳನ್ನು ಕವಿ ಚುಟುಕಾಗಿ ಹೇಳಿ ಮುಗಿಸಿಬಿಡುತ್ತಾನೆ. ಕೃಷ್ಣ ಭಕ್ತಿಯೆಂಬ ಮೋಡಿಯ ಸುತ್ತ ಎಲ್ಲ ಪಾತ್ರಗಳು ಎಲ್ಲ ಸನ್ನಿವೇಶಗಳು ಸುತ್ತುವಂತೆ ಕವಿ ಕಾವ್ಯವನ್ನು ಸಂಯೋಜಿಸಿದ್ದಾನೆ.

ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ ಹಾಡುಗಬ್ಬ ರಂಗಭೂಮಿಗೆ ಬಂದುದು ಒಂದು ಯೋಗಾಯೋಗ. ಅದು ಕನ್ನಡ ರಂಗಭೂಮಿಯ ಸೌಭಾಗ್ಯದ ಕ್ಷಣ. ಬೆಳಗಾಂವಿ ಜಿಲ್ಲೆಯ ಗೋಕಾಕ ತಾಲೂಕಿನ ಕುಲಗೋಡ ಗ್ರಾಮದ ತಮ್ಮಣ್ಣನ ಪ್ರಯತ್ನದಿಂದಾಗಿ ಈ ರಸಘಟನೆ ಸಂಭವಿಸಿತು. ಅವನು ಪಾರಿಜಾತವನ್ನು ರಂಗಭೂಮಿಗೆ ತಂದುದು ೧೮೭೦ ರ ಸುಮಾರಿಗೆ. ಕುಲಗೋಡ ತಮ್ಮಣ್ಣ ಜಾಣ ರಸಿಕ - ಕವಿ - ಸಂಗೀತ ಗಾರನಾಗಿದ್ದ. ಪಕ್ಕದ ಮಹಾರಾಷ್ಟ್ರದ ರಂಗಭೂಮಿಯ ನಿಕಟ ಪರಿಚಯ ಅವನಿಗಿತ್ತು. ಅಲ್ಲಿಯ ಜನಪ್ರಿಯ ಜಾನಪದ ರಂಗ ಪ್ರಕಾರ ತಮಾಷಾ ಮತ್ತು ಅದೇ ಆಗ ಜನಮನ್ನಣೆಗಳಿಸುತ್ತಿದ್ದ ನಾಟಕಗಳು ತಮ್ಮಣ್ಣನ ಅಭಿರುಚಿಯನ್ನು ರೂಪಿಸಿದವು. ಬ್ರಾಹ್ಮಣರ ಮನೆಗಳಲ್ಲಿ ಹಾಡುಗಬ್ಬ - ಪಾರಾಯಣ ಗ್ರಂಥವಾಗಿ ಚಿರಪರಿಚಿತವಾಗಿದ್ದ ಅಪರಾಳ ತಮ್ಮಣ್ಣನ ಶ್ರೀಕೃಷ್ಣಪಾರಿಜಾತ-ಅವನನ್ನು ಆಕರ್ಷಿಸಿತು. ಸರಿ. ಅದನ್ನು ರಂಗರೂಪಕ್ಕೆ ಅಳವಡಿಸಲು ಅಣಿಯಾದನು.

ಕುಲಗೋಡ ತಮ್ಮಣ್ಣನ ರಂಗಭೂಮಿಯ ಪ್ರಾಯೋಗಿಕ ಜ್ಞಾನ ಮೆಚ್ಚು ವಂಥದು. ಒಂದು ಹಾಡುಗಬ್ಬ ಕಾವ್ಯವನ್ನು ರಂಗಪ್ರಯೋಗಕ್ಕೆ ಹೊಂದಿಸುವಲ್ಲಿ ಅವನು ಅನುಸರಿಸಿದ ಶ್ರಮ ಸ್ತುತ್ಯವಾಗಿದೆ. ಅವನು ಕೈಗೊಂಡ ಪ್ರಥಮ ಹಾಗೂ ಅತ್ಯಂತ ಮಹತ್ವದ ಕಾರ್ಯವೇನೆಂದರೆ ಮೂಲತಃ ಕಾವ್ಯದ ದೀರ್ಘ ಹಾಡುಗಳನ್ನು

ಸಂಕ್ಷಿಪ್ತಗೊಳಿಸಿದ್ದು. ಸನ್ನಿವೇಶಕ್ಕೆ ಅನುಕೂಲವಾಗುವಂಥ ಹಾಡುಗಳನ್ನು ಮಾತ್ರ ಅವನು ಆಯ್ದುಕೊಂಡ. ಹೀಗೆ ಆಯ್ದುಕೊಂಡ ಹಾಡುಗಳ ಆರಂಭದ ಒಂದೆರಡು ನುಡಿಗಳನ್ನು ಮಾತ್ರ ಇಟ್ಟು ಕೊಂಡನು. ಕಾವ್ಯ ಬೇರೆ ನಾಟಕ ಬೇರೆ ಎಂಬ ಸ್ಪಷ್ಟ ತಿಳುವಳಿಕೆ ಅವನಲ್ಲಿತ್ತು.

ಕುಲಗೋಡ ತಮ್ಮಣ್ಣನು ಕೈಗೊಂಡ ದೃಶ್ಯಗಳ ವಿಭಜನೆ - ಸಂಯೋಜನೆ - ಕಲ್ಪನೆ ಅವನ ರಂಗ ಪ್ರಯೋಗದ ಯಶಸ್ಸಿಗೆ ಬಹಳಷ್ಟು ಕಾರಮವಾಯಿತು. ಆರಂಭದಲ್ಲಿ ಬರುವ ಗಣಸ್ತುತಿ ಪ್ರಸಂಗ ತಮ್ಮಣ್ಣನ ಸ್ವಂತ ಕಲ್ಪನೆ - ಸೇರ್ಪಡೆ. ಪಾರಿಜಾತಕ್ಕೇ ವಿಶಿಷ್ಟವಾದ ದೃಶ್ಯವಿದು. ಗಣಪತಿಯ ಪೂಜೆಯ ವಿವರ ವಿಧಾನಗಳು ಭಾಗವತ ಮತ್ತು ಮರಿ ಭಾಗವತರ ಲವಲವಿಕೆಯ ಸಂಭಾಷಣೆಗಳ ಮೂಲಕ ನಿರೂಪಿತವಾಗಿವೆ. ಹಾಸ್ಯದ ಲೇಪನದೊಂದಿಗೆ ಸಾಗುವ ಈ ಪೂಜಾ ದೃಶ್ಯ ಮುಂದಿನ ಆಟಕ್ಕೆ ಸೂಕ್ತ ವಾತಾವರಣ ಕಲ್ಪಿಸುತ್ತದೆ. ಗಣಪತಿಯ ಪೂಜೆಯಲ್ಲಿ ಅವನ ಹೆಂಡಂದಿರಾದ ಸಿದ್ಧಿ ಬುದ್ಧಿಯರೂ ಪಾಲ್ಗೊಳ್ಳುವುದು ಇಲ್ಲಿಯ ಗಮನಾರ್ಹ ವೈಶಿಷ್ಟ್ಯವಾಗಿದೆ. ಗಣಸ್ತುತಿ ಸನ್ನಿವೇಶದ ಹಾಡುಗಳೆಲ್ಲ ಕುಲಗೋಡ ತಮ್ಮಣ್ಣನ ರಚನೆಗಳು.

ಕುಲಗೋಡ ತಮ್ಮಣ್ಣನು ಸೇರಿಸಿದ ಇನ್ನೊಂದು ಸನ್ನಿವೇಶವೆಂದರೆ ಗೊಲ್ಲತಿ ಭಾಗ. ಮಥುರಾ ಪುರದ ಗೊಲ್ಲತಿಯೊಬ್ಬಳು ಹಾಲು ಮೊಸರು ಮಾರಲು ಬರುವುದು ಅವಳನ್ನು ಬಾಲ ಗೋಪಾಲ ತಡೆದ ತುಂಟಾಟದಿಂದ ಪ್ರಣಯ ಚೇಷ್ಟೆಗೆ ತೊಡಗುವುದು ಇದು ಶ್ರೀ ಕೃಷ್ಣ ಪಾರಿಜಾತಕ್ಕೆ ಪೂರ್ವರಂಗ ದೃಶ್ಯವಾಗಿದೆ. ತಮ್ಮಣ್ಣನಿಗೆ ಈ ದೃಶ್ಯದ ಕಲ್ಪನೆ - ಪ್ರೇರಣೆ ಬಂದದ್ದು ಮರಾಠಿ ತಮಾಷಾದಿಂದ. ಅಲ್ಲಿ ಇದಕ್ಕೆ ಗೌಳಣ ಎಂದು ಹೆಸರು. ತಾನು ತಂದ ಹೈನದ ಪ್ರತಿಯೊಂದರ ವರ್ಣನೆ ಮಾಡುವ ಗೊಲ್ಲತಿಯ ಹಾಡುಗಳು ತಮ್ಮಣ್ಣನ ರಚನೆಗಳೆಂಬುದು ಮೇಲು ನೋಟಕ್ಕೆ ಸ್ಪಷ್ಟವಿದೆ. ಆದರೆ ಇದರಲ್ಲಿ ತಮ್ಮಣ್ಣನ ಸ್ವಂತ ರಚನೆಗಳಾವುವು ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಇವುಗಳ ಸಾಧ್ಯತೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಗೋಪಾಲ ಗೊಲ್ಲತಿಯರ ಮಧ್ಯೆ ನಡೆಯುವ ಸರಸ ಸಂಭಾಷಣೆಯ ಅಪ್ಪ ಸೆರಗಬಿಡೋ ಎಂಬ ಹಾಡು ಬ್ರಾಹ್ಮಣ ಮಹಿಳೆಯರು ಪರಂಪರೆಯಿಂದ ಹಾಡಿಕೊಂಡು ಬಂದಂಥದು. ಹಾಗೇ ಕುಲಗೋಡ ತಮ್ಮಣ್ಣನು ತನ್ನ ಕವಿ ಮಿತ್ರರಿಂದ ಕೆಲವು ಹಾಡುಗಳನ್ನು ಬರೆಸಿ ಸೇರಿಸಿಕೊಂಡನೆಂಬ ಹೇಳಿಕೆ ರೂಢಿಯಲ್ಲಿದೆ. ಏನೇ ಇರಲಿ, ತಮ್ಮಣ್ಣನ ಸಂಯೋಜನಾ ಪ್ರಜ್ಞೆ ಮೆಚ್ಚುವಂಥದು.

ಅಪರಾಳ ಪಾರಿಜಾತದ ಉತ್ತರಾರ್ಧವು ಕುಲಗೊಡ ತಮ್ಮಣ್ಣನಿಗೆ ಅನವಶ್ಯಕವೆನಿಸಿತು. ಕೊರವಂಜಿ ಸನ್ನಿವೇಶದ ನಂತರ ಕೃಷ್ಣನು ಸಹಜ ರೂಪದಲ್ಲಿ ಸತ್ಯಭಾಮೆಯಲ್ಲಿಗೆ ಹೋಗುವಷ್ಟಕ್ಕೆ ಅವನ ಪಾರಿಜಾತ ಕಥೆ ನಿಲ್ಲುತ್ತದೆ. ಮೂಲದಲ್ಲಿ ವಿಸ್ತೃತವಾಗಿ ಬಂದಿರುವ ನರಕಾಸುರ ಮುರರ ಸಂಹಾರ, ದೇವಲೋಕ ಪಯಣ ಪಾರಿಜಾತ ವೃಕ್ಷಕ್ಕಾಗಿ ಇಂದ್ರನೊಡನೆ ಕಾದಾಟ - ಇವೆಲ್ಲ ಪ್ರಸ್ತುತ ಪಾರಿಜಾತದಲ್ಲಿಲ್ಲ. ಪಾರಿಜಾತ ಪುಷ್ಪ ಒಂದು ನೆಪ ಮಾತ್ರವಾಗಿ ಸತ್ಯಭಾಮೆಯ ವಿರಹ - ಪ್ರತಿಷ್ಠೆಗಳು ಉರಿದೆದ್ದು ಶಕ್ತಿಯ ಉಪಾಸನೆಯ ಮೂಲಕ ಅವಳು ಶಾಂತಳಾಗುವುದು ಇಲ್ಲಿ ಮುಖ್ಯವೆನಿಸಿತು. ಪಾರಿಜಾತ ಪುಷ್ಪದ ಕೇಂದ್ರದ ಸುತ್ತ ಕೃಷ್ಣ ರುಕ್ಮಿಣಿಯರ ಸರಸ, ರುಕ್ಮಿಣಿ - ಸತ್ಯಭಾಮೆಯರ ಮತ್ಸರ, ಸತ್ಯಭಾಮೆಯ ಪೂಜಾನಿಷ್ಠೆ, ಕೊರವಂಜಿ ರೂಪಾಂತರದ ಮೂಲಕ ಕೃಷ್ಣನು ತೋರುವ ಮಾನವೀಯತೆ, ಸತ್ಯಭಾಮೆಯ ಇಷ್ಟಾರ್ಥ ಸಿದ್ಧಿ - ಇವೆಲ್ಲ ತಿರುಗುತ್ತಿರುವ ಅನುಭವವಾಗುತ್ತದೆ. ಒಂದು ಯಶಸ್ವಿ ರಂಗಪ್ರಯೋಗಕ್ಕೆ ಇದಿಷ್ಟು ಸಾಕು. ಮೂಲ ಕಾವ್ಯದಲ್ಲಿರುವುದನ್ನೆಲ್ಲ ರಂಗಭೂಮಿಯ ಮೇಲೆ ತರಲೇಬೇಕೆಂದು ಕುಲಗೋಡ ತಮ್ಮಣ್ಣ ಪ್ರಯತ್ನಿಸಿದ್ದರೆ ಅದು ಅತಿವ್ಯಾಪ್ತಿ ದೋಷದಿಂದ ನರಳುತ್ತಿತ್ತು. ಈ ದೃಷ್ಟಿಯಿಂದ ಅವನ ರಂಗಪ್ರಜ್ಞೆಯನ್ನು ಶ್ಲಾಘಿಸಲೇ ಬೇಕು. ಕುಲಗೋಡ ತಮ್ಮಣ್ಣನು ಸೇರಿಸಿದ ಇನ್ನೊಂದು ರಸವತ್ತಾದ ಸನ್ನಿವೇಶವೆಂದರೆ ಕೃಷ್ಣ - ರುಕ್ಮಿಣಿಯರ ಸರಸ ಸಲ್ಲಾಪ. ಹುಸಿ ಮುನಿಸಿನಲ್ಲಿರುವ ದಂಪತಿಗಳ ಮಧ್ಯೆ ನಡೆಯಬಹುದಾದ ಆರೋಪ ಪ್ರತ್ಯಾರೋಪ ಸುಸಂಬದ್ಧವಾಗಿ ಜೋಡಿಸಿ ಪ್ರೇಕ್ಷಕರು ಮುದಗೊಳ್ಳುವಂತೆ ದೃಶ್ಯ ನಿರ್ಮಾಣ ಮಾಡಿರುವ ಅವನ ಪ್ರತಿಭೆ ಮೆಚ್ಚುವಂಥದು. ಇಲ್ಲಿ ಅವನು ಸಮಕಾಲೀನ ಸಂಗೀತ ಲೋಕದಲ್ಲಿ ಜನಪ್ರಿಯವಾಗಿದ್ದ ಜಾವಳಿಗಳನ್ನು ಅರ್ಥಪೂರ್ಣವಾಗಿ ಸಂಯೋಜಿಸಿದ್ದಾನೆ. ಕೃಷ್ಣ - ರುಕ್ಮಿಣಿಯರು ಪೌರಾಣಿಕ ಪಾತ್ರಗಳೆನಿಸದೆ ಜನಸಾಮಾನ್ಯರ ಪ್ರತಿನಿಧಿಗಳಂತೆ ಮೂಡಿಬಂದುದರಿಂದ ಪ್ರೇಕ್ಷಕರಿಗೆ ತುಂಬಾ ಆತ್ಮೀಯರಾಗಿ ಬಿಡುತ್ತಾರೆ.

ನಾಟ್ಯ ಕ್ರಿಯೆಗೆ ಪೋಷಕವಾಗುವಂತೆ ಕುಲಗೋಡ ತಮ್ಮಣ್ಣನು ಕಲ್ಪಿಸಿರುವ ಮುತ್ತಿನಹಾರ ಪ್ರಸಂಗ ಗಮನಾರ್ಹವಾದುದು. ಸತ್ಯಭಾಮೆಯನ್ನು ಸಮಾಧಾನ ಪಡಿಸಲು ಕೃಷ್ಣನು ಪಾರಿಜಾತ ಪುಷ್ಪದ ಬದಲಾಗಿ ತನ್ನ ಕೊರಳೊಳಗಿರುವ ಮುತ್ತಿನ ಹಾರವೊಂದನ್ನು ಅವಳಿಗೆ ನೀಡುತ್ತಾನೆ. ನನ್ನ ಮೇಲೆ ನಿನಗೆ ನಿಜವಾಗಿಯೂ ಪ್ರೀತಿಯಿದ್ದರೆ

ಇದನ್ನು ಯಾರಿಗೂ ಕೊಡಬಾರದು ಎಂದು ಎಚ್ಚರ ಹೇಳುತ್ತಾನೆ. ಕೊರವಂಜಿ ವೇಷದಲ್ಲಿ ಹೋದಾಗ ಸಂಭಾವನೆಯಾಗಿ ಅದೇ ಮುತ್ತಿನಹಾರವನ್ನು ಅವಳಿಂದ ಪಡೆದುಕೊಂಡು ಬರುತ್ತಾನೆ. ಯಾರಿಗೂ ಕೊಡಬಾರದೆಂದು ಕೃಷ್ಣ ಹೇಳಿದ್ದು ನೆನಪಿಗೆ ಬಂದರೂ ಸತ್ಯಭಾಮೆ ಮನಸೋತು ಅದನ್ನು ಕೊಟ್ಟು ಬಿಡುತ್ತಾಳೆ. ನಂತರ ಕೃಷ್ಣನು ಸಹಜ ರೂಪದಲ್ಲಿ ತನ್ನಲ್ಲಿಗೆ ಬಂದಾಗ ಅವನ ಕೊರಳಲ್ಲಿ ಆ ಮುತ್ತಿನ ಹಾರ ನೋಡಿ ಅಚ್ಚರಿ ಪಡುತ್ತಾಳೆ. ಕೃಷ್ಣನೇ ಕೊರವಂಜಿಯ ವೇಷದಲ್ಲಿ ಬಂದು ಅದನ್ನು ಪಡೆದುಕೊಂಡು ಹೋದುದನ್ನು ತಿಳಿದು ಸಮಾಧಾನಗೊಳ್ಳುತ್ತಾಳೆ. ಇದು ಹಲವು ಅರ್ಥಗಳನ್ನು ಧ್ವನಿಸುತ್ತದೆ. ರುಕ್ಮಿಣಿಯಲ್ಲಿದ್ದ ಪಾರಿಜಾತ ಪುಷ್ಪವನ್ನು ಪಡೆದುಕೊಂಡು ಸತ್ಯಭಾಮೆಗೆ ನೀಡಲು ಅಸಹಾಯನಾದ ಕೃಷ್ಣ ಅದರ ಬದಲಾಗಿ ಮುತ್ತಿನ ಹಾರ ನೀಡಿ ತನ್ನ ಪ್ರೀತಿ ವ್ಯಕ್ತ ಮಾಡಿದ್ದಾನೆ. ನಂತರ ಸತ್ಯಭಾಮೆಯ ಅಹಂಕಾರ ನಿವಾರಿಸಲು ಅದನ್ನೇ ಅಸ್ತ್ರವಾಗಿ ಬಳಸಿಕೊಳ್ಳುವನು. ದಾಂಪತ್ಯದಲ್ಲಿ ಅಹಂಕಾರ ಪ್ರತಿಷ್ಠೆಗಳು ಒಳ್ಳೆಯವಲ್ಲವೆಂಬುದನ್ನು ಲೋಕಕ್ಕೆ ತಿಳಿಸಿಕೊಡುವ ಉದ್ದೇಶವೂ ಇಲ್ಲಿ ವ್ಯಕ್ತವಾಗಿದೆ. ಗೊತ್ತಿದ್ದೂ ಗೊತ್ತಿದ್ದು ಸತ್ಯಭಾಮೆ ಮುತ್ತಿನ ಹಾರವನ್ನು ಕೊರವಂಜಿಗೆ ಉಡುಗೊರೆಯಾಗಿ ಏಕೆ ಕೊಟ್ಟಳು? ಕೃಷ್ಣನ ವಸ್ತು ಕೃಷ್ಣನಿಗೆ ಸೇರಿತು. ರೂಪ ಬೇರೆಯಾಗಿದ್ದರೂ ಅಂತರಂಗದ ಸೆಳೆತ ಎಂಥ ಪ್ರಭಾವ ಬೀರುತ್ತದೆಂಬುದು ಇಲ್ಲಿ ಧ್ವನಿತವಾಗಿದೆ. ಕಾವ್ಯ ಓದುಗರ - ಕೇಳುಗರ ಮನಃಸ್ಥಿತಿ - ಬೇರೆ ನಾಟಕ ನೋಡುಗರ ಮನಃಸ್ಥಿತಿ ಬೇರೆ. ಕಾವ್ಯ ಓದುಗರ ಮನೋಭೂಮಿಕೆಯಲ್ಲಿ ಪಾತ್ರಗಳ ಸನ್ನಿವೇಶಗಳ ಚಿತ್ರಣ ಸ್ಪಷ್ಟಗೊಂಡಿರುತ್ತದೆ. ಕೇಳಿಕೆ ಅಧ್ಯಯನಗಳ ಮೂಲಕ ಅವರಿಗೆ ಕಥೆಯ ಹಿನ್ನೆಲೆ ತಿಳಿದಿರುತ್ತದೆ. ಅಂಥವರು ನೇರವಾಗಿ ಕಾವ್ಯ ಪಠಣದ ರಸಾಸ್ವಾದ ಅನುಭವಿಸಬಲ್ಲರು. ಆದರೆ ನಾಟಕ ನೋಡುವ ಪ್ರೇಕ್ಷಕರು ಜನಸಾಮಾನ್ಯರು. ಅವರಿಗೆ ಪಾತ್ರಗಳ ಪರಿಚಯ ಹಿನ್ನೆಲೆ ಅಷ್ಟೊಂದು ತಿಳಿದಿರುವುದಿಲ್ಲ. ಅದನ್ನು ತಿಳಿಸಿಕೊಡಬೇಕಾದುದು ನಾಟಕಕಾರನ ಕರ್ತವ್ಯ. ಈ ದೃಷ್ಟಿಯಿಂದ ನಮ್ಮ ಮೂಡಲ ಪಾಯ ದೊಡ್ಡಾಟದಲ್ಲಿ ಬರುವ ಪಾತ್ರ ಪರಿಚಯ ಸಂದರ್ಭ ಅರ್ಥಪೂರ್ಣವಾಗಿದೆ. ಈ ತಂತ್ರವನ್ನು ಕುಲಗೋಡ ತಮ್ಮಣ್ಣ ತನ್ನ ಪಾರಿಜಾತ ಪ್ರಯೋಗಕ್ಕೆ ಬಳಸಿಕೊಂಡಿದ್ದಾನೆ. ಕೃಷ್ಣ ರುಕ್ಮಿಣಿ ಸತ್ಯಭಾಮೆ ನಾರದ ಎಲ್ಲರೂ ತಮ್ಮ ತಮ್ಮ ಪರಿಚಯ ಮಾಡಿಕೊಳ್ಳುತ್ತಾರೆ. ಈ ಸಂದರ್ಭದ ಸ್ವಪರಿಚಯದ ಹಾಡುಗಳು ಆಯಾ ಪಾತ್ರದ ಸಮಗ್ರ ಪರಿಚಯ ನೀಡುತ್ತವೆ. ಈ ಕ್ರಮ ಜಾನಪದ

ಪ್ರೇಕ್ಷಕರನ್ನು ರಂಗ ಪ್ರಸಂಗದಲ್ಲಿ ತನ್ಮಯಗೊಳ್ಳಲು ಕಾರಣವಾಗಿದೆ.

ಕೃಷ್ಣ ಪಾರಿಜಾತ ಪ್ರಯೋಗದಲ್ಲಿ ದೂತಿಯ ಪಾತ್ರ ಅದ್ಭುತ ಪರಿಣಾಮವನ್ನುಂಟು ಮಾಡುತ್ತದೆ. ಅಪರಾಳ ಪಾರಿಜಾತದಲ್ಲಿ ದೂತಿಯ ಪಾತ್ರವಿದೆ. ಅವಳು ದೂತಿಯೆಂದರೆ ದೂತಿ ಮಾತ್ರ. ಸತ್ಯಭಾಮೆಯ ದೂತಿ ಕೃಷ್ಣನನ್ನು ಕರೆತರಲು ರುಕ್ಮಿಣಿಯ ಅರಮನೆಗೆ ಹೋಗುವುದು ಮತ್ತು ನಿರಾಶಳಾಗಿ ಹಿಂದಿರುಗಿ ಬರುವುದು ಮಾತ್ರ ಕಂಡು ಬರುತ್ತದೆ. ಕುಲಗೋಡ ಪಾರಿಜಾತದಲ್ಲಿ ದೂತಿ ಅತ್ಯಂತ ಪ್ರಧಾನ ಪಾತ್ರ. ಕೃಷ್ಣ ರುಕ್ಮಿಣಿ ಸತ್ಯಭಾಮೆ ಎಲ್ಲರಿಗೂ ದೂತಿ ಬೇಕು. ಸುದ್ದಿ ಸಂವಹ, ಸಂಧಾನ, ಸಮಾಧಾನ, ಸಹಕಾರ, ಸ್ನೇಹ ಎಲ್ಲದಕ್ಕೂ ಇಲ್ಲಿ ದೂತಿ ಅತ್ಯವಶ್ಯಕವಾಗಿದ್ದಾಳೆ. ಮೂಲದ ದೂತಿ ಪಾತ್ರದ ಇತಿಮಿತಿಯನ್ನು ಛೇದಿಸಿ ವ್ಯಾಪಕವಾದ ಸ್ವರೂಪವನ್ನಿಲ್ಲಿ ನೀಡಲಾಗಿದೆ. ಪಾತ್ರಗಳನ್ನು ಮಾತಾಡಿಸಿ ಪರಿಚಯಿಸಿಕೊಡುವುದು ಕೂಡ ದೂತಿಯ ಕೆಲಸ. ಅವಳ ಅಡ್ಡ ಮಾತುಗಳು ಹಾಸ್ಯ ಚಟಾಕಿಗಳು ಸಮಯೋಜಿತ ಸಲಹೆಗಳು ಸಂದರ್ಭವನ್ನು ತೊಳೆ ತೊಳೆಯಾಗಿ ಬಿಡಿಸಿಡುವ ಚಪರ ಮಾತುಗಳು ಪಾರಿಜಾತ ಪ್ರಯೋಗವನ್ನು ವ್ಯಾಪಿಸಿವೆ. ಪೌರಾಣಿಕ ಕಥಾ ಪ್ರಸಂಗವನ್ನು ತಟ್ಟನೇ ನೆಲಕ್ಕಿಳಿದುಕೊಂಡು ಬಂದು ಪ್ರೇಕ್ಷಕರ ಅನುಭವಕ್ಕೆ ಒಗ್ಗಿಸಿ ಮರುಕ್ಷಣ ಅದನ್ನು ಎಲ್ಲಿತ್ತೋ ಅಲ್ಲಿಗೆ ತಂದು ನಿಲ್ಲಿಸುವ ಜಾಣ್ಮೆ ದೂತಿಗಿದೆ. ಭಾಗವತ ಪಾತ್ರ ಮಾಡುವವನೇ ದೂತಿಯಾಗಿರುತ್ತಾನೆ. ಪುರುಷ ವೇಷಿ ಭಾಗವತ ದೂತಿಯ ಪಾತ್ರ ಕಲ್ಪನೆಯನ್ನು ಕೇವಲ ಅಭಿನಯದ ಮೂಲಕ ವ್ಯಕ್ತ ಪಡಿಸುವ ಪರಂಪರೆಯನ್ನು ಪಾರಿಜಾತ ಪ್ರೇಕ್ಷಕರು ಒಪ್ಪಿಕೊಂಡಿದ್ದಾರೆ. ಸೂತ್ರ ಧಾರ ವಿದೂಷಕ (ಸಾರಥಿ) ಸಖಿ ಎಲ್ಲವುಗಳ ಸಮ್ಮಿಶ್ರಣವಾಗಿರುವ ಪಾರಿಜಾತ ದೂತಿಯ ಪಾತ್ರ ಭಾರತೀಯ ರಂಗಭೂಮಿಯಲ್ಲಿಯೇ ಅಪರೂಪದ ಉದಾಹರಣೆ ಯಾಗಿದೆ.

ಅಪರಾಳ ಪಾರಿಜಾತ ಒಂದು ಹಾಡುಗಬ್ಬ. ಅದನ್ನು ಬ್ರಾಹ್ಮಣ ಸ್ತ್ರೀಯರು ಪಾರಾಯಣ ಮಾಡುತ್ತಿದ್ದರು. ಅಂದರೆ ಪಾರಿಜಾತದ ಪ್ರತಿಯೊಂದು ಹಾಡನ್ನೂ ಅವರು ಹಾಡುತ್ತಿದ್ದರು. ಈ ಹಾಡುಗಾರಿಕೆಯೇ ಕುಲಗೋಡ ತಮ್ಮಣ್ಣನನ್ನು ಆಕರ್ಷಿಸಲು ಸಾಧ್ಯ. ಆದರೆ ಸದರೀ ಪಾರಿಜಾತವನ್ನು ರಂಗಭೂಮಿಗೆ ಅಳವಡಿಸಿದಾಗ ಈ ಪಾರಾಯಣ ಹಾಡುಗಾರಿಕೆ ಪ್ರಯೋಜನಕ್ಕೆ ಬರಲಿಲ್ಲ. ಅದಕ್ಕಿರುವ ಉದ್ದೇಶ ಇತಿ ಮಿತಿಗಳೇ ಬೇರೆ. ಇದನ್ನು ಅರ್ಥ ಮಾಡಿಕೊಂಡ ಕುಲಗೋಡ ತಮ್ಮಣ್ಣನು ಹೊಸ

ಸಂಗೀತ ಶೈಲಿಯನ್ನು ಪಾರಿಜಾತಕ್ಕೆ ಅಳವಡಿಸಿದನು. ಹಾಡುಗಳು ರಂಜನೀಯವಾಗಿರುವಂತೆ ಪ್ರಯತ್ನಿಸಿದಳು. ಸಮಕಾಲೀನ ನಾಟ್ಯ ಸಂಗೀತ ಅವನ ಮೇಲೆ ಗಾಢವಾದ ಪ್ರಭಾವ ಬೀರಿದ್ದರಿಂದ ಅದೇ ಮಾದರಿಗಳನ್ನು ಸ್ವೀಕರಿಸಿದ. ಮೂಲದ ಕರ್ನಾಟಕ ಶೈಲಿಯ ಹಾಡುಗಳೊಂದಿಗೆ ಅವನು ಹೊಸ ರುಚಿಯನ್ನು ನೀಡುತ್ತಿದ್ದ ಹಿಂದೂಸ್ತಾನಿ ಚೀಜುಗಳ ಧಾಟಿಗಳನ್ನು ಅಳವಡಿಸಿಕೊಂಡು ಪಾರಿಜಾತ ಸಂಗೀತಕ್ಕೆ ವೈಶಿಷ್ಟ್ಯವನ್ನು ಸ್ಥಿರೀಕರಿಸಿದ. ಹಾಡುಗಳ ಆದಿ ಮಧ್ಯ ಅಂತ್ಯಗಳಲ್ಲಿ ಬರುವ ಚಲ್ತಿ ಮತ್ತು ಮುಕ್ತಾಯಗಳು ಶಾಸ್ತ್ರೀಯ ಗಾಯನ ಶೈಲಿಯನ್ನು ಜಾನಪದೀಯಗೊಳಿಸಿ ಪ್ರೇಕ್ಷಕರಿಗೆ ಮುದ ನೀಡಿದವು.

ಪಾರಿಜಾತವನ್ನು ರಂಗ ಪ್ರಯೋಗಕ್ಕೆ ಅಳವಡಿಸಿದವನು ಕುಲಗೋಡ ತಮ್ಮಣ್ಣನೆಂಬುದು ನಿಜ. ಆದರೆ ಇಂದು ಪ್ರಯೋಗಗೊಳ್ಳುತ್ತಿರುವ ಪಾರಿಜಾತ ತಮ್ಮಣ್ಣನೊಬ್ಬನ ಸೃಷ್ಟಿಯಲ್ಲ. ಕಳೆದ ಒಂದು ಶತಮಾನದ ಅವಧಿಯಲ್ಲಿ ನೂರಾರು ಜನ ಪ್ರತಿಭಾವಂತ ಕಲಾವಿದರು ಪಾರಿಜಾತವನ್ನು ಬೆಳೆಸುತ್ತ ಬಂದಿದ್ದಾರೆ. ತಮಗೆ ಸರಿ ಕಂಡಂತೆ ಕಥೆಯನ್ನು ಹಿಗ್ಗಿಸುವ ಸಂಕ್ಷೇಪಿಸುವ ಕಾರ್ಯ ನಿರ್ವಹಿಸಿದ್ದಾರೆ. ಅನೇಕ ಹಾಡು ಸನ್ನಿವೇಶಗಳು ಹೊಸದಾಗಿ ಸೇರಿರುವುದೂ ಉಂಟು. ಇಷ್ಟೆಲ್ಲ ಇರುವುದರಿಂದ ಇಂದಿನ ಪಾರಿಜಾತ ಸಮೂಹ ಸೃಷ್ಟಿಯ ಪ್ರಯೋಗವೆಂದು ಹೇಳಲೇ ಬೇಕಾಗುತ್ತದೆ.

ಈ ಸಂಚಿಕೆಯ ಲೇಖಕರ ವಿಳಾಸಗಳು

೧. ಶ್ರೀ ಟಿ. ಯಲ್ಲಪ್ಪ
ಉಪನ್ಯಾಸಕರು
ಪ್ರಥಮ ದರ್ಜೆ ಕಾಲೇಜು
ಬಂಗಾರ ಪೇಟೆ, ಕೋಲಾರ ಜಿಲ್ಲೆ

೨. ಡಾ|| ಹಂ.ಪ. ನಾಗರಾಜಯ್ಯ
ನಿವೃತ್ತ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು - ೫೬೦ ೦೫೬

೩. ಡಾ || ಬಸವಲಿಂಗ ಸೊಪ್ಪಿಮಠ
ಮುಖ್ಯಸ್ಥರು ಕನ್ನಡ ವಿಭಾಗ
ಎಲ್.ವಿ.ಡಿ. ಕಾಲೇಜು, ರಾಯಚೂರು - ೫೮೮ ೧೦೧

೪. ಡಾ || ಎಂ.ಪಿ. ಭುವನೇಶ್ವರ ಪ್ರಸಾದ್
ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ
ವಿವೇಕಾನಂದ ಪದವಿ ಕಾಲೇಜು
ರಾಜಾಜಿನಗರ ಎರಡನೇ ಹಂತ, ಬೆಂಗಳೂರು - ೫೫

೫. ಡಾ || ವಿಜಯಕುಮಾರ ಮಹಾನುಭಾವಿಗಳು
ಸಿದ್ಧ, ೬೦೮, ೭ನೇ ಮುಖ್ಯರಸ್ತೆ
೩ನೇ ಹಂತ, ೩ನೇ ಭಾಗ
ಬಸವೇಶ್ವರ ನಗರ, ಬೆಂಗಳೂರು

೬. ಶ್ರೀ ಸಾಸಲು ಜೆ. ವಿಶ್ವನಾಥ್
ಕನ್ನಡ ಉಪನ್ಯಾಸಕ
ಮರಿಯಪ್ಪ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ ೨ನೇ ಹಂತ
ಬೆಂಗಳೂರು - ೨೧

೭. ಶ್ರೀ ಕೆ.ಪಿ. ದೊಡ್ಡಿ ಎಂ. ಭೈರೇಗೌಡ
ನಂ. ೧೯೯, ೩ನೇ ತಿರುವು, ೮ನೇ ಮುಖ್ಯರಸ್ತೆ
ಆರ್.ಪಿ.ಸಿ ಬಡಾವಣೆ
ಬೆಂಗಳೂರು - ೪೦

೮. ಶ್ರೀ ಎಂ.ಜಿ. ಮಂಜನಾಥ
ಕನ್ನಡ ಉಪನ್ಯಾಸಕರು
ಸರ್ಕಾರಿ ಬಾಲಕರ ಕಾಲೇಜು
ಕೋಲಾರ

೯. ಶ್ರೀ ಆರ್. ಜಗದೀಶ್
ಕನ್ನಡ ಉಪನ್ಯಾಸಕರು
ಸರ್ವೋದಯ ಪ್ರಥಮ ದರ್ಜೆ ಕಾಲೇಜು
ಶ್ರೀರಾಮಪುರ, ಬೆಂಗಳೂರು

೧೦. ಶ್ರೀ ಎಸ್. ಶಿವಣ್ಣ
ಸಂಪಾದಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೧. ಶ್ರೀ ಹೊ.ನ. ನೀಲಕಂಠೇಗೌಡ
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಬಂಗಾರಪೇಟೆ

೧೨. ಪ್ರೊ || ಎಚ್.ವಿ. ಶ್ರೀನಿವಾಸ ಶರ್ಮ
ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ
(ಎಂ.ಇ.ಎಸ್. ಕಾಲೇಜು)
೨೦೫: ೯, ೧೧ನೇ ಮುಖ್ಯರಸ್ತೆ
ಸುಬ್ರಮಣ್ಯ ನಗರ
ಬೆಂಗಳೂರು - ೫೬೦ ೦೨೧

೧೩. ಡಾ || ಎಸ್.ಎನ್. ಶಿವರುದ್ರಸ್ವಾಮಿ
ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಪಿ.ಎ. ಕಾಲೇಜು, ತಿಪಟೂರು - ೫೭೨ ೨೦೨

೧೪. ಡಾ|| ಬಸವರಾಜ ಮಲಶೆಟ್ಟಿ
ವಿಜಯನಗರ ಕಾಲೇಜು
ಹೊಸಪೇಟೆ - ೫೮೩ ೨೦೧

ವಿವರಗಳಿಗೆ ವ್ಯವಹರಿಸಿ:

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056